ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 9 ಸೋಮವಾರ 2024

ಸಂಪುಟ: 45 | ಸಂಚಿಕೆ: 144 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇದು ಬೇಲಿಯೇ ಎದ್ದು ಹೊಲ ಮೇಯ್ದಂತೆ; ಹೆಚ್.ವಿ. ರಾಜೀವ್ ಮುಡಾ ಅಧ್ಯಕ್ಷರಾಗಿದ್ದಾಗ

ಅಕ್ರಮವಾಗಿ 848 ನಿವೇಶನ ಬಿಡುಗಡೆ, ಖಾತೆ ನೋಂದಣಿ

- ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಅಂದಿನ ಮುಡಾ ಆಯುಕ್ತ ನಟೇಶ್‌ರಿಂದ ಪತ್ರ
- ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸರಿಂದ ಮಾಹಿತಿ ಬಹಿರಂಗ
- ಅಕ್ರಮ ಬಡಾವಣೆ ಉಳಿಸಿಕೊಳ್ಳಲು ಕಾಂಗ್ರೆಸ್ ಸೇರಿದ ರಾಜೀವ್
- ಈ ಕುರಿತು ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಆಗ್ರಹ



ಮುಡಾ ಕಚೇರಿ



ಶ್ರೀವತ್ಸ



ಹೆಚ್.ವಿ.ರಾಜೀವ್



ನಟೇಶ್

ಮೈಸೂರು, ಸೆ. 8(ಆರ್‌ಕೆ)– ಹೆಚ್.ವಿ.ರಾಜೀವ್ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷರಾಗಿದ್ದ ವೇಳೆ ಸರ್ಕಾರದ ಆದೇಶ ನಿರ್ದೇಶನ ಹಾಗೂ ನ್ಯಾಯಾಲಯದ ತಡೆಯಾಜ್ಞೆ ಉಲ್ಲಂಘಿಸಿ, ತಾವು ಅಧ್ಯಕ್ಷರಾಗಿರುವ ಜ್ಞಾನ ಗಂಗಾ ಗೃಹ ನಿರ್ಮಾಣ ಸಹಕಾರ ಸಂಘದ 848 ನಿವೇಶನಗಳನ್ನು ಬಿಡುಗಡೆ ಮಾಡಿ, ಒಂದೆರಡು ದಿನದಲ್ಲೇ ಖಾತೆ ನೋಂದಾಯಿಸಿದ್ದಾರೆ ಎಂದು ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಆರೋಪಿಸಿದರು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಹೆಚ್.ವಿ. ರಾಜೀವ್ ಅಕ್ರಮವಾಗಿ ನಿವೇಶನಗಳ ಬಿಡುಗಡೆ ಹಾಗೂ ಖಾತೆ ನೋಂದಾವಣಿ ಮಾಡಿರುವ ಬಗ್ಗೆ ಅಂದಿನ ಮುಡಾ ಆಯುಕ್ತರಾಗಿದ್ದ ಡಾ. ಡಿ.ಬಿ. ನಟೇಶ್ ಅವರು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದರು ಎಂದ ಅವರು,

■9ನೇ ಪುಟಕ್ಕೆ

ಮುಡಾ ಪ್ರಕರಣ

ಇಂದು ಸಿಎಂ ಅರ್ಜಿ ಮತ್ತೆ ವಿಚಾರಣೆ



ಬೆಂಗಳೂರು, ಸೆ.8– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕೇಸಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮ ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ಸೋಮವಾರ ಹೈಕೋರ್ಟ್‌ನಲ್ಲಿ ನಡೆಯಲಿದೆ.

ಸರ್ಕಾರದ ಪರ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಲಿದ್ದಾರೆ. ಇದಲ್ಲದೇ, ಸೆಪ್ಟೆಂಬರ್ 12ರಂದು ಕೂಡ ವಾದ ಸರಣಿ ಮುಂದುವರೆಯಲಿದೆ. ಅಂದು ಸಿಎಂ ಪರ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಲಿದ್ದಾರೆ. ಹೀಗಾಗಿ ಸೋಮವಾರ ಹೈಕೋರ್ಟ್ ಆದೇಶ ನೀಡುವ ಸಾಧ್ಯತೆ ಕಡಿಮೆ ಇದೆ. ಈ ಮಧ್ಯೆ, ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಪಾತ್ರ ಇಲ್ಲ. ಹೀಗಾಗಿ ಕೋರ್ಟ್‌ನಲ್ಲಿ

■9ನೇ ಪುಟಕ್ಕೆ

SSLC ಘಟಕ ಪರೀಕ್ಷೆಗೆ 'ವೆಬ್‌ಕಾಸ್ಟಿಂಗ್' ಕಣ್ಗಾವಲು

ಬೆಂಗಳೂರು, ಸೆ.8– ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಯಾ ಶಾಲೆಗಳು ನಡೆಸುವ ಘಟಕ ಪರೀಕ್ಷೆಗಳಿಗೂ ಇನ್ನು ಮುಂದೆ 'ವೆಬ್‌ಕಾಸ್ಟಿಂಗ್' ಕಣ್ಗಾವಲು ಇರಲಿದೆ.

ಸಾಮೂಹಿಕ ನಕಲು ತಡೆಯಲು 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಬಾರಿ ಪರಿಚಯಿಸಿದ ವೆಬ್‌ಕಾಸ್ಟಿಂಗ್ ವ್ಯವಸ್ಥೆಯಿಂದಾಗಿ ಫಲಿತಾಂಶ ಕುಸಿದಿತ್ತು. ಫಲಿತಾಂಶದಲ್ಲಿನ ಭಾರಿ ಕುಸಿತ ಚರ್ಚೆಗೆ ಗ್ರಾಸವಾದರೂ, ಹೆಚ್ಚು ಫಲಿತಾಂಶ ಪಡೆಯಲು ಇದುವರೆಗೆ ಅನುಸರಿಸುತ್ತಿದ್ದ ವಾಮಮಾರ್ಗಗಳನ್ನು ಅನಾವರಣಗೊಳಿಸಿತ್ತು. ಕಳೆದೆರಡು ದಶಕಗಳಿಂದ ಹೆಚ್ಚಿನ ಫಲಿತಾಂಶ ಎಂಬ ಪ್ರತಿಷ್ಠೆಯ ಬೆನ್ನು ಹತ್ತಿದ ಶಿಕ್ಷಣ

■9ನೇ ಪುಟಕ್ಕೆ

ಪ್ಯಾರಾಲಿಂಪಿಕ್ಸ್ 2024

ದಾಖಲೆಯ 29 ಪದಕಗಳೊಂದಿಗೆ ಭಾರತದ ಪ್ಯಾರಾಲಿಂಪಿಕ್ಸ್ ಅಭಿಯಾನ ಅಂತ್ಯ

ಪ್ಯಾರಿಸ್, ಸೆ.8– ಪ್ಯಾರಿಸ್‌ನಲ್ಲಿ ಮುಕ್ತಾಯವಾದ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಐತಿಹಾಸಿಕ ಪ್ರದರ್ಶನ ನೀಡಿದ್ದು, ಇದೇ ಮೊದಲ ಬಾರಿಗೆ ಗರಿಷ್ಠ ಪದಕಗಳೊಂದಿಗೆ ಕ್ರೀಡಾಕೂಟದಲ್ಲಿ ತನ್ನ ಅಭಿಯಾನ ಮುಕ್ತಾಯಗೊಳಿಸಿದೆ.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಪ್ರಯಾಣ ಅಂತ್ಯಗೊಂಡಿದೆ. ಅಥ್ಲೀಟ್ ಪೂಜಾ ಓಜಾ, ಮಹಿಳೆಯರ ಪ್ಯಾರಾ ಕ್ಯಾನೋ KL1 200 ಮೀಟರ್ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆಯುವ ಮೂಲಕ

■9ನೇ ಪುಟಕ್ಕೆ

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ




ಚಾಮುಂಡೇಶ್ವರಿ ನಗರ ಮಂಡಲದಿಂದ ಬಿಜೆಪಿ ಸದಸ್ಯತ್ವ ಅಭಿಯಾನ ನಡೆಯಿತು.

ಮೈಸೂರು, ಸೆ.8–ಬಿಜೆಪಿ ಸದಸ್ಯತ್ವ ಅಭಿಯಾನವನ್ನು ಚಾಮುಂಡೇಶ್ವರಿ ನಗರ ಮಂಡಲದಿಂದ ರಾಮಕೃಷ್ಣನಗರದ ಸಾಯಿಬಾಬಾ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಆರಂಭಿಸಲಾಯಿತು.

ನಂತರ ಮನೆಮನೆಗಳಿಗೆ ತೆರಳಿ ಸಾರ್ವಜನಿಕರನ್ನು ಭೇಟಿಯಾಗಿ ಮಿಸ್ಸ್ ಕಾಲ್ ಮೂಲಕ ಬಿಜೆಪಿ ಸದಸ್ಯರಾಗುವ ಬಗೆಯನ್ನು ತಿಳಿಸಿ, ಲಿಂಕ್ ಹಾಗೂ OTP ಮೂಲಕ ಅರ್ಜಿ ಭರಿಸಿ ನೂರಾರು ಕುಟುಂಬಗಳ ಸದಸ್ಯರನ್ನಾಗಿಸಲಾಯಿತು. ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ಪ್ರಧಾನ ಕಾರ್ಯದರ್ಶಿಗಳಾದ ಆರ್.ಸೋಮಶೇಖರ್, ಈರೇಗೌಡ, ಉಪಾಧ್ಯಕ್ಷರಾದ ಹೆಚ್.ಜಿ.ರಾಜಮಣಿ, ಬಿ.ಸಿ.ಶಶಿಕಾಂತ್, ಶಿವಕುಮಾರ್, ಕಾಂತರಾಜ ಅರಸ್, ಎಸ್.ಸಿ.ಮೋರ್ಚಾ ನಗರ ಉಪಾಧ್ಯಕ್ಷ ಎನ್.ಪ್ರತಾಪ್, ಮಂಡಲ ಕಾರ್ಯದರ್ಶಿಗಳಾದ ವಿನುತ, ಕಲಾವತಿ, ಮೋರ್ಚಾಗಳ ಪದಾಧಿಕಾರಿಗಳಾದ ಚಂದನ್‌ಗೌಡ, ಚಂದ್ರಶೇಖರಸ್ವಾಮಿ ಶುಭಶ್ರೀ, ರಮಾಬಾಯಿ, ನವೀನ, ಮಹಾದೇವ, ರಾಧಾ ಮುತಾಲಿಕ್, ದೇವರಾಜು, ರಾಮಕೃಷ್ಣಪ್ಪ ಹಾಗೂ ಇತರರು ಭಾಗವಹಿಸಿದ್ದರು.

ಬಳೆ ತೊಡಿಸುವ ಕಾರ್ಯಕ್ರಮ...



ಮೈಸೂರಿನ ಪಡುವಾರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಗಣೇಶ ಮತ್ತು ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಗೌರಿ–ಗಣೇಶ ಹಬ್ಬದ ಪ್ರಯುಕ್ತ ಕೆ.ಹರೀಶ್‌ಗೌಡ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಹೆಣ್ಣು ಮಕ್ಕಳಿಗೆ ಬಳೆ ತೊಡಿಸುವ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಭಾಗವಹಿಸಿದ್ದರು. ಟ್ರಸ್ಟಿನ ಪದಾಧಿಕಾರಿಗಳಾದ ಪ್ರೊ.ರಾಮಚಂದ್ರು, ರಾಮಸ್ವಾಮಿ, ಮಾಂಯಣ್ಣ, ರುಚಿ ಮಹದೇವು, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಜೆ.ಯೋಗೇಶ್, ಸ್ಥಳೀಯ ಮುಖಂಡರಾದ ಟಿ.ಕುಮಾರ್, ನಂಜಪ್ಪ, ಕುಮಾರ್, ಮಹದೇವ್, ಸೌಭಾಗ್ಯಮ್ಮ, ಸ್ವಾಮಣ್ಣ ಮತ್ತಿತರರು ಹಾಜರಿದ್ದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸಹ ಪ್ರಾಧ್ಯಾಪಕ ಡಾ.ಮೋಹನ್ ಕೃಷ್ಣ ರೆಕಾರ್ಡ್!



ಮೈಸೂರು, ಸೆ.8(ಎಂಕೆ)– ವಿದ್ಯಾವರ್ಧಕ ಕಾಲೇಜ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎಸ್.ಎ.ಮೋಹನ್ ಕೃಷ್ಣ ಅವರು ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಆಯ್ಕೆಯಾಗಿದ್ದಾರೆ.

ಕಳೆದ 20 ವರ್ಷಗಳಿಂದ ಅಧ್ಯಾಪಕರಾಗಿ ಕೆಲಸ ಮಾಡುತ್ತಿರುವ ಅವರು, ಅತ್ಯಧಿಕ ಸಂಖ್ಯೆಯ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಆಯ್ಕೆಯಾಗಿದ್ದಾರೆ. ಸಂಶೋಧನಾ ಪ್ರಕಟಣೆಗಳು, ವೃತ್ತಿಪರ ಸಂಸ್ಥೆಗಳಲ್ಲಿ ಅತ್ಯಧಿಕ ಸದಸ್ಯತ್ವ ಹೊಂದಿದ್ದು, 200ಕ್ಕೂ ಹೆಚ್ಚು ಅಂತರರಾಷ್ಟ್ರೀಯ ನಿಯತಕಾಲಿಕಗಳಿಗೆ ಸಂಪಾದಕೀಯ ಮಂಡಳಿಯ ಸದಸ್ಯರಾಗಿ, 1000ಕ್ಕೂ ಹೆಚ್ಚು ಕಡೆ ಭಾಷಣಕಾರರಾಗಿ ಭಾಗವಹಿಸಿದ್ದಾರೆ. ಪುಸ್ತಕ ಪ್ರಕಟಣೆ, 2000ಕ್ಕೂ ಹೆಚ್ಚು ಆನ್‌ಲೈನ್ ಸರ್ಟಿಫಿಕೇಷನ್ಸ್ ಮತ್ತು 3000ಕ್ಕೂ ಹೆಚ್ಚು ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರ ಈ ಎಲ್ಲ ಸಾಧನೆಯ ಗುರ್ತಿಸಿ, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಆಯ್ಕೆ ಮಾಡಲಾಗಿದೆ.

ಸೆ.14ರಂದು ನವದೆಹಲಿಯಲ್ಲಿ ನಡೆಯುವ ಘಟಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪತ್ರ ಪಡೆಯಲಿದ್ದಾರೆ.

ನಾಳೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು, ಸೆ.8(ಎಸ್‌ಪಿಎನ್)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2 ಹಾಗೂ 3ನೇ ಹಂತದ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ 66/11ಕೆವಿ ವಿತರಣ ಕೇಂದ್ರದಲ್ಲಿ ಸೆ.10ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜು ನಿಲುಗಡೆ ಆಗಲಿದೆ. ಹಾಗಾಗಿ ಸೆ.10 ಮತ್ತು 11ರಂದು ಮೈಸೂರಿನ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆಜಿ.ಕೊಪ್ಪಲು, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 2, 3ನೇಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರ ವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ, ಎಬಿಸಿ ಬಡಾವಣೆ, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್ ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್, ವಿದ್ಯಾರಣ್ಯಪುರಂ ಕೃಷ್ಣಮೂರ್ತಿಪುರಂ, ಜನತಾನಗರ, ಕೆಎಚ್‌ಬಿ ಕಾಲೋನಿ, ಹೂಟಗಳ್ಳಿ ಹಾಗ ಇತರೆ ಬಡಾವಣೆಗಳಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಪಶ್ಚಿಮ ವಿಭಾಗ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೆಂಕಾಕ್ ಸಿಲಾತ್: 12 ಪದಕ ಗೆದ್ದ ಮೈಸೂರು ಸ್ಪರ್ಧಿಗಳು



ಪೆಂಕಾಕ್ ಸಿಲಾತ್ ಕ್ರೀಡಾಕೂಟದಲ್ಲಿ ಮೈಸೂರಿನ ಸ್ಪರ್ಧಿಗಳು 12 ಪದಕ ಗಳಿಸಿದ್ದಾರೆ.

ಮೈಸೂರು, ಸೆ.8– ಬೆಂಗಳೂರಿನ ಸರ್ಜಾಪುರದಲ್ಲಿ ನಡೆದ 10ನೇ ರಾಜ್ಯ ಪೆಂಕಾಕ್ ಸಿಲಾತ್ ಕೀಡಾಕೂಟದಲ್ಲಿ (ಪೆಂಕಾಕ್ ಸಿಲಾತ್ ಕರಾಟೆ ಮಾದರಿ ಕ್ರೀಡಾಕೂಟ) ಪಾಲ್ಗೊಂಡಿದ್ದ ಮೈಸೂರಿನ ಸ್ಪರ್ಧಿಗಳು 12 ಪದಕಗಳನ್ನು ಗಳಿಸಿ, 3ನೇ ಸ್ಥಾನ ಪಡೆದರು. ಅಲ್ಲದೆ ಮಹಿಳಾ ಕರಾಟೆ ಪಟುಗಳು ಖೇಲೋ ಇಂಡಿಯಾ ಸ್ಪರ್ಧೆಗೆ ಅರ್ಹತೆ ಪಡೆದಿದ್ದಾರೆ.

ಬಾಲಕರ ವಿಭಾಗದಲ್ಲಿ ಹರ್ಷ 2 ಚಿನ್ನದ ಪದಕ, ಸೂರಜ್, ಸಮರ್ಥ್, ರವಿ ತಲಾ 1 ಬೆಳ್ಳಿ ಪದಕ, ಶ್ರೀ ಎಸ್. 1 ಕಂಚಿನ ಪದಕ, ಬಾಲಕಿಯರ ವಿಭಾಗದಲ್ಲಿ ತುಷಿಕಾ ಎಸ್.ಶಾರದಾ, ರಾಘವಿ ತಲಾ 2 ಚಿನ್ನದ ಪದಕ, ಯಾದವಿ 1 ಚಿನ್ನದ ಪದಕ ಗೆದ್ದು, ಖೇಲೋ ಇಂಡಿಯಾ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ತರಬೇತುದಾರರಾದ ಎಂ.ಎಲ್. ಮೋಹನ್‌ರಾಜ್, ಸಿ.ಮಹದೇವ್, ಎನ್.ಯೋಗೇಶ್ ಪಾಲ್ಗೊಂಡಿದ್ದರು.

ಇಂದಿನಿಂದ ಉಚಿತ ಸೈನಸೈಟಿಸ್ ತಪಾಸಣಾ ಶಿಬಿರ

ಮೈಸೂರು,ಸೆ.8–ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯ ವತಿಯಿಂದ ಸೆ.9ರಿಂದ 14ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಉಚಿತ ಸೈನಸೈಟಿಸ್ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಮೂಗು ಸೋರುವಿಕೆ, ನೆಗಡಿ, ತಲೆಭಾರ, ತಲೆನೋವು, ಗಂಟಲುಕೆರೆತ, ಗಂಟಲುನೋವು ಮುಂತಾದ ಸಮಸ್ಯೆಗಳಿರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ಶಿಬಿರದ ಪ್ರಯೋಜನ ಪಡೆದುಕೊಳ್ಳಲು ಕೋರಲಾಗಿದೆ. ಆಸಕ್ತರು 0821–2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ನವೀಕೃತ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಮಸೂದೆಯು 'ಕಾರ್ಯಕ್ರಮ', 'ಪ್ರಸಾರ'ದ ವ್ಯಾಖ್ಯಾನಗಳನ್ನು ಪರಿಷ್ಕರಿಸುತ್ತದೆ

ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ ಮುಖ್ಯಸ್ಥ ಅಲೋಕ ಪ್ರಸನ್ನಕುಮಾರ್ ಅಭಿಮತ

ಮೈಸೂರು, ಸೆ. 8(ಆರ್‌ಕೆ)– ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ರೆಗ್ಯುಲೇಷನ್) ಕಾಯ್ದೆ 1995 'ಕಾರ್ಯಕ್ರಮಗಳು' ಮತ್ತು 'ಪ್ರಸಾರ'ದ ವ್ಯಾಖ್ಯಾನಗಳನ್ನು ಪರಿಷ್ಕರಿಸುತ್ತದೆ ಎಂದು ಬೆಂಗಳೂರಿನ ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ ಮುಖ್ಯಸ್ಥ ಅಲೋಕ ಪ್ರಸನ್ನಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಮೈಸೂರು ಓಪನ್ ಫೋರಂ ವತಿಯಿಂದ ಮೈಸೂರಿನ ವಿಜಯನಗರ 4ನೇ ಹಂತದ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಭಾನುವಾರ ಬೆಂಗಳೂರಿನ ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿಯ ಅಲೋಕ ಪ್ರಸನ್ನಕುಮಾರ್ ಅವರು 'An Ice Age for Free Speech' ಕುರಿತು ಮಾತನಾಡಿದರು.

ಮೈಸೂರು ಓಪನ್ ಫೋರಂ (ಎಂಒಎಫ್) ವತಿಯಿಂದ ಮೈಸೂರಿನ ವಿಜಯನಗರ 4ನೇ ಹಂತ, 1ನೇ ಘಟ್ಟದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು 'An Ice Age for Free Speech' ಎಂಬ ವಿಷಯ ಕುರಿತು ಪವರ್ ಪಾಯಿಂಟ್ ಪ್ರಸೆಂಟೇಷನ್ ಮಂಡಿಸಿದ ಅವರು, ದೇಶದಲ್ಲಿ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಆಪರೇಷನ್ ಅನ್ನು ಸುಧಾರಿಸುವ ದೃಷ್ಟಿಯಿಂದ ಈ ಮಸೂದೆ ಪ್ರಮುಖ ಪಾತ್ರ ವಹಿಸಲಿದೆ ಎಂದರು.

ಈ ನವೀಕೃತ ಮಸೂದೆಯು ಡಿಜಿಟಲ್ ನ್ಯೂಸ್ ಬ್ರಾಡ್‌ಕಾಸ್ಟರ್‌ಗಳು, ಸಾಮಾಜಿಕ ಜಾಲತಾಣಗಳು, ಆನ್‌ಲೈನ್ ಸುದ್ದಿ, ನ್ಯೂಸ್ ಲೆಟರ್ಸ್ ಮತ್ತು ಪ್ರಸ್ತುತ ವ್ಯವಹಾರಗಳ ವಿಷಯಗಳನ್ನು ಸೃಷ್ಟಿಸುವ ವಿಷಯಗಳು ಮತ್ತು ಘಟನೆಗಳನ್ನೊಳಗೊಂಡ ಡಿಜಿಟಲ್ ಸುದ್ದಿ ಪ್ರಸಾರಕರನ್ನು ಪರಿಚಯಿಸಲಿದೆ ಎಂದು ಅಲೋಕ ಪ್ರಸನ್ನಕುಮಾರ್ ತಿಳಿಸಿದರು.

ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳಿಗೆ ಹೋಲುವ ಕಟ್ಟುಪಾಡುಗಳಿಗೆ ಸಾಂಪ್ರದಾಯಿಕವಲ್ಲದ ಮಾಧ್ಯಮ ರಚನೆಕಾರರಿಗೆ ಸಂಬಂಧಿಸಿದ ಕಾಳಜಿಯನ್ನೂ ಈ ಬಿಲ್ ವಿವರಿಸುತ್ತದಲ್ಲದೆ, ಸುದ್ದಿಗೆ ಸಂಬಂಧಿಸಿದ ಎಲ್ಲಾ ಆನ್‌ಲೈನ್ ವಿಷಯಗಳನ್ನು ದೃಢಪಡಿಸಲಿದೆ ಎಂದು ಅವರು ಇದೇ ಸಂದರ್ಭ ನುಡಿದರು.

ಉದಾಹರಣೆಯೊಂದನ್ನು ಉಲ್ಲೇಖಿಸಿದ ಅಲೋಕ ಪ್ರಸನ್ನಕುಮಾರ್, Youtubeನಲ್ಲಿ ಹಣಕಾಸು ವ್ಯವಹಾರದ ಬಗ್ಗೆ ಸಲಹೆಗಳನ್ನು ನೀಡುವ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಅಥವಾ Twitterನಲ್ಲಿ ನವೀಕರಣಗಳನ್ನು ಹಂಚಿಕೊಳ್ಳುವವರು ಈ ಕಾಯ್ದೆಯಡಿ ಬರಬಹುದು. ಈ ನವೀಕರಣಗಳು ವಿಕಸನಗೊಳ್ಳುತ್ತಿರುವ ಡಿಜಿಟಲ್ ಮೀಡಿಯಾ ಲ್ಯಾಂಡ್‌ಸ್ಕೇಪ್‌ನೊಂದಿಗೆ ಶಾಸನದ ತೀವ್ರತೆಯನ್ನೂ ತಿಳಿಸುತ್ತದೆ ಎಂದು ಅವರು ನುಡಿದರು.

ಕ್ರಿಯೇಟಿವ್ ಮನಸ್ಥಿತಿ ಹೊಂದಿರುವವರನ್ನು ಡಿಜಿಟಲ್ ಸುದ್ದಿ ಪ್ರಸಾರಕ ಎಂದು ಪರಿಗಣಿಸಿದಲ್ಲಿ ಅವರು ತಮ್ಮ ಕೆಲಸದ ಬಗ್ಗೆ ಮಾಹಿತಿ ಹಾಗೂ ಪ್ರಸಾರ ಸಚಿವಾಲಯ ಸೂಚಿಸಿರಬೇಕಾಗುತ್ತದೆ ಎಂದ ಅಲೋಕ ಪ್ರಸನ್ನಕುಮಾರ್, ಹಲವು ಸಾಮಾಜಿಕ ಗುಂಪುಗಳು, ಮಹಿಳೆಯರು, ಮಕ್ಕಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪ ಸಂಖ್ಯಾತರ ಬಗ್ಗೆಯೂ ಜ್ಞಾನವಿರುವ ವ್ಯಕ್ತಿಗಳನ್ನೊಳಗೊಂಡ ಮೌಲ್ಯಮಾಪನ ಸಮಿತಿ ರಚಿಸಿ ವರದಿ ತಯಾರಿಸುವುದು ಸೂಕ್ತ ಎಂದು ಸಲಹೆ ನೀಡಿದರು.

ವಾಕ್ ಸ್ವಾತಂತ್ರ್ಯ, ಮಾಧ್ಯಮ ಸಂಸ್ಥೆಗಳು, ಪತ್ರಕರ್ತರಿಗೆ ಶಾಸನಬದ್ಧವಾಗಿ ನೀಡಿರುವ ಸ್ವಾತಂತ್ರ್ಯ, ಭಾರತದ ಮಾಧ್ಯಮದ ಸ್ಥಿತಿ–ಗತಿ, ಸಾಮಾಜಿಕ ಮಾಧ್ಯಮದ ನಿಯಂತ್ರಣ ಸೇರಿದಂತೆ ಹಲವು ವಿಷಯಗಳ ಕುರಿತಂತೆಯೂ ಅವರು ಪ್ರಸ್ತಾಪಿಸಿದರು.

ಮೈಸೂರು ಓಪನ್ ಫೋರಂ ಪದಾಧಿಕಾರಿಗಳು, ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸದಸ್ಯೆ ಶಾಲಿನಿ ಅರಸ್ ಸ್ವಾಗತಿಸಿದರು.

ಭಗೀರಥ ಚಿತ್ರದ ಪ್ರಚಾರಕ್ಕೆ ಚಾಲನೆ



ಮೈಸೂರಿನ ನೂರೊಂದು ಗಣಪತಿ ದೇವಾಲಯದ ಬಳಿ 'ಭಗೀರಥ' ಚಿತ್ರದ ಪ್ರಚಾರಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಸೆ.8– ಕೌಟುಂಬಿಕ ಕಥಾ ಹಂದರವುಳ್ಳ, ಎಸ್. ಜಯಪ್ರಕಾಶ್(ಜೆಪಿ) ನಟನೆಯ 'ಭಗೀರಥ' ಚಿತ್ರದ ಪ್ರಚಾರಕ್ಕೆ ಚಾಲನೆ ದೊರಕಿತು.

ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಾಲಯದ ಬಳಿ 'ಭಗೀರಥ' ಸಿನಿಮಾ ಪೋಸ್ಟರ್‌ಗಳನ್ನು ವಾಹನಗಳಿಗೆ ಅಂಟಿಸುವ ಕಾರ್ಯಕ್ರಮಕ್ಕೆ ಗಣ್ಯರು ಚಾಲನೆ ನೀಡಿ, ಚಿತ್ರಕ್ಕೆ ಶುಭ ಕೋರಿದರು.

ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕೌಟುಂಬಿಕ ಚಿತ್ರವಾದ 'ಭಗೀರಥ' ಸಿನಿಮಾವನ್ನು ಕನ್ನಡಾಭಿಮಾನಿಗಳು ವೀಕ್ಷಿಸಿ, ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, 'ಭಗೀರಥ'ನಿಗೆ ಯಶಸ್ವಿ ಸಿಗಲಿ, ಚಿತ್ರ ಶತದಿನೋತ್ಸವ ಆಚರಿಸಲಿ ಎಂದು ಆಶಿಸಿದರು. ಚಿತ್ರ ನಿರ್ಮಾಪಕ ಪಾರ್ಥ ಸಾರಥಿ, ಈ ಸಿನಿಮಾ ಯಶಸ್ವಿ ಮೂಲಕ ಜೆಪಿ ಅವರು ಇನ್ನೂ ಹಲವು ಸಿನಿಮಾಗಳಲ್ಲಿ ನಟಿಸುವಂತಾಗಲಿ ಎಂದು ಶುಭ ಹಾರೈಸಿದರು. ನಿರ್ಮಾಪಕರುಗಳಾದ ಕೆ. ರಮೇಶ್, ಭೈರಪ್ಪಗೌಡ ಹಾಗೂ ಚೇತನ್ ರಮೇಶ್ ಮಾತನಾಡಿ, 'ಭಗೀರಥ' ಸಿನಿಮಾ ವೀಕ್ಷಿಸಿ, ಚಿತ್ರತಂಡವನ್ನು ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಈ ವೇಳೆ ಜೆ.ಪಿ. ಅಭಿಮಾನಿಗಳ ಬಳಗದ ಅಶೋಕ್(ಸುಬ್ಬಣ್ಣ), ಪ್ರದೀಪ್, ಮಹೇಶ್‌ಗೌಡ, ವಾಣಿಶ್ರೀ, ಶ್ರೀಕಾಂತ್, ಚಂದ್ರೇಗೌಡ, ಕುಮಾರ್, ಆಟೋ ಮಹದೇವ, ಜಗದೀಶ್, ಲಿಂಗರಾಜು, ಭೈರೇಗೌಡ, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಎಸ್.ದೀಪಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಪಿ.ಟಿ. ಭಾರತಿ ಅವರ ಮಾರ್ಗದರ್ಶನದಲ್ಲಿ ಎಸ್. ದೀಪಾ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು, ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿದ್ಯಾವರ್ಧಕ ಕಾಲೇಜಲ್ಲಿ ಶಿಕ್ಷಕರ ದಿನಾಚರಣೆ



ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು.

ಮೈಸೂರು,ಸೆ.8–ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು.

ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ.ಜೆ.ಮಂಜು, ಶಿಕ್ಷಕರು ಹಾಗೂ ಶಿಕ್ಷಕ ದಿನಾಚರಣೆಯನ್ನು ಕುರಿತು ಮಾತನಾಡುತ್ತಾ, ಓರ್ವ ಶಿಕ್ಷಕನ ಗೌರವ ಹೆಚ್ಚುವುದು ಅವನು ಮಾಡುವ ಬೋಧನೆಯಿಂದ ಎಂದರು. ಪ್ರಾಂಶುಪಾಲ ಡಾ.ಎಸ್.ಮರೀಗೌಡ ಅಧ್ಯಕ್ಷತೆ ವಹಿಸಿದ್ದರು. ಡಾ.ಪಿ.ಕೆ. ಗೋವರ್ಧನ್ ಸ್ವಾಗತಿಸಿದರು.

ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ ಅಸ್ತಿತ್ವಕ್ಕೆ

ಮೈಸೂರು, ಸೆ.8(ಎಂಟಿವೈ)– ರಾಜ್ಯ ಹಾಲು ಒಕ್ಕೂಟದ ಅಭಿವೃದ್ಧಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಬದ್ಧವಾಗಿದ್ದು, ಉತ್ಪಾದಕರ ಸಂಘದ ಬೇಡಿಕೆ ಈಡೇರಿಕೆಗೆ ಪ್ರಯತ್ನಿಸುವುದಾಗಿ ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಭರವಸೆ ನೀಡಿದ್ದಾರೆ.



ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ 'ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ'ವನ್ನು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಉದ್ಘಾಟಿಸಿದರು.

ಮೈಸೂರಿನ ರಿಂಗ್ ರಸ್ತೆಯ ಬನ್ನೂರು ರಸ್ತೆಯ ಜಂಕ್ಷನ್ ಬಳಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಮುಲ್‌ನಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿದ್ದು, ಹಾಲಿನಿಂದ ವಿವಿಧ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಅಲ್ಲದೆ, ಈಗಾಗಲೇ ನಂದಿನಿ ಉತ್ಪನ್ನಗಳು ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರದಲ್ಲಷ್ಟೇ ಅಲ್ಲದೆ ದೆಹಲಿಯಲ್ಲೂ ಮಾರಾಟವಾಗುತ್ತಿವೆ. ಅದನ್ನು ಜಾಗತಿಕ ಬ್ರ್ಯಾಂಡ್ ಆಗಿಸಲು ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಅದಕ್ಕೆ ಎಲ್ಲ ಹಾಲು ಒಕ್ಕೂಟಗಳು ಸಾಂಘಿಕವಾಗಿ ಶ್ರಮಿಸುತ್ತಿವೆ. ಜೊತೆಯಲ್ಲಿಯೇ ನೌಕರರು, ರೈತರಿಗೆ ಒಕ್ಕೂಟವು ನೆರವಾಗಲಿದೆ ಎಂದು ತಿಳಿಸಿದರು.

ರೈತರು ಬೆಳೆದ ಬೆಳೆಗೆ ವೈಜ್ಞಾನಿಕವಾಗಿ ಬೆಲೆ ಸಿಗುತ್ತಿಲ್ಲ. ಹೈನುಗಾರಿಕೆಯು ಅವರಿಗೆ ಆಸರೆಯಾಗಿದೆ. ರೈತರ ಕೆಲಸವು ದೇವರ ಕೆಲಸ. ಸೇವಾ ಮನೋಭಾವದಿಂದ ಸಂಘದ ಸದಸ್ಯರು, ನೌಕರರು ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.


ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್ ಮಾತನಾಡಿ, ಹಾಲು ಉತ್ಪಾದಕರು ಹಾಲು ಪೂರೈಕೆ ಮಾಡದಿದ್ದರೆ ಒಕ್ಕೂಟದ ಅಭಿವೃದ್ಧಿ ಅಸಾಧ್ಯ. ಹೀಗಾಗಿಯೇ ಸಕಾಲದಲ್ಲಿ ಹಣ ಪಾವತಿ ಮಾಡಲಾಗುತ್ತಿದೆ. ರೈತರು, ನೌಕರರ ಬೇಡಿಕೆ ಈಡೇರಿಸಲು ಕ್ರಮ ವಹಿಸಲಾಗುವುದು ಎಂದರು.

ರಾಜ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಮಂಡಳಿ ಅಧ್ಯಕ್ಷ ಎಸ್.ಶಿವನಾಗಪ್ಪ, ಸಂಘಗಳಲ್ಲಿ ಕೆಲಸ ಮಾಡುವ ನೌಕರರು, ಜೊತೆಯಲ್ಲಿಯೇ ಬೇರೆ ವೃತ್ತಿ ಮಾಡಬೇಕು. ಒಕ್ಕೂಟದ ಸಾಫ್ಟ್‌ವೇರ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನ್ಯೂನತೆ ಸರಿಪಡಿಸಬೇಕಿದೆ ಎಂದರು.

ಸಂಘದ ಅಧ್ಯಕ್ಷೆ ಆರ್.ಮಂಗಳಾ ಮಾತನಾಡಿ, ಸಂಘಕ್ಕೆ ಕಚೇರಿಯನ್ನು ಒಕ್ಕೂಟವು ಒದಗಿಸಿಕೊಡಬೇಕು. ಸಹಕಾರ ಸಂಘಗಳ ಸಿಬ್ಬಂದಿಯ ಪ್ರೋತ್ಸಾಹ ಧನವನ್ನು 50 ಪೈಸೆ ಹೆಚ್ಚಿಸಬೇಕು. ವಿಮೆ ಸೌಲಭ್ಯದ ಜೊತೆಗೆ ಅಕಾಲಿಕ ಮರಣವನ್ನಪ್ಪಿದ ನೌಕರರಿಗೆ ಪರಿಹಾರ ನೀಡಬೇಕು. ಒಕ್ಕೂಟದ ಲಾಭದಲ್ಲಿ ಒಂದಂಶವನ್ನು ನೌಕರರಿಗೆ ಕೊಡಬೇಕು ಎಂದು ಕೋರಿದರು.

ಮೈಮುಲ್ ನಿರ್ದೇಶಕರಾದ ಲೀಲಾ ಬಿ.ಕೆ.ನಾಗರಾಜ್, ಬಿ.ನೀಲಾಂಬಿಕೆ ಮಹೇಶ್, ಕೆ.ಉಮಾಶಂಕರ್, ಓಂಪ್ರಕಾಶ್, ಕೆ.ಜಿ. ಮಹೇಶ್, ಎ.ಶಿವಗಾಮಿ ಷಣ್ಮುಗಂ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

9.09.2024 ಸೋಮವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ವಿಶಾಖ, ರಾಹುಕಾಲ : ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ರಾಘವೇಂದ್ರ ರತ್ನಾಕರ್ ಮತ್ತು ವೃಂದದವರಿಂದ ಭಕ್ತಿಗೀತೆ, ಸುಗಮ ಸಂಗೀತ, ದೇವನಾಮ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಬಳಿ, ತ್ಯಾಗರಾಜ ವೃತ್ತ, ಕೆ.ಆರ್.ಮೊಹಲ್ಲಾ, ಸಂಜೆ 7 ಗಂಟೆಗೆ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಕಲಿಸು ಫೌಂಡೇಷನ್ :** ಗ್ರಂಥಾಲಯ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಶಾಸಕ ಹರೀಶ್‌ಗೌಡ, ಡಿಡಿಪಿಐ ಜವರೇಗೌಡ, ಮುಖ್ಯೋಪಾಧ್ಯಾಯ ಲೋಹಿತೇಶ, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು, ಬಿಇಓ(ಉತ್ತರ ವಲಯ) ಎಸ್.ರೇವಣ್ಣ, ಕಲಿಸು ಫೌಂಡೇಷನ್ ಸಂಸ್ಥಾಪಕ ಎಂ.ಎಂ.ನಿಖಿಲೇಶ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಂಬಾರಕೊಪ್ಪಲು, ಬೆಳಗ್ಗೆ 10.15ಕ್ಕೆ.
- **ಎಸ್.ಪಿವಿಜಿಎಂಸಿ ಟ್ರಸ್ಟ್: ಪಾರಂಪರಿಕ ಸಂಗೀತೋತ್ಸವ,** ಸಂಜೆ 5.30ರಿಂದ ಗಣೇಶ ಪುರಾಣ, ವಾಚನ: ವಿದುಷಿ ರಾಘವೇಂದ್ರ, ವ್ಯಾಖ್ಯಾನ: ಎ ನಿರಂಜನ, ಸಂಜೆ 6.45ರಿಂದ, ಗಾಯನ: ವಿದ್ವಾನ್ ತಿರುವಾರೂರು ಗಿರೀಶ್, ವಯೋಲಿನ್–ವಿದ್ವಾನ್ ಆರ್.ಕೆ.ಶ್ರೀರಾಂಕುಮಾರ್, ಮೃದಂಗ–ವಿದ್ವಾನ್ ತಿರುವಾರೂರು ಭಕ್ತವತ್ಸಲ, ಖಂಜಿರಾ–ವಿದ್ವಾನ್ ವ್ಯಾಸ ವಿಠಲ, ಸ್ಥಳ: ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಗಿರಿಜಾ ಶಂಕರ್. ಎಸ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: "ಅಂಚೆ–ಅಂಕನ" –ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ: ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು–ದಿವ್ಯಾ ರಾಘವನ್, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ, ಧ್ವನಿ ಭಂಡಾರದಿಂದ 1974ರಲ್ಲಿ ಮರು ಪ್ರಾರಂಭಗೊಂಡ ಮೈಸೂರು ಆಕಾಶವಾಣಿಯ ಕಾರ್ಯಕ್ರಮದಲ್ಲಿ ಆಕಾಶವಾಣಿಯ ಒಡನಾಟ ಕುರಿತು ಮಾತನಾಡಿರುವವರು ಖ್ಯಾತ ಸಾಹಿತಿ ಚದುರಂಗ ಹಾಗೂ ಮೈಸೂರು ಆಕಾಶವಾಣಿ ಸ್ಥಾಪಕ ಡಾ.ಎಂ.ವಿ.ಗೋಪಾಲಸ್ವಾಮಿಯವರ ಪತ್ನಿ ಕಮಲಾ ಗೋಪಾಲಸ್ವಾಮಿ ನಂತರ ಡಾ.ವಿ.ದೊರೆಸ್ವಾಮಿ ಅಯ್ಯಂಗಾರ್ ನಿರ್ದೇಶನದ ಪಂಚ ವೀಣಾವಾದನ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಎಸ್. ರಾಜಲಕ್ಷ್ಮಿ –ವೀಣಾ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ ಪ್ರಸ್ತುತಿ: ದಿಗ್ವಿಜಯ್ .ಬಿ ಮತ್ತು ಕೀರ್ತನಾ. ವಿ, 12.05–ವನಿತಾ ವಿಹಾರ, 12.30 –ದೇವರನಾಮ–ಭೂಮಿಕಾ. ವಿ, 12.45–ನಮ್ಮ ಆರೋಗ್ಯ: ವಿಶ್ವ ಆತ್ಮಹತ್ಯಾ ತಡೆ ದಿನಾಚರಣೆಯ ಸಂದರ್ಭದಲ್ಲಿ 'ಆತ್ಮಹತ್ಯೆ ಯೋಚನೆಯನ್ನು ತಡೆಗಟ್ಟುವುದು ಹೇಗೆ?' ಕುರಿತು ಮೈಸೂರಿನ ಮನೋವೈದ್ಯರಾದ ಡಾ.ಸುಧಾರಾಣಿ. ಪಿ.ನಾಯಕ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು–ಮಾಲತಿ ಶರ್ಮ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಯು.ಶ್ರೀನಿವಾಸ್ ಮತ್ತು ಯು. ರಾಜೇಶ್–ಯುಗಳ ಮ್ಯಾಂಡೋಲಿನ್, 4.00–ಮಹಿಳಾರಂಗ: "ನಾನು ನನ್ನ ಕಂಪನಿ" ಗೃಹೋಪಯೋಗಿ ಅಲಂಕಾರಿಕ ವಸ್ತುಗಳನ್ನು ತಯಾರಿಸುವ ಉದ್ಯಮಿ ಆಶಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ, ಕಿಶೋರ್. ಎಂ. ಕಾಕಡೆ, 6.50–ಕೃಷಿರಂಗ: ರೈತರಿಗೆ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತ ನೇರ ಫೋನ್–ಇನ್ ಕಾರ್ಯಕ್ರಮ ಭಾಗವಹಿಸುತ್ತಾರೆ: ಮಂಡ್ಯ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ವಿ.ಎಸ್.ಅಶೋಕ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಮಂದ ಸುಧಾರಾಣಿ–ಹಾಡುಗಾರಿಕೆ, 10.00–ನಾಟಕ–ತ್ಯಾಗ, ಮೂಲ ಕಥೆ–ರಬೀಂದ್ರನಾಥ ಟ್ಯಾಗೋರ್, ಬಾನುಲಿ ರೂಪ–ಅಹೋಬಲ ಶಂಕರ್, ನಿರ್ವಹಣ–ಯಮುನಾ ಮೂರ್ತಿ, 10.30–ಸವಿನೆನಪು.

- **ರೋಟರಿ ಮೈಸೂರು ಮಿಡ್‌ಟೌನ್:** ರೋಟರಿ ಮಿಡ್‌ಟೌನ್ ವಿ ಕ್ರಿಯೇಟ್ ಸ್ಪೇಸ್ ಸ್ಪೋರ್ಟ್ಸ್ ಅವಾರ್ಡ್ ಕಾರ್ಯಕ್ರಮ, ಮುಖ್ಯ ಅತಿಥಿ: ಅಂತರರಾಷ್ಟ್ರೀಯ ಅಥ್ಲೀಟ್, ಅಭಿಮನ್ಯು ಅಕಾಡೆಮಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅರ್ಜುನ್ ದೇವಯ್ಯ ತೀತಮಾಡ, ಪ್ರಶಸ್ತಿ ಪುರಸ್ಕೃತರು: ಭವಿಷ್ಯದ ಅಂತರ ರಾಷ್ಟ್ರೀಯ ಶೆಟ್ಲರ್ ದಿವ್ಯ ಭೀಮಯ್ಯ, ಸ್ಥಳ: ಎಪಿಜೆ ಅಬ್ದುಲ್ ಕಲಾಂ ಹಾಲ್, ರೋಟರಿ ಮಿಡ್‌ಟೌನ್, ಹೂಟಗಳ್ಳಿ, ಸಂಜೆ 6.30ಕ್ಕೆ.

ಕಾವೇರಿ, ಕಪಿಲಾ, ಲಕ್ಷ್ಮಣ ತೀರ್ಥ ನದಿಗಳು ಕಲುಷಿತ

ಸರ್ಕಾರಕ್ಕೆ ತಾಂತ್ರಿಕ ತಜ್ಞರ ಸಮಿತಿಯ ಸಮಗ್ರ ವರದಿ ಸಲ್ಲಿಕೆ

ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.8– ಮೈಸೂರು, ಬೆಂಗಳೂರು ಸೇರಿದಂತೆ ಹತ್ತಾರು ನಗರ ಹಾಗೂ ಸಾವಿರಾರು ಹಳ್ಳಿಗಳಿಗೆ ಕುಡಿಯುವ ನೀರು ಸರಬ ರಾಜು ಮಾಡುವ ಕಾವೇರಿ, ಕಪಿಲಾ ಹಾಗೂ ಲಕ್ಷ್ಮಣ ತೀರ್ಥ ನದಿ ಕಲುಷಿತ ಗೊಂಡಿರುವ ಬಗ್ಗೆ ತಾಂತ್ರಿಕ ತಜ್ಞರ ಸಮಿತಿ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿದೆ.

ಕರ್ನಾಟಕ ಸೇರಿದಂತೆ ದೇಶದ ಎಲ್ಲಾ ನದಿಗಳ ನೀರಿನ ಗುಣಮಟ್ಟದ ಬಗ್ಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ವೈಜ್ಞಾನಿಕ ಸಂಶೋಧನೆ ಮೂಲಕ ಸಮೀಕ್ಷೆ ನಡೆಸಿತ್ತು. ಮಂಡಳಿಯ ಪ್ರಕಾರ ಕರ್ನಾಟಕದ 17 ನದಿಗಳು ಸೇರಿದಂತೆ ದೇಶದ 311 ನದಿಗಳು ಕಲುಷಿತಗೊಂಡಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ 2022ರಲ್ಲಿ ವರದಿ ಪ್ರಕಟಿಸಿತ್ತು.

ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ ಪ್ರತಿ ಲೀಟರ್ ಶುದ್ಧ ನೀರಿನಲ್ಲಿ 1 ಎಂಜಿ ಬಯೋ ಕೆಮಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಒಡಿ) ಇರಬೇಕು. ಆದರೆ ಕಾವೇರಿ ನದಿಯಲ್ಲಿನ ನೀರಿನಲ್ಲಿ 6 ಬಿಒಡಿ ಪ್ರಮಾಣವಿದ್ದರೆ, ಲಕ್ಷ್ಮಣ ತೀರ್ಥ ದಲ್ಲಿ 6.6 ಇದೆ. ಲಕ್ಷ್ಮಣ ತೀರ್ಥದಲ್ಲಿ 5.6 ರಷ್ಟು ಬಿಒಡಿ ಪ್ರಮಾಣವಿದೆ.



ಇನ್ನು ಬೆಂಗಳೂರಿನ ನಂದಿ ಬೆಟ್ಟದಲ್ಲಿ ಹುಟ್ಟುವ ಪಿನಾಕಿನಿ ನದಿ ನೀರಿನಲ್ಲಿ 111, ಅಘನಾಶಿನಿಯಲ್ಲಿ 3.3, ಅರ್ಕಾವತಿಯಲ್ಲಿ 39, ಭದ್ರಾದಲ್ಲಿ 7, ಭೀಮಾದಲ್ಲಿ 4, ಗಂಗಾವಳಿಯಲ್ಲಿ 3.4, ಕಾಗಿಣದಲ್ಲಿ 3.1, ಕೃಷ್ಣದಲ್ಲಿ 4.7, ನೇತ್ರಾವತಿಯಲ್ಲಿ 6, ಶರಾವತಿಯಲ್ಲಿ 3.3, ಶಿಂಶಾದಲ್ಲಿ 9.5, ತುಂಗಾದಲ್ಲಿ 6.2 ರಷ್ಟಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ಕಾವೇರಿ, ಕಪಿಲಾ, ಲಕ್ಷ್ಮಣ ತೀರ್ಥ ಸೇರಿ ದಂತೆ ಕರ್ನಾಟಕದ 17 ನದಿಗಳ ಕಲುಷಿತತೆ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಸಿರು ನ್ಯಾಯ ಮಂಡಳಿಗೆ ಪ್ರಮಾಣ ಪತ್ರ ಕೂಡ ಸಲ್ಲಿಸಿತ್ತು.

ಈ ಹಿನ್ನೆಲೆ ಕರ್ನಾಟಕದ ಕಾವೇರಿ, ಕಪಿಲಾ, ಲಕ್ಷ್ಮಣ ತೀರ್ಥ ಸೇರಿದಂತೆ 17 ನದಿಗಳ ಬಗ್ಗೆ ವೈಜ್ಞಾನಿಕ ಸಂಶೋಧನೆ ನಡೆಸಿ ವರದಿ ನೀಡುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚನೆ ನೀಡಿತ್ತು.

ಇದರ ಮಧ್ಯೆ ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಕೂಡ ಸರ್ಕಾರಕ್ಕೆ ಪತ್ರ ಬರೆದು ನಗರ ಪ್ರದೇಶದ ಕಲುಷಿತ ನೀರು ನೇರವಾಗಿ ಕಾವೇರಿ ನದಿ ನೀರು ಸೇರುತ್ತಿದ್ದು, ಇದಕ್ಕೆ ಕೂಡಲೇ ಕಡಿವಾಣ ಹಾಕಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದರು.

ಈ ಹಿನ್ನೆಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದ ಮೇರೆಗೆ ಮಂಡಳಿಯ ಮೈಸೂರು ವಿಭಾಗ ತಾಂತ್ರಿಕ ತಜ್ಞರ ಸಮಿತಿಯೊಂದನ್ನು ರಚಿಸಿತ್ತು.

ಪ್ರಧಾನ ಪರಿಸರ ಅಧಿಕಾರಿ ಡಾ.ಪಿ.ನಿರಂಜನ್, ನಿವೃತ್ತ ಪರಿಸರ ಅಧಿಕಾರಿ ಡಾ.ಬಿ. ಎಂ.ಪ್ರಕಾಶ್, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಕ್ಸಿಕ್ಯೂಟಿವ್ ಇಂಜಿನಿಯರ್, ಕಾವೇರಿ ನೀರಾವರಿ ನಿಗಮದ ಸೂಪರಿಡೆಂಟೆಂಟ್ ಇಂಜಿನಿಯರ್, ಮೈಸೂರು ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕರು ಹಾಗೂ ಎಸ್‌ಜೆಸಿಇ ಒಬ್ಬ ಪ್ರಾಧ್ಯಾಪಕ ಸೇರಿದಂತೆ ತಾಂತ್ರಿಕ ತಜ್ಞರ ಸಮಿತಿ ರಚನೆ ಮಾಡಿತ್ತು.

ಕೊಡಗು ಜಿಲ್ಲೆಯಲ್ಲಿ ಉಗಮಿಸುವ ಕಾವೇರಿ ನದಿ ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಮೈಸೂರು, ಶ್ರೀರಂಗಪಟ್ಟಣ, ತಿ.ನರಸೀಪುರ, ಕೊಳ್ಳೇಗಾಲ ಮಾರ್ಗದಲ್ಲಿ ಹರಿಯುವಾಗ ಕಲುಷಿತಗೊಳ್ಳುತ್ತಿದೆ. ಅದರಲ್ಲೂ ಮೈಸೂರು ನಗರದ ಒಳಚರಂಡಿ ನೀರು ನೇರವಾಗಿ ಕಾವೇರಿ ನದಿ ಸೇರುತ್ತಿದೆ.

ಇದಲ್ಲದೆ ಕಬಿನಿ ಜಲಾಶಯದಿಂದ ಬರುವ ಕಪಿಲಾ ನದಿಗೆ ಕೂಡ ಕಲುಷಿತ ನೀರು ಸೇರುತ್ತಿದೆ. ನಂಜಗೂಡು ಕೈಗಾರಿಕಾ ಪ್ರದೇಶದ ತ್ಯಾಜ್ಯ ನೀರು ಹಾಗೂ ನಂಜನಗೂಡು ಪಟ್ಟಣದ ಒಳಚರಂಡಿ ನೀರು ಕಪಿಲಾ ನದಿ ನೀರು ಸೇರುತ್ತಿದೆ.

ಲಕ್ಷ್ಮಣ ತೀರ್ಥ ನದಿಯ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಹುಣಸೂರು, ಕೆ.ಆರ್.ನಗರ ಸೇರಿದಂತೆ ಇತರೆಡೆಯ ಕಲುಷಿತ ನೀರು ಲಕ್ಷ್ಮಣ ತೀರ್ಥ ನದಿ ಸೇರುತ್ತದೆ.

ಈ ಹಿನ್ನೆಲೆ ತಾಂತ್ರಿಕ ತಜ್ಞರ ಸಮಿತಿ ಸುಮಾರು ಒಂದೂವರೆ ತಿಂಗಳ ಕಾಲ ಮೂರು ನದಿಗಳ ಕಲುಷಿತತೆ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಅಧ್ಯಯನ ಮಾಡಿದೆ. ಯಾವ ಸ್ಥಳದಲ್ಲಿ ನೀರು ಕಲುಷಿತ ಗೊಳ್ಳುತ್ತಿದೆ, ಯಾವ ಪ್ರಮಾಣದಲ್ಲಿ ಕಲುಷಿತಗೊಳ್ಳುತ್ತಿದೆ, ಇದಕ್ಕೆ ಯಾರು ಹೊಣೆ ಎಂಬುದು ಸೇರಿದಂತೆ ಬಹಳಷ್ಟು ವಿಚಾರಗಳ ಬಗ್ಗೆ ಸಮಿತಿ ಅಧ್ಯಯನ ಮಾಡಿದೆ. ಜೊತೆಗೆ ನೀರಿನ ಮಾದರಿಯನ್ನು ಸಂಗ್ರಹಿಸಿ ಸಂಶೋಧನಾಲಯದಿಂದ ಕರಾರುವಕ್ಕಾದ ವರದಿ ಕೂಡ ಪಡೆದಿದೆ.

ವೈಜ್ಞಾನಿಕವಾಗಿ ನಡೆಸಿರುವ ಸಂಶೋಧನೆ ಹಾಗೂ ಅಧ್ಯಯನದ ಪ್ರಕಾರ ಮೂರು ನದಿಗಳ ನೀರು ಕಲುಷಿತವಾಗಿದೆ ಇದೇ ನೀರನ್ನು ನಾವು ಕುಡಿಯುತ್ತಿದ್ದೇವೆ ಎಂಬ ಅರಿವು ಬಹಳಷ್ಟು ಜನರಿಗೆ ಇಲ್ಲ. ಆದರೆ ಇದು ವಾಸ್ತವ.

ಕುಡಿಯುವ ನೀರು ಕಲುಷಿತವಾಗಿದೆ ಎಂಬುದು ತಿಳಿದಿದ್ದರೂ ಸರ್ಕಾರ ಈ ತನಕ ತುರ್ತಾಗಿ ಕ್ರಮ ಕೈಗೊಳ್ಳದೆ ವಿಳಂಬ ಧೋರಣೆ ತಳೆದಿರುವುದು ದುರ್ದೈವದ ಸಂಗತಿ.

ತಾಂತ್ರಿಕ ತಜ್ಞರ ಸಮಿತಿ ಸಮಗ್ರ ವರದಿಯನ್ನು ತಯಾರಿಸಿ ಕಳೆದ 15 ದಿನದ ಹಿಂದೆ ಸರ್ಕಾರಕ್ಕೆ ಸಲ್ಲಿಸಿದೆ. ತಾಂತ್ರಿಕ ತಜ್ಞರ ಸಮಿತಿ ವರದಿಯನ್ನು ಸರ್ಕಾರ ಈಗಲಾದರೂ ಗಂಭೀರವಾಗಿ ಪರಿಗಣಿಸಿ, ನದಿ ನೀರು ಕಲುಷಿತಗೊಳ್ಳುವುದನ್ನು ತಡೆಗಟ್ಟಲು ತುರ್ತು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಇದು ಜನ ಜಾನುವಾರುಗಳ ಆರೋಗ್ಯದ ಮೇಲೆ ಮತ್ತಷ್ಟು ದುಷ್ಪರಿಣಾಮ ಬೀರುತ್ತದೆ.

ಆ್ಯಕ್ಷನ್ ಪ್ಲಾನ್ ತಯಾರಿಸಬೇಕು

ಕಾವೇರಿ, ಕಪಿಲಾ ಹಾಗೂ ಲಕ್ಷ್ಮಣ ತೀರ್ಥ ನದಿಗಳ ನೀರು ಕಲುಷಿತವಾಗಿರುವ ಬಗ್ಗೆ ತಾಂತ್ರಿಕ ತಜ್ಞರ ಸಮಿತಿ ವರದಿ ಸಲ್ಲಿಸಿದೆ. ನದಿ ನೀರು ಕಲುಷಿತಗೊಳ್ಳುವುದನ್ನು ಯಾವ ರೀತಿ ತಡೆಯಬಹುದು ಎಂಬ ಬಗ್ಗೆ ಸಮಿತಿ ಸರ್ಕಾರಕ್ಕೆ ಸಲಹೆ ನೀಡಿದೆ. ಜೊತೆಗೆ ತುರ್ತಾಗಿ ಕೈಗೊಳ್ಳಬೇಕಾದ ಕ್ರಮ ಹಾಗೂ ಶಾಶ್ವತವಾಗಿ ರೂಪಿಸಬೇಕಾದ ಯೋಜನೆ ಬಗ್ಗೆ ವರದಿಯಲ್ಲಿ ತಿಳಿಸಲಾಗಿದೆ. ಈ ಕುರಿತು ಸರ್ಕಾರ ಸಮಾಲೋಚನೆ ನಡೆಸಿದ ನಂತರ ಮೂರು ನದಿಗಳ ನೀರು ಕಲುಷಿತವಾಗುವುದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಆ್ಯಕ್ಷನ್ ಪ್ಲಾನ್ ತಯಾರಿಸಬೇಕಿದೆ.

ತರುವಾಯ ನೀರು ಕಲುಷಿತವಾಗುವುದನ್ನು ತಡೆಗಟ್ಟಲು ನಗರ ಪಾಲಿಕೆ, ಕೈಗಾರಿಕಾ ಇಲಾಖೆ ಸೇರಿದಂತೆ ಇತರೆ ಇಲಾಖೆಗಳಿಗೆ ನಿರ್ದೇಶನ ನೀಡಲಾಗುವುದು.

ತಾಂತ್ರಿಕ ತಜ್ಞರ ಸಮಿತಿ ನೀಡಿರುವ ವರದಿ ಆಧಾರದ ಮೇಲೆ ಸರ್ಕಾರ ನಮಗೆ ಯಾವ ರೀತಿಯ ನಿರ್ದೇಶನ ನೀಡುತ್ತದೆ ಎಂದು ಎದುರು ನೋಡುತ್ತಿದ್ದೇವೆ. ಸರ್ಕಾರ ಏನು ಸೂಚನೆ ನೀಡುತ್ತದೆಯೋ ಅದರಂತೆ ನಾವು ಕಾರ್ಯೋನ್ಮುಖರಾಗುತ್ತೇವೆ.

ಸವಿತಾ, ಹಿರಿಯ ಪರಿಸರ ಅಧಿಕಾರಿ, ಕೆಎಸ್‌ಪಿಸಿಬಿ, ಮೈಸೂರು.

ನ್ಯಾ.ಪಿ.ಎನ್.ದೇಸಾಯಿ ಆಯೋಗದ ವರದಿ ಬಂದ ಬಳಿಕ ಮುಡಾ ಪ್ರಕರಣದ ತಪ್ಪಿತಸ್ಥರ ವಿರುದ್ಧ ಕ್ರಮ

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್



ಮೈಸೂರು,ಸೆ.8(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾ.ಪಿ.ಎನ್. ದೇಸಾಯಿ ಆಯೋಗ ತನಿಖೆ ನಡೆಸುತ್ತಿದೆ. ಆಯೋಗ ವರದಿ ನೀಡಿದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸ್ಪಷ್ಟಪಡಿಸಿದ್ದಾರೆ.

ಚಾಮುಂಡಿಬೆಟ್ಟಕ್ಕೆ ತೆರಳಲು ಕುಟುಂಬದ ಸದಸ್ಯರೊಂದಿಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಂದ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾ.ಪಿ.ಎನ್. ದೇಸಾಯಿ ಆಯೋಗ ತನಿಖೆಗಾಗಿ ದಾಖಲೆಗಳನ್ನು ಸಂಗ್ರಹಿಸಿದೆ. ತನಿಖೆಗೆ ಪೂರಕವಾದ ಎಲ್ಲಾ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ. ಆಯೋಗ ನೀಡುವ ವರದಿ ಅನುಸಾರ ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುತ್ತದೆ. ಯಾರನ್ನು ರಕ್ಷಿಸುವ ಪ್ರಮೇಯ ಒದಗಿ ಬರುವುದಿಲ್ಲ ಎಂದರು.

ದಿನೇಶ್ ಅವರನ್ನು ನ್ಯಾ.ಪಿ.ಎನ್. ದೇಸಾಯಿ ಆಯೋಗ ನೀಡಿದ ವರದಿ ಆಧರಿಸಿ ಅಮಾನತು ಮಾಡಿಲ್ಲ. ಇಲಾಖಾ ವರದಿಯಲ್ಲಿ ತಪ್ಪಿತಸ್ಥರೆಂದು ಕಂಡು ಬಂದಿರುವುದರಿಂದ ಅಮಾನತು ಮಾಡಲಾಗಿದೆ. ಮತ್ತೊಬ್ಬ ಹಿಂದಿನ ಆಯುಕ್ತ ಡಾ.ಡಿ.ಬಿ.ನಟೇಶ್ ಅವರನ್ನು ಇದುವರೆಗೂ ಅಮಾನತು ಮಾಡಿರದೇ ಇರುವುದಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು ದೇಸಾಯಿ ಆಯೋಗ ದಾಖಲೆಗಳನ್ನು ಪರಿಶೀಲನೆ ಮಾಡಿ ವರದಿ ಸಲ್ಲಿಸುತ್ತದೆ. ಆ ವರದಿಯಲ್ಲಿ ನಟೇಶ್ ತಪ್ಪಿತಸ್ಥರು ಎಂದು ಖಚಿತವಾದರೆ, ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗಮನಕ್ಕೆ ಬಂದಿಲ್ಲ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ 848 ನಿವೇಶನ ಪಡೆದ ವಿಚಾರ ಕುರಿತಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಿವೇಶನ ಪಡೆದಿರುವುದಕ್ಕೆ ನನಗೆ ಯಾವುದೇ ಮಾಹಿತಿ ಇಲ್ಲ. ನ್ಯಾ.ಪಿ.ಎನ್.ದೇಸಾಯಿ ತನಿಖೆ ನಡೆಸುತ್ತಿದ್ದಾರೆ. ಈ ವಿಚಾರವೂ ಅಲ್ಲಿ ಬಯಲಾಗುತ್ತದೆ. ಹೀಗಾಗಿ ಮುಡಾದ ಯಾವ ವಿಚಾರವೂ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುತ್ತಿಲ್ಲ ಎಂದರು.

ಬೆಟ್ಟಕ್ಕೆ ಭೇಟಿ: ಮುಡಾ ಹಗರಣದ ಬಿಸಿ ಚರ್ಚೆ ನಡೆಯುತ್ತಿರುವಾಗಲೇ ಸಚಿವ ಬೈರತಿ ಸುರೇಶ್ ಕುಟುಂಬದ ಸದಸ್ಯರೊಂದಿಗೆ ಚಾಮುಂಡಿಬೆಟ್ಟಕ್ಕೆ ಬಂದು ದೇವಿಗೆ ವಿಶೇಷ ಪೂಜೆ ಸಲ್ಲಿಸಿದ್ದು ಗಮನ ಸೆಳೆಯಿತು. ವಿಶೇಷ ವಿಮಾನದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದ ಬಳಿಕ ಅಲ್ಲಿಂದ ರಸ್ತೆ ಮಾರ್ಗವಾಗಿ ಬೆಟ್ಟಕ್ಕೆ ಬಂದು ನಾಡದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮುಡಾ ಅಧ್ಯಕ್ಷ ಕೆ.ಮರೀಗೌಡ ಹಾಗೂ ಇನ್ನಿತರರು ಸಚಿವ ಬೈರತಿ ಸುರೇಶ್ ಅವರಿಗೆ ಸಾಥ್ ನೀಡಿದರು.

ರಾಜ್ಯದಲ್ಲಿ ಸಿಎಂ ಹುದ್ದೆ ಖಾಲಿ ಇಲ್ಲ

ಮೈಸೂರು,ಸೆ.8(ಎಂಟಿವೈ)– ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ನಾಯಕತ್ವ ಬದಲಾವಣೆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ. ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸಿಎಂ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಕಾನೂನು ಉಲ್ಲಂಘಿಸಿಯೂ ಇಲ್ಲ. ಈ ಹಿನ್ನೆಲೆಯಲ್ಲಿ ಅವರ ಪಾತ್ರ ಏನೂ ಇಲ್ಲದ ಕಾರಣ ನಾಯಕತ್ವ ಬದಲಾವಣೆ ಪ್ರಶ್ನೆ ಉದ್ಭವಿಸುವುದಿಲ್ಲ. ನಾಯಕತ್ವ ಬದಲಾವಣೆ ಕೇವಲ ಊಹಾಪೋಹವಷ್ಟೇ. ಮುಖ್ಯಮಂತ್ರಿ ಬದಲಾವಣೆ ಕುರಿತು ಎಲ್ಲಿಯೂ ಚರ್ಚೆ ನಡೆದಿಲ್ಲ. ಗಾಳಿ ಸುದ್ದಿಗೆ ಆಸ್ಪದ ನೀಡಬಾರದು ಎಂದರು.

ಕೆ.ಸಿ.ಲೇಔಟ್‌ನಲ್ಲಿ ಬೀದಿನಾಯಿಗಳ ಹಾವಳಿ

ದ್ವಿಚಕ್ರ ವಾಹನ ಸವಾರರಿಗೆ ನರಕಯಾತನೆ

ಮೈಸೂರು, ಸೆ.8– ಮೈಸೂರಿನ ಕೆ.ಸಿ. ಲೇಔಟ್‌ನಲ್ಲಿ ಬೀದಿನಾಯಿಗಳ ಹಿಂಡು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ.

ಇಲ್ಲಿನ ಮೂರನೇ ಮುಖ್ಯರಸ್ತೆ, 9ನೇ ಕ್ರಾಸ್ ಹೋಟೆಲ್‌ವೊಂದರ ಕಾಂಪೌಂಡ್ ಬಳಿ ಆಗಾಗ್ಗೆ ಬೀದಿನಾಯಿಗಳ ಕಾಳಗ ನಡೆಯುತ್ತದೆ. ಈ ವೇಳೆ ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ವೇಗವಾಗಿ ಹಿಂಬಾಲಿಸುತ್ತವೆ. ಇದರಿಂದ ಹಲವರು ಹೆದರಿ ವಾಹನ ಸಮೇತ ನೆಲಕ್ಕುರುಳಿರುವ ಘಟನೆಗಳೂ ನಡೆದಿವೆ. ಪಾದಚಾರಿಗಳಂತೂ ಜೀವಭಯದಲ್ಲೇ ಓಡಾಡುವಂತಾಗಿದೆ. ಕಚ್ಚಾಡುವ ನಾಯಿಗಳು ಜನರನ್ನೂ ಅಟ್ಟಾಡಿಸುತ್ತವೆ. ಮಹಿಳೆಯರು, ಹಿರಿಯರು ಹಾಗೂ ಮಕ್ಕಳು ಒಂಟಿಯಾಗಿ ಓಡಾಡುವುದಕ್ಕೂ ಭಯಪಡುವಂತಾಗಿದೆ.

ಇತ್ತೀಚೆಗೆ ಏಳೆಂಟು ನಾಯಿಗಳು ಕಚ್ಚಾಡುತ್ತಿದ್ದಾಗ ರಸ್ತೆಯಲ್ಲಿ ಸಾಗುತ್ತಿದ್ದ ಸ್ಕೂಟರ್ ಮೇಲೂ ದಾಳಿ ನಡೆಸಿವೆ. ವೇಗವಾಗಿ ಚಾಲನೆ ಮಾಡಿದರೆ ನಾಯಿಗಳು ಹಿಂಬಾಲಿಸುತ್ತವೆ ಎಂದು ವ್ಯಕ್ತಿಯೊಬ್ಬರು ಸ್ಕೂಟರ್ ನಿಲ್ಲಿಸಿದ್ದಾರೆ. ರಸ್ತೆ ಪಕ್ಕಕ್ಕೆ ವಾಹನ ನಿಲ್ಲಿಸಿ, ನಿಂತುಕೊಂಡಾಗ ನಾಯಿಗಳು ದಾಳಿ ನಡೆಸಲು ಸಿದ್ಧವಾಗಿರುವಂತೆ ನಿಂತಿವೆ. ಆ ಸ್ಕೂಟರ್ ಸವಾರ ಸ್ವಲ್ಪ ಹೊತ್ತು ಅಲ್ಲಿಯೇ ನಿಂತು ನಾಯಿಗಳು ಚದುರಿದ ನಂತರ ಮುಂದೆ ಸಾಗಿದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ಕೆಲ ತಿಂಗಳ ಹಿಂದೆ ಗುಂಡೂರಾವ್ ನಗರದಲ್ಲಿ ಅಂಗಡಿಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದ ಮಗುವಿನ ಮೇಲೆ ಬೀದಿನಾಯಿಗಳು ಮಾರಣಾಂತಿಕ ಹಲ್ಲೆ ನಡೆಸಿದ್ದವು. ಮೈಸೂರಿನಲ್ಲಿ ಇಂತಹ ಹಲವು ಘಟನೆಗಳು ನಡೆದಿದ್ದರೂ ಬೀದಿನಾಯಿಗಳನ್ನು ನಿಯಂತ್ರಿಸುವ ಕ್ರಮಕ್ಕೆ ಮೈಸೂರು ಮಹಾನಗರ ಪಾಲಿಕೆ ಮುಂದಾಗದಿರುವುದು ವಿಷಾದನೀಯ. ಬೀದಿನಾಯಿಗಳ ಹಾವಳಿ ಬಗ್ಗೆ ದೂರಿದರೂ ಶೀಘ್ರ ಕ್ರಮ ಕೈಗೊಳ್ಳುವುದಿಲ್ಲ. ನಾಯಿಗಳ ಸಂಖ್ಯೆ ಹೆಚ್ಚದಂತೆ ಅವುಗಳಿಗೆ ಸಂತಾನಹರಣ ಚಿಕಿತ್ಸೆ ನಡೆಸಲಾಗುತ್ತಿದೆ ಎಂದು ಸಬೂಬು ಹೇಳುತ್ತಾರೆ. ಆದರೆ ದಿನೇ ದಿನೆ ನಾಯಿಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಗಮನಿಸಿದರೆ ಸಂತಾನಹರಣ ಚಿಕಿತ್ಸೆ ಬಗ್ಗೆಯೂ ಅನುಮಾನ ಮೂಡುತ್ತದೆ. ಅದೇನೇ ಆಗಲಿ ಬೀದಿ ನಾಯಿಗಳ ಹಾವಳಿ ತಡೆಗೆ ತುರ್ತು ಕ್ರಮಕ್ಕೆ ಮುಂದಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಮೈಸೂರಿನ ಕೆಸಿ ಲೇಔಟ್‌ನಲ್ಲಿ ರಸ್ತೆ ಬದಿ ಸ್ಕೂಟರ್ ನಿಲ್ಲಿಸಿರುವ ವ್ಯಕ್ತಿ ಮೇಲೆ ದಾಳಿ ಮಾಡುವಂತೆ ನಿಂತಿರುವ ಬೀದಿನಾಯಿಗಳ ಹಿಂಡು.

ಪಾರಂಪರಿಕ ಸಂಗೀತೋತ್ಸವಕ್ಕೆ ಚಾಲನೆ

ಮೈಸೂರು, ಸೆ.8(ಎಂಕೆ)– ಮೈಸೂರಿನ ವಿವಿ ಮೊಹಲ್ಲಾ 8ನೇ ಕ್ರಾಸ್‌ನಲ್ಲಿ ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 12 ದಿನಗಳು ನಡೆಯುವ 63ನೇ ಪಾರಂಪರಿಕ ಸಂಗೀತೋತ್ಸವಕ್ಕೆ ಭಾನುವಾರ ವಿಧ್ಯುಕ್ತ ಚಾಲನೆ ದೊರೆಯಿತು.

ವಿದುಷಿ ಸೂರ್ಯಗಾಯತ್ರಿ ಜ್ಯೋತಿ ಬೆಳಗುವ ಮೂಲಕ ಸಂಗೀತೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಸಾಮಾನ್ಯರೊಬ್ಬರು ಕಲಾವಿದರಾಗಿ ರೂಪುಗೊಳ್ಳುವುದರ ಹಿಂದೆ ಸಾಕಷ್ಟು ಪರಿಶ್ರಮವಿರಲಿದೆ. ಅಮರ ಕಲೆಯ ಪರಿಣತಿ ಪಡೆದ ಅವರು, ಗಾನದೊಂದಿಗೆ, ನಾದ ಮತ್ತು ಸಂಗೀತದೊಂದಿಗೆ ಬೆರೆತು ಹೋಗಿರುತ್ತಾರೆ. ಅವರ ಜೀವನ, ಪಾವನವಾಗಿ ಸಾಗುತ್ತದೆ. ಸಮಾಜಕ್ಕೆ ಎಲ್ಲಿಯೂ ಎಂದಿಗೂ ಸಣ್ಣ ಸೂಜಿ ಮೊನೆಯಷ್ಟು ಕೆಡುಕನ್ನುಂಟು ಮಾಡದೆ ಸಾಗುವ ಬದುಕೆಂದರೆ ಅದು ಕಲಾವಿದರ ಬದುಕು ಎಂದು ಶ್ಲಾಘಿಸಿದರು.

ಕಲೆಯೊಮ್ಮೆ ಸಿದ್ಧಿಸಿದರೆ, ಅವರ ಜೀವನದಲ್ಲಿನ ತಪ್ಪುಗಳೆಂಬ ಪುಟಗಳೇ ಮಾಯವಾಗುತ್ತವೆ. ಸಮಾಜಕ್ಕೆ ಬೇಕಾಗುವ ಕಲೆಯನ್ನು ನೀಡುವಲ್ಲಿ ನಿರತರಾದ ಅಪರೂಪದ ಜೀವಗಳು ಹಾಗೂ ಪ್ರತಿಭೆಗಳೇ ಕಲಾವಿದರಾಗಿರುತ್ತಾರೆ. ಅತಂಹ ಕಲಾವಿದರ ಸಂಗೀತವನ್ನು ಆಲಿಸುವ ಸೌಭಾಗ್ಯವನ್ನು ವಿವಿ ಮೊಹಲ್ಲಾ ಭಾಗದ ಜನತೆ ಪಡೆದಿದ್ದಾರೆ. ಸಮಾಜಕ್ಕೆ ಸಾಂಸ್ಕೃತಿಕ ಸ್ಪರ್ಶ ನೀಡುವ ಕಲೆ, ಸಾಹಿತ್ಯ, ಸಂಗೀತ ಸೇರಿದಂತೆ ಎಲ್ಲಾ ಪ್ರಕಾರಗಳ ಕಲೆಗಳ ರಕ್ಷಣೆ ಮತ್ತು ಪ್ರೋತ್ಸಾಹಕ್ಕೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ಬದ್ಧವಾಗಿದೆ ಎಂದು ತಿಳಿಸಿದರು.

ನಿರಂತರ ಕಾರ್ಯಕ್ರಮ: ಮೈಸೂರಿನ ಖ್ಯಾತ ಉದ್ಯಮಿಯೂ ಆದ ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್ ಅಧ್ಯಕ್ಷ ಡಾ.ಜಗನ್ನಾಥ್ ಶೆಣೈ ಮಾತನಾಡಿ, ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಟ್ರಸ್ಟ್ ಕಳೆದ 63 ವರ್ಷಗಳಿಂದಲೂ ಪಾರಂಪರಿಕ ಸಂಗೀತೋತ್ಸವ ನಡೆಸಿಕೊಂಡು ಬರುತ್ತಿದ್ದು, ಈ ಕಾರ್ಯ ನಿರಂತರವಾಗಿರಲಿದೆ ಎಂದು ತಿಳಿಸಿದರು.

ಶಾಸ್ತ್ರೀಯ ಸಂಗೀತ: ಬಳಿಕ ವಿದುಷಿ ಸೂರ್ಯಗಾಯತ್ರಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನೀಡಿದರು. ವಯೋಲಿನ್ ವಾದನದಲ್ಲಿ ವಿದ್ವಾನ್ ಆದರ್ಶ ಅಜಯ್‌ಕುಮಾರ್, ಮೃದಂಗ ವಾದನದಲ್ಲಿ ವಿದ್ವಾನ್ ಕೃಪಾಲ್ ಸಾಯಿರಾಂ, ತಬಲಾ ವಾದನದಲ್ಲಿ ವಿದ್ವಾನ್ ಪ್ರಶಾಂತ್ ಶಂಕರ್, ಹೆಚ್ಚುವರಿ ತಾಳವಾದ್ಯದಲ್ಲಿ ವಿದ್ವಾನ್ ಶೈಲೇಶ್ ಮರಾರ್ ಉತ್ತಮ ಸಹಕಾರ ನೀಡಿದರು.



ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್‌ನ 63ನೇ ಪಾರಂಪರಿಕ ಸಂಗೀತೋತ್ಸವಕ್ಕೆ ವಿದುಷಿ ಸೂರ್ಯಗಾಯತ್ರಿ ಚಾಲನೆ ನೀಡಿದರು.

ಯುದ್ಧ ವಿರೋಧಿ, ಜಾಗತಿಕ ಶಾಂತಿಗಾಗಿ ಸೈಕಲ್ ಜಾಥಾ ಮೈಸೂರಿಗೆ ಆಗಮನ

ಮೈಸೂರು, ಸೆ.8–ಜಾಗತಿಕ ಮಹಾಯುದ್ಧವನ್ನು ತಡೆದು ಜಾಗತಿಕ ಶಾಂತಿ ಸ್ಥಾಪಿಸುವ ಮಹತ್ವದ ಉದ್ದೇಶವನ್ನು ಹೊಂದಿರುವ ಜಾಗತಿಕ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಭಾರತೀಯ ಯುವ ವಿಭಾಗದ ಸದಸ್ಯರು ನೆರೆ ರಾಜ್ಯ ಕೇರಳದ ಕ್ಯಾಲಿಕಟ್ ನಗರದಿಂದ ಆರಂಭಿಸಿರುವ ಸೈಕಲ್ ಜಾಥಾ ಇಂದು ಸಂಜೆ ಮೈಸೂರು ತಲುಪಿತು.

ಈ ಸೈಕಲ್ ಜಾಥಾಕ್ಕೆ ಮೈಸೂರಿನ ಸೈಕ್ಲಿಂಗ್ ಕ್ಲಬ್‌ನಿಂದ ಆತ್ಮೀಯ ಸ್ವಾಗತ, ಬೆಂಬಲ ಮತ್ತು ಐಕ್ಯಮತ್ಯವನ್ನು ನೀಡಿದೆ ಎಂದು ಕ್ಲಬ್ಬಿನ ಪ್ರತಿನಿಧಿ ಅಂಕುರ್ ಘೋಷ್ ಹೇಳಿದ್ದಾರೆ.

ಜಾಗತಿಕ ಆಹ್ಮದಿಯಾ ಮುಸ್ಲಿಂ ಸಂಘಟನೆಯು ಒಂದು ಪ್ರಗತಿಪರ ಸಂಘಟನೆಯಾಗಿದ್ದು , ಲೋಕದಲ್ಲಿ ಶಾಂತಿ ಸ್ಥಾಪನೆಗಾಗಿ ಮತ್ತು ವಿನಾಶಕಾರಿ ಮಹಾಯುದ್ಧವನ್ನು ತಡೆಯಲು ಜಗತ್ತಿನ ಎಲ್ಲಾ ರಾಜಕೀಯ ಮತ್ತು ಧಾರ್ಮಿಕ ನೇತಾರರಿಗೆ ಪತ್ರಗಳನ್ನು ಬರೆಯುವ ಮೂಲಕ ಮತ್ತು ವಿವಿಧ ದೇಶಗಳ ಸಂಸತ್‌ಗಳಿಗೆ ಭೇಟಿ ನೀಡಿ ಭಾಷಣಗಳನ್ನು ಮಾಡುವ ಮೂಲಕ ಸಂಘಟನೆಯ ಜಾಗತಿಕ ನೇತಾರರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಅವರು ಇಪ್ಪತ್ತು ವರ್ಷಗಳಿಂದ ಅಹರ್ನಿಶಿ ಪ್ರಯತ್ನಿಸುತ್ತಿದ್ದಾರೆ.

ಅದರಿಂದ ಪ್ರೇರಣೆ ಪಡೆದು ನಾವು ಈ ಸಣ್ಣ ಹೆಜ್ಜೆಯನ್ನು ಇಟ್ಟಿದ್ದೇವೆ. 'ಪ್ರೀತಿ ಎಲ್ಲರೊಂದಿಗೂ ಹಗೆಯಿಲ್ಲ ಯಾರೊಂದಿಗೂ' ಎಂಬುದು ನಮ್ಮ ಆದರ್ಶ ಘೋಷಣೆಯಾಗಿದ್ದು, ದೇಶದಲ್ಲಿ ಐಕ್ಯಮತ್ಯ ಸಾಧಿಸಲು, ಸೌಹಾರ್ದತೆಯನ್ನು ಬೆಳೆಸಲು, ಪರಿಸರವನ್ನು ಕಾಪಾಡಲು ಹಾಗೂ ಸೇವಾ ಮನೋಭಾವನೆಯನ್ನು ವೃದ್ಧಿಸಲು ಈ ಸೈಕಲ್ ಜಾಥಾವನ್ನು ನಡೆಸುತ್ತಿದ್ದೇವೆ ಎಂದು ಸೈಕ್ಲಿಂಗ್ ತಂಡ ಹೇಳಿದೆ.

ಸೆಪ್ಟೆಂಬರ್6 ರಂದು ಕೇರಳದ ಕ್ಯಾಲಿಕಟ್‌ನಿಂದ ಆರಂಭಗೊಂಡ ಸೈಕಲ್ ಜಾಥಾ ನಡುವೆ ಪ್ರಕೃತಿ ವಿಕೋಪಕ್ಕೆ ಒಳಗಾಗಿದ್ದ ವಯನಾಡ್ ತಲುಪಿ, ಅಲ್ಲಿಯ ನಾಗರಿಕರಿಗೆ ಸಾಂತ್ವನ ಹಾಗೂ ಬೆಂಬಲವನ್ನು ವ್ಯಕ್ತಪಡಿಸಿ ಮುಂದುವರೆಯಿತು. ಸೆ.8ರಂದು ಸಂಜೆ ಮೈಸೂರಿಗೆ ಆಗಮಿಸಿದ ಜಾಥವನ್ನು ಮೈಸೂರು ಸೈಕಲ್ ಕ್ಲಬ್ ಆತ್ಮಿಯವಾಗಿ ಬರಮಾಡಿಕೊಂಡಿತು. ರಾತ್ರಿ ಮೈಸೂರಿನ ಮಹಮ್ಮದ್ ಅಲಿ ಮತ್ತು ಸ್ಥಳೀಯರ ಆತಿಥ್ಯದಲ್ಲಿ ವಾಸ್ತವ್ಯ ಹೂಡಿರುವ ಈ ತಂಡ ಸೋಮವಾರ, ಬೆಳಿಗ್ಗೆ 6 ಗಂಟೆಗೆ ಮೈಸೂರು ಅರಮನೆಯಿಂದ ಬೆಂಗಳೂರಿಗೆ ಹೊರಡುವುದು. ಬೆಂಗಳೂರಿನಿಂದ ಹೈದರಾಬಾದ್ ಮಾರ್ಗವಾಗಿ ದೇಶದ ಪ್ರಮುಖ ನಗರಗಳಾದ ಪುಣೆ, ಮುಂಬೈ, ಅಹ್ಮದಾಬಾದ್, ಜೈಪುರ್, ದೆಹಲಿ ಮೂಲಕ ಪಂಜಾಬಿನ ಅಮೃತಸರದ ಬಳಿಯ ಕಾಡಿಯಾನ್‌ನಲ್ಲಿ ಜಾಥಾ ಮುಕ್ತಾಯವಾಗಲಿದೆ. ಅಂಕುರ್ ಘೋಷ್ ನೇತೃತ್ವದ ಮೈಸೂರು ಸೈಕ್ಲಿಂಗ್ ಕ್ಲಬ್ ಸದಸ್ಯರು ಈ ಜಾಥಾಗೆ ತಮ್ಮ ಬೆಂಬಲ ವ್ಯಕ್ತಪಡಿಸಿ, ತಮ್ಮ ರೈಡರ್‌ಗಳೊಂದಿಗೆ ಸ್ವಲ್ಪ ದೂರದವರೆಗೆ ಕ್ರಮಿಸಿದರು. ಈ ಸೈಕ್ಲಿಂಗ್ ತಂಡದಲ್ಲಿ ಮಿಶಲ್, ಅಮೀರ್, ಸಲಾಂ, ಫಸಲ್, ರಹೀಂ ಇದ್ದಾರೆ. "



ಮಣ್ಣು ಬೆಲೆ ಕಟ್ಟಲಾಗದ ಸಂಪತ್ತು: ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ

ಮೈಸೂರು, ಸೆ.8– ಈ ಭೂಮಿ ಮೇಲೆ ಬೆಲೆ ಕಟ್ಟಲಾಗದ ಸಂಪತ್ತು ಎಂದು ಏನಾದರೂ ಇದ್ದರೆ ಅದು ಈ ನಮ್ಮ ಮಣ್ಣು ಎಂದು ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ಅಭಿಪ್ರಾಯಪಟ್ಟರು.

ಮೈಸೂರು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಯನಹುಂಡಿ ಗ್ರಾಮದಲ್ಲಿ ನಡೆದ ರೈತ ಕಲ್ಯಾಣ ನಾಮಫಲಕ ಅನಾವರಣ, ಸಂಘದ ಉದ್ಘಾಟನೆ ಹಾಗೂ ಮಣ್ಣಿಗೆ ಮರುಜೀವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಣ್ಣು ನಮ್ಮನ್ನೆಲ್ಲ ಹೊತ್ತ ತಾಯಿ. ಆದ್ದರಿಂದ ಕೇವಲ ನಮ್ಮ ಕಾಲಡಿಯ ಮಣ್ಣು ಎಂಬ ಅಸಡ್ಡೆ ಯಾರೊಬ್ಬರೂ ತೋರದಿರಿ. ಮಣ್ಣಿನ ಬಗ್ಗೆ ನಿರ್ಲಕ್ಷ್ಯತನ ಎಂದೂ ಮಾಡದಿರಿ. ಹೀಗೆ ಮಣ್ಣನ್ನು ನಿರ್ಲಕ್ಷ್ಯ ಮಾಡಿದರೇ, ಊಹಿಸಿಕೊಳ್ಳಲು ಸಾಧ್ಯವಾಗದೇ ಇರುವಷ್ಟು ನಷ್ಟವನ್ನು ಅನುಭವಿಸುತ್ತೇವೆ ಎಂದು ಕಿವಿಮಾತು ಹೇಳಿದರು. ಇಡೀ ಜಗತ್ತಿನಲ್ಲಿಯೇ ಶ್ರೀಮಂತ ರಾಷ್ಟ್ರವಾಗಿದ್ದ ಪ್ರಾಚೀನ ಭಾರತ ಇಂದು ಬಡ ರಾಷ್ಟ್ರವಾಗಲು ಕಾರಣವೇನು? ಎಂದು ಪ್ರಶ್ನಿಸಿದ ಚಂದನ್ ಗೌಡ, ಈ ಹಿಂದೆ ಭಾರತ ದೇಶ ಹೆಸರುವಾಸಿಯಾಗಿದ್ದೇ ವಜ್ರ ವೈಡೂರ್ಯದ ತವರು ಎಂದು. ಜಗತ್ತಿನ ಅತ್ಯಂತ ಶ್ರೇಷ್ಠ ವಜ್ರಗಳ ತವರೂರು ಭಾರತವಾಗಿದ್ದು, ಅರಬರಿಂದ ಬ್ರಿಟಿಷ್‌ನವರು ನಮ್ಮ ಭಾರತ ದೇಶದೊಳಗೆ ಕಾಲಿಡಲು ಪ್ರೇರೇಪಿಸಿದೆ ಈ ನಮ್ಮ ಶ್ರೀಮಂತಿಕೆ ಎಂದರು.

ಇದಕ್ಕೆಲ್ಲ ಕಾರಣ ಈ ನಮ್ಮ ಭೂಮಿ ತಾಯಿಯ ಮಡಿಲಿನ ಮಣ್ಣು. ಈ ಭೂಮಿ ಮೇಲೆ ಬೆಲೆ ಕಟ್ಟಲಾಗದ ಸಂಪತ್ತು ಅಂತ ಏನಾದರೂ ಇದ್ದರೆ ಅದೇ ಈ ನಮ್ಮ ಮಣ್ಣು ಎಂದ ಅವರು, ಮಣ್ಣನ್ನು ದೇವರೆಂದು ಪೂಜಿಸಬೇಕಾಗಿದೆ ಎಂದು ನುಡಿದರು.

ರಾಸಾಯನಿಕ ಮನುಕುಲಕ್ಕೆ ಆಪತ್ತು: ರಾಸಾಯನಿಕ ಜಗತ್ತು ಮನುಕುಲಕ್ಕೆ ಆಪತ್ತಿನ ಬಳುವಳಿಯಾಗಿದ್ದು, ಈಗಲೂ ರಾಸಾಯನಿಕ ಮುಕ್ತ ಕೃಷಿಗೆ ಆದ್ಯತೆ ನೀಡದಿದ್ದಲ್ಲಿ ಅಪಾಯ ಕಟ್ಟಿಟ್ಟಬುತ್ತಿ. ನಿರಂತರ ರಾಸಾಯನಿಕ ಬಳಕೆಯಿಂದಾಗಿ ಇಂದು ಮಣ್ಣಿನ ಫಲವತ್ತತೆ ತೀವ್ರವಾಗಿ ಕುಸಿದಿದ್ದು, ಸೂಕ್ತ ಬೆಳೆ ಬೆಳೆಯಲಾಗದೇ ಅನ್ನದಾತ ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಗಿದೆ ಎಂದ ಅವರು, ಮಣ್ಣನ್ನು ಸಂರಕ್ಷಿಸದೇ ಹೋದಲ್ಲಿ ಮನುಕುಲ ಆಪತ್ತಿನ ದಿನಗಳನ್ನು ಎದುರಿಸಬೇಕಾದ ಸನ್ನಿವೇಶ ಎದುರಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ರೈತ ಕಲ್ಯಾಣ ಪದಾಧಿಕಾರಿಗಳಾದ ಹೇಮಂತ್‌ಕುಮಾರ್, ಜಗದೀಶ್ ಕಣೆನೂರು, ಪ್ರತಾಪ್, ಹರೀಶ್.ಪಿ.ಗೌಡ, ಅನಿಲ್, ಕಂದಸ್ವಾಮಿ, ಪುನೀತ್, ಮಾದೇಗೌಡ, ಸಂಜಯ್, ಲೋಕೇಶ್, ದಾಸೇಗೌಡ, ನವೀನ್ ಪಟೇಲ್, ಮಂಜು ದೇವನೂರು, ಶ್ರೀನಿವಾಸ್, ಕೆಂಡಗಣ್ಣ ಮಂಚುಯ್ಯ, ಶಿವಣ್ಣ, ರವಿ, ಶಂಕರ್, ಶ್ರೀನಿವಾಸ್, ಬಸವರಾಜ್, ಕಾಂಗ್ರೆಸ್ ಮುಖಂಡ ಹಿನಕಲ್ ಉದಯ್, ಗ್ರಾಪಂ ಮಾಜಿ ಸದಸ್ಯೆ ಮಂಜುಳಾ ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಜೆ.ಮಹದೇವು, ಹೈರಳ್ಳಿ ಮಹದೇವು, ಸೋಮೇಶ್ವರ ಗ್ರಾಪಂ ಅಧ್ಯಕ್ಷೆ ರಾಜಮ್ಮ ಮಾದೇಗೌಡ, ಪಿಡಿಓ ಪ್ರಕಾಶ್ ರಾಯನಹುಂಡಿ, ಶಶಿಕುಮಾರ್, ಆರ್ ಸಿ.ರಾಮ್, ರಾಯನಹುಂಡಿ ಕಂಟ್ರಾಕ್ಟರ್ ಕೃಷ್ಣಪ್ಪ ಗ್ರಾಪಂ. ಮಾಜಿ ಸದಸ್ಯ, ಸಜ್ಜೆಹುಂಡಿ ರವಿ, ನಾಗೇಶ್, ಮರೀಗೌಡನಹುಂಡಿ ಪ್ರಕಾಶ್, ಕುಮಾರ್, ದಾಸಪ್ಪ, ನಂಜಯ್ಯ, ವರುಣ ವಿಧಾನಸಭಾ ಕ್ಷೇತ್ರದ ರೈತ ಕಲ್ಯಾಣ ಸಂಘದ ಅಧ್ಯಕ್ಷ ನಾಗರಾಜು, ನಾರಾಯಣ್ ಜೆ, ಮಹೇಶ್ ಆರ್.ಎನ್, ಸಂಘಟನಾ ಕಾರ್ಯದರ್ಶಿ ಯೋಗೇಶ್ ಆರ್, ಮಲ್ಲೇಶ್, ನಂಜಪ್ಪ,ರಾಯನಹುಂಡಿ ಯುವ ಮುಖಂಡರಾದ ಶಿವರಾಜು, ರಾಮಣ್ಣ, ಜವರೇಗೌಡ ,ಉನ್ನೇಗೌಡ, ಯೋಗೇಶ್ ಆರ್, ಮಲ್ಲೇಶ್, ನಂಜಪ್ಪ,ರಾಯನಹುಂಡಿ ಯುವ ಮುಖಂಡರಾದ ಶಿವರಾಜು, ರಾಮಣ್ಣ, ಜವರೇಗೌಡ್ರು,ಉನ್ನೇಗೌಡ್ರು, ಬೆಳ್ಳಿ ಸ್ವಾಮಿ, ಕನಕಗಿರಿ ಯುವ ಮುಖಂಡ ಹುಚ್ಚಪ್ಪ ಇನ್ನಿತರರಿದ್ದರು.



ನಕ್ಕರೆ ಅದೇ ಸ್ವರ್ಗ

ಮಹೇಶ : ನನಗೆ ಬುದ್ಧಿ ಬಂದಾಗಿನಿಂದ ಈ ಎರಡು ವಿಷಯ ಅರ್ಥ ಆಗ್ತಿಲ್ಲ...

ರಮೇಶ : ಏನಪ್ಪಾ ಅದು?

ಮಹೇಶ : ಗಡಿಯಾರ ತಯಾರಿಸಿದವನಿಗೆ ಸಮಯ ಹೇಗೆ ತಿಳಿಯಿತು? ಮೊದಲ ಸಾರಿ ಹಾಲಿನ ಜೊತೆ ಹೆಪ್ಪು ಹಾಕಲು ಮೊಸರು ಎಲ್ಲಿ ಸಿಕ್ಕಿತು?

ಮೈಸೂರು ಮಿತ್ರ

ಸೋಮವಾರ, 9 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೆಲವೊಮ್ಮೆ ಹತ್ತಿರವಿದ್ದು ನರಳಾಡುವ ಬದಲು
ದೂರವಿದ್ದು ನೆಮ್ಮದಿಯಾಗಿರುವುದು ಲೇಸು...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊರೆ ಹೊತ್ತುಕೊಂಡು ಗ್ರಹಗತಿ ಕೇಳ್ದಂಗೆ

ನಿಮ್ಮ ಪತ್ರಗಳು

ಎಪಿಎಲ್ ಕಾರ್ಡುದಾರರಿಗೆ ಯಾಕೆ ಅನ್ಯಾಯ?

ಮಾನ್ಯರೆ,




ಎಪಿಎಲ್ ಕಾರ್ಡುದಾರರಾದ ನಾವು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದವರಾಗಿರುತ್ತೇವೆ. ಚಿಕ್ಕ ಪುಟ್ಟ ಅಂಗಡಿಗಳು, ಖಾಸಗಿ ಸಂಸ್ಥೆಯಲ್ಲಿ ಕಡಿಮೆ ಆದಾಯದಲ್ಲಿ ದುಡಿಯುತ್ತಿದ್ದೇವೆ. ಬಿಪಿಎಲ್ ಹಾಗೂ ಇತರ ಕೆಲವು ಯೋಜನೆಗಳ ಪಡಿತರ ಚೀಟಿದಾರರಿಗೆ ನಿರಂತರವಾಗಿ ಹಾಗೂ ಉಚಿತವಾಗಿ ವಿವಿಧ ಆಹಾರ ಧಾನ್ಯಗಳನ್ನು ಸರ್ಕಾರ ನೀಡುತ್ತಿದೆ. ಆದರೆ ಎಪಿಎಲ್ ಪಡಿತರ ಚೀಟಿದಾರರಿಗೆ ಒಂದೇ ಒಂದು ಧಾನ್ಯ ಅಕ್ಕಿಯನ್ನು ತಿಂಗಳಿಗೆ ಗರಿಷ್ಠ 10 ಕೆಜಿಯನ್ನು ಮಾತ್ರ ಹಣ ಪಡೆದು ನೀಡುತ್ತಿದ್ದರು. ಅಂತಹ ದರಲ್ಲಿ ಫೆಬ್ರವರಿ ತಿಂಗಳಿಂದ ಅಂದರೆ ಆರು ತಿಂಗಳುಗಳಿಂದ ನಮಗೆ ಅಕ್ಕಿಯನ್ನು ವಿತರಿಸುತ್ತಿಲ್ಲ. ಜನರಿಂದ ಜನರಿಗೋಸ್ಕರವಾಗಿ ಆಡಳಿತ ನಡೆಸುತ್ತಿರುವ ಸರ್ಕಾರ ಈ ರೀತಿ ವಿವಿಧ ಯೋಜನೆಗಳ ಪಡಿತರ ಚೀಟಿದಾರರುಗಳಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವುದು ನ್ಯಾಯ ಸಮ್ಮತವಲ್ಲ. ನಮಗೆ ಏಕಾಏಕಿ ಆರು ತಿಂಗಳಿಂದ ಹಣವನ್ನು ಪಡೆದು ನೀಡುತ್ತಿದ್ದ 10 ಕೆಜಿ ಅಕ್ಕಿಯನ್ನು ವಿತರಿಸದಿರುವುದು ನಮಗೆ ಜೀವನ ವೆಚ್ಚವು ಹೆಚ್ಚಿನ ಹೊರೆಯಾಗಿದೆ ಹಾಗೂ ಸಂಕಷ್ಟಕ್ಕೆ ದೂಡಿದೆ. ಸರ್ಕಾರ ವಿತರಿಸಲು ಆಹಾರ ಧಾನ್ಯಗಳ ದಾಸ್ತಾನು ಕಡಿಮೆ ಇದೆ ಎಂದು ಕಂಡು ಬಂದಾಗ ಪಡಿತರವನ್ನು ತಿಂಗಳುಗಟ್ಟಲೆ ವಿತರಣೆಗೆ ನಿಲ್ಲಿಸುವಾಗ ಕಂಡು ಬರುವವರು ಬಡಪಾಯಿಗಳಾದ ಎಪಿಎಲ್ ಕಾರ್ಡುದಾರರುಗಳಾದ ನಾವುಗಳೇನಾ?

ಬಂಗಲೆಗಳಲ್ಲಿ ವಾಸ ಮಾಡುತ್ತಿರುವವರು, ಹೆಚ್ಚಿನ ನಿವೇಶನಗಳನ್ನು ಹೊಂದಿರುವವರು, ಕಾರುಗಳಲ್ಲಿ ಓಡಾಡುತ್ತಿರುವವರು, ಬಹಳಷ್ಟು ಸರ್ಕಾರಿ ಉದ್ಯೋಗಿಗಳು, ಆದಾಯ ತೆರಿಗೆ ಪಾವತಿದಾರರು, ಮನಸಾಕ್ಷಿ, ಮಾನವೀಯತೆಯ ಮೌಲ್ಯಗಳನ್ನು ಗಾಳಿಗೆ ತೂರಿ ಸುಳ್ಳು ದಾಖಲೆಗಳನ್ನು ನೀಡಿ ಬಿಪಿಎಲ್ ಪಡಿತರ ಕಾರ್ಡ್ ಪಡೆಯುತ್ತಿದ್ದಾರೆ. ಅಂತವರಿಗೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ಪಡೆದು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಹಾಗೂ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸುವಂತೆ ಆದೇಶ ನೀಡಬೇಕು. ಅರ್ಹತೆಯುಳ್ಳ ಬಡ ಹಾಗೂ ಮಧ್ಯಮ ವರ್ಗದವರ ಬಿಪಿಎಲ್, ಎಪಿಎಲ್ ಪಡಿತರ ಚೀಟಿದಾರರಿಗೆ ನಿರಂತರವಾಗಿ ಪಡಿತರವನ್ನು ವಿತರಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮನವಿ.

–ಕರ್ನಾಟಕ ಎಪಿಎಲ್ ಪಡಿತರ ಚೀಟಿದಾರರು, ಮೈಸೂರು.

ಗಣಪತಿ ವಿಸರ್ಜನೆಗೆ ನದಿ, ಕೆರೆಗಳು ನಿಗದಿಯಾಗಲಿ



ಮಾನ್ಯರೆ,

ದೇಶಾದ್ಯಂತ ಗೌರಿ–ಗಣೇಶ ಹಬ್ಬವನ್ನು ಆಚರಿಸಲಾಗುತ್ತಿದೆ. ಒಂದು ದಿನದಿಂದ ಹಿಡಿದು ಮೂರು ತಿಂಗಳವರೆಗೆ ಗಣಪತಿ ವಿಗ್ರಹವನ್ನಿಟ್ಟು ಭಕ್ತಿಯಿಂದ ಪೂಜೆ ಮಾಡಿ, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಅನ್ನದಾನ ಸೇವೆ, ಇನ್ನಿತರ ಕಾರ್ಯಕ್ರಮಗಳನ್ನು ಮಾಡಿ ಕೊನೆಗೆ ಗಣಪತಿ ವಿಸರ್ಜನೆಯ ಸಮಯದಲ್ಲಿ ಅನೇಕ ಹಾಡುಗಳೊಂದಿಗೆ ಹೆಜ್ಜೆಗಳನ್ನು ಹಾಕಿ ಕೆರೆ, ನದಿ, ಸಾಗರಗಳಿಗೆ, ಯುವಕ ಯುವತಿಯರು ಗಣಪತಿ ವಿಸರ್ಜಿಸುವ ವೇಳೆ ಆಳವನ್ನು ಅರಿಯದೆ ನೀರಿಗೀಳಿದು ಸಾವುನೋವುಗಳನ್ನು ಪ್ರತಿ ವರ್ಷ ಕಾಣುವಂತಾಗಿದೆ.

ಜೊತೆಗೆ ಇಂತಹ ಕುಟುಂಬಗಳು ಅನೇಕ ಸಮಸ್ಯೆಗಳಿಗೆ ಒಳಪಡುತ್ತವೆ. ಆದ್ದರಿಂದ ರಾಜ್ಯದ ಜಲಸಂಪನ್ಮೂಲ ಸಚಿವರು ಮುಖ್ಯಮಂತ್ರಿಗಳೊಡನೆ ಚರ್ಚಿಸಿ, ರಾಜ್ಯದಲ್ಲಿ ಗಣಪತಿ ವಿಸರ್ಜನೆಗೆ ಕೆಲವು ನಿರ್ಬಂಧ ಹೇರುವುದರ ಜೊತೆಗೆ, ಚಿಕ್ಕ ಮತ್ತು ಆಳ ಕಡಿಮೆ ಇರುವ ಕೆರೆಯಲ್ಲಿ, ಹಗಲಿನ ವೇಳೆಗಳಲ್ಲಿ ವಿಸರ್ಜನೆ ಮಾಡುವಂತೆ ಹಾಗೂ ಕೆಲವು ಸಮಯಗಳಲ್ಲಿ ಕೆಲ ಯುವಕರು ಮದ್ಯಪಾನ ಮಾಡಿ, ಹಳೆಯ ಮತ್ತು ದ್ವೇಷಗಳ ವಿಷಯಗಳ ನೆಪ ಮಾಡಿಕೊಂಡು ಹೊಡೆದಾಟಗಳು, ಅಹಿತಕರ ಘಟನೆಗಳೊಂದಿಗೆ, ಕೊಲೆಗಳು ನಡೆದ ಉದಾಹರಣೆಗಳಿವೆ. ಆದ್ದರಿಂದ ಸರ್ಕಾರವು ಸಹ ಗಣಪತಿ ವಿಸರ್ಜನೆಯ ಸಂದರ್ಭದಲ್ಲಿ ರಾಜ್ಯಾದ್ಯಂತ ಕೆಲವು ಕೆರೆ, ನದಿ, ಸಾಗರಗಳನ್ನು ನಿಗದಿ ಪಡಿಸಿ, ಕನಿಷ್ಠ–ಗರಿಷ್ಠ ಆಳವನ್ನು ಸೂಚಿಸಿ, ಸೂಕ್ತ ಭದ್ರತೆಯ ಜೊತೆಗೆ ಕೆಲವು ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಜಾರಿಗೊಳಿಸಿ ಗಣಪತಿ ವಿಸರ್ಜನೆ ಮಾಡುವಂತೆ ಸಾರ್ವಜನಿಕರಿಗೆ ಸೂಚಿಸಬೇಕು. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು.**

ಬದುಕು–ಬಿಂದು

ಮಾನ್ಯರೆ,

ಶಾಶ್ವತ : ಸೂರ್ಯ 'ಉರಿಯುವ ದೇವರು', ಉಳಿಯುವ ದೇವರೂ ಹೌದು.

ಚೆಲುವು : ಹಿರಿತೆರೆಯ ಮೇರು ನಟಿಯರ ಮಾತಿರಲಿ; ಕಿರುತೆರೆಯ 'ಚಿಲ್ಲರೆ' ನಟಿಯರ ಚೆಲುವಾದರೂ ಎಂದರು!

ಚೊ(ಬೊ)ಂಬು : ಯಾರು ಯಾರಿಗಾದರೂ 'ಚೊಂಬು' ಕೊಡಲಿ; 'ಬೊಂಬು' ಕೊಡದಿದ್ದರೆ ಸರಿ.

ಚುಡಾವಣೆ : ಹುಡುಗರು ಹುಡುಗಿಯರನ್ನು ಚುಡಾಯಿಸುತ್ತಾರೆ; ಅದು ಚುನಾವಣೆಯಲ್ಲ 'ಚುಡಾವಣೆ'.

ಶತ(ಹತ) : ಕೆಲವರನ್ನು 'ಶತಾಯುಷಿ'ಗಳೆನ್ನುತ್ತೇವೆ; ಅವರು ಕ್ಷಿಪ್ರವಾಗಿ 'ಹತಾಯುಷಿ'ಗಳಾಗುತ್ತಾರೆ!

ಸ್ಥಾ(ಸ್ಥ)ವಿರ: ನಮ್ಮ ಸಮಾಜ ಸ್ಥಾವರ ಮಾತ್ರವಲ್ಲ, ಸ್ಥವಿರ (ಓಲ್ಡ್) ಕೂಡ: ದೇವರ 'ವರ'.

ದೈಹಿ(ವಿ)ಕ: ದೈಹಿಕವಾಗಿ ದೈತ್ಯರಾದರೇನು ಬಂತು; 'ದೈನ್ಯ'ಪೂರ್ವಕ ದೈವಿಕರಾಗುವುದು ಲೇಸು.

ನಕ್ಷತ್ರ : ನಕ್ಸಲರ ಮಂಡಲದಲ್ಲಿ ನಾರಿಯರೂ ಇರುತ್ತಾರಂತೆ! ಇದಲ್ಲೊಲ್ಲರೇಕೆ? ನಕ್ಷತ್ರಗಳಲ್ಲವೆ?


ಇಬ್ಬಣ : ಎಡಗೈ, ಬಲಗೈ ಎಂಬ ಎರಡು ಬಣಗಳುಂಟಷ್ಟೆ, 'ಎಡಗಾಲು', 'ಬಲಗಾಲು' ಎಂದೇಕಿರಬಾರದು (ಅಯ್ಯೋ, ದೇಶವೆ!)

ಅತೀತ : 'ಅಂಗರಚನಾಶಾಸ್ತ್ರಕ್ಕೆ ಅನಾಟಮಿಗೆ–ಅತೀತರಾದ ಅಂಗನೆಯರು ಅನಾಹುತ ಹೇತುಗಳೇ ಸರಿ. (ಕಲೆಯ ಪರಿ).

ಗಡ್ಡ : ದೊಡ್ಡ ದೇವೇಗೌಡರು ಗಡ್ಡ ಬಿಟ್ಟಿರುವುದು ಅಚ್ಚರಿಯಂತೆ! ಅದೇನು 'ಮಹಾ? 'ಮೂರನ್ನೂ ಬಿಟ್ಟವರಿಲ್ಲವೆ?

–ಸಿಪಿಕೆ, ಮೈಸೂರು.

ಅಪ್ಪ ಹಾಕಿಕೊಟ್ಟ ಹಾದಿಯಲ್ಲಿ ಮಗನ ಏಳ್ಗೆ





ಮಿರ್ಲೆ ಚಂದ್ರಶೇಖರ
ಮೊ: 9916129654

> ಮಗನೆಂಬ ಕಾರಣದಿಂದ ಅವನ ಅವಶ್ಯಕತೆಗಳನ್ನು ಪೂರೈಸಿದರೆ ಸಾಲದು. ಅವಶ್ಯಕತೆಗಳ ಜೊತೆ ಮಾನವೀಯ ಗುಣಗಳನ್ನು ಬೆರೆಸಿ ಬೆಳಸಬೇಕಾಗುವುದು ತಾಯಿಗಿಂತ ತಂದೆಗೆ ಹೊಣೆ ಜಾಸ್ತಿ. ತಾಯಿ ಮನೆಯೊಳಗೆ ಮಗನ ಹೊಟ್ಟೆ ತುಂಬಿಸಿ, ಲಾಲನೆ ಪಾಲನೆ ಮಾಡಿ ಬೆಳೆಸಬಹುದು ಆದರೆ ಅವನು ಹೊರ ಪ್ರಪಂಚದಲ್ಲಿ ತೆರೆದುಕೊಳ್ಳಲು ಅಪ್ಪನು ಊರುಗೋಲು ಆಗಬೇಕಾಗುತ್ತದೆ.

ತಾಯಿಗೆ ತಕ್ಕ ಮಗ ಚಲನಚಿತ್ರ 1978ರಲ್ಲಿ ತೆರೆಕಂಡು ಅದ್ಭುತ ಯಶಸ್ಸು ಗಳಿಸಿತು. ಆ ಸಮಯದಲ್ಲಿ ನಾವು ಇನ್ನೂ ಮಕ್ಕಳು, ಅದನ್ನು ನೋಡಿದಾಗ ನಮಗೂ ಒಂದು ರೀತಿಯ ರೋಮಾಂಚನ. ಅದರಲ್ಲಿದ್ದ ಬಾಕ್ಸಿಂಗ್‌ನಿಂದ, ತಾಯಿಯ ಸೆಂಟಿಮೆಂಟ್ ಇದ್ದ ಸಿನಿಮಾ ಜನರ ಮೆಚ್ಚುಗೆ ಪಡೆಯಿತು. ತಾಯಿಗೆ ತಕ್ಕ ಮಗನ ಅದ್ಭುತ ಕಥೆ, ಇಲ್ಲಿ ನಾನು ಹೇಳ ಹೊರಟಿರುವುದು ತಂದೆಗೆ ತಕ್ಕ ಮಗನ ಬಗ್ಗೆ.

ತಾಯಿ–ಮಗಳ ಮತ್ತು ತಾಯಿ–ಮಗನ ಸಂಬಂಧಗಳ ಬಗ್ಗೆ ಸಾರ್ವಜನಿಕವಾಗಿ ಹೆಚ್ಚು ಮಾತಾನಾಡುವ ನಾವು ಸಂಸಾರದ ಪ್ರಯಾಣಕ್ಕೆ ಹೆಗಲು ಕೊಟ್ಟ ತಂದೆಯ ಬಗ್ಗೆ ಮರೆಯುತ್ತೇವೆ. ಒಂದು ಕುಟುಂಬದ ಭದ್ರತೆಗೆ ತಾಯಿಗಿಂತ ತಂದೆ ರಕ್ಷಕನಾಗಿ ನಿಲ್ಲುತ್ತಾನೆ.

ಬಹುಶಃ ತಾಯಿ ಸತ್ಯ, ತಂದೆ ನಂಬಿಕೆ ಎನ್ನುವ ಕಾರಣದಿಂದಾಗಿ ಸಾಮಾಜಿಕವಾಗಿ ತಂದೆಗಿಂತ ತಾಯಿಗೆ ಹೆಚ್ಚಿನ ಸ್ಥಾನ ದೊರೆತಿರಬಹುದು. ತಾಯಿಗೆ ಹೆಚ್ಚಿನ ಗೌರವ ಸಿಗಬೇಕಾದುದ್ದೇ ಏಕೆಂದರೆ ತಾಯಿಯು ಮಕ್ಕಳನ್ನು ಗರ್ಭ ಧರಿಸಿ, ನವಮಾಸಗಳು ಹೊತ್ತು ಹೆರುವುದಲ್ಲದೆ ಒಂದು ಹಂತಕ್ಕೆ ಬರುವವರೆಗೂ ಪೋಷಣೆಯಲ್ಲಿ ತಂದೆಗಿಂತ ಹೆಚ್ಚು ನಿಗಾ ವಹಿಸುವಳು, ತಾನು ಹಸಿದಿದ್ದರೂ ಮಕ್ಕಳು ಹಸಿವಿನಿಂದ ಇರುವುದಕ್ಕೆ ಬಿಡುವುದಿಲ್ಲ, ಮಕ್ಕಳಿಗೆ ಕಷ್ಟ ಬಂದರೆ ತಾನು ನೋವು ಅನುಭವಿಸುವಳು, ತನ್ನೆಲ್ಲ ಜೀವನವನ್ನು ಮಕ್ಕಳ ಏಳ್ಗೆಗಾಗಿ ಮುಡಿಪು ಇಡುವಳು. ಆದ್ದರಿಂದಲೇ ತಾಯಿಗಿಂತ ದೇವರಿಲ್ಲ ಎಂದು ಹೇಳುವುದು. ಕುಟುಂಬದಲ್ಲಿ ಮಕ್ಕಳೊಂದಿಗೆ ಮನೆಯ ದೇವತೆಗೆ ದುಡಿದು ತಂದು ಹಾಕುವುದಲ್ಲದೆ ರಕ್ಷಣೆಯನ್ನು ನೀಡುವವನು ತಂದೆ. ಈಗೀಗ ತಂದೆ ನಿರ್ವಹಿಸುವ ಜವಾಬ್ದಾರಿಯನ್ನು ತಾಯಿಯು ಸಹ ನೌಕರಿಗೆ ಹೋಗಿ ದುಡಿದು ಕುಟುಂಬ ಸಾಕುವ ಕೆಲಸವನ್ನು ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ತಂದೆಗೆ ಹೆಂಡತಿ ಮಕ್ಕಳಿಗೆ ಸಾಮಾಜಿಕ ಭದ್ರತೆ ನೀಡುವಲ್ಲಿ ಹೊಣೆಗಾರಿಕೆ ಹೆಚ್ಚು. ಕವಯತ್ರಿ ಚಂಪಾ ಶಿವಣ್ಣರವರು ತಮ್ಮ "ಅಪ್ಪನೆಂಬ ಅದ್ಭುತ" ಕವನದಲ್ಲಿ ತಂದೆಯ ಬಗ್ಗೆ ಬಹಳ ಅರ್ಥಗರ್ಭಿತವಾಗಿ ಬರೆದಿದ್ದು ಅದರ ಕೆಲವು ಸಾಲುಗಳು:

ಅಮ್ಮನೆಂದರೆ ಮಮತೆ,
ಅಪ್ಪನೆಂದರೆ ಭದ್ರತೆ,
ಸದಾ ಮಡದಿ–ಮಕ್ಕಳ
ಭವಿಷ್ಯಕ್ಕಾಗಿ ಬದುಕನೆ
ಮುಡುಪಿಟ್ಟು ಬೆಳಗುವ
ಕರ್ಪೂರದ ಹಣತೆ!.

ಹೌದು ಅಪ್ಪ ಕುಟುಂಬದ ಭದ್ರತೆ. ಯಾವಾಗಲೂ ಮಡದಿ ಮಕ್ಕಳ ಭವಿಷ್ಯಕ್ಕಾಗಿ ದುಡಿಯುತ್ತಿರುತ್ತಾನೆ. ತಾನು ತನ್ನನ್ನು ದಂಡಿಸಿಕೊಂಡು ಹೆಂಡತಿ ಮತ್ತು ಮಕ್ಕಳನ್ನು ಸಾಕುತ್ತಾನೆ. ಅಪ್ಪನಾದವನು ತನ್ನ ಮಗನ ಉಜ್ವಲ ಭವಿಷ್ಯಕ್ಕಾಗಿ ಶಕ್ತಿ ಮೀರಿ ದುಡಿದು ಆಸ್ತಿ ಮಾಡಿಡುತ್ತಾನೆ. ಮಗ ತನ್ನ ವಂಶ ಮುಂದುವರಿಯುವಿಕೆಯ ಉತ್ತರಾಧಿಕಾರಿ. ಈ ಕಾರಣವೇ ತಂದೆ ಮಗನ ಸಂಬಂಧ ವಿಶೇಷವಾದದ್ದು. ಮಗ ಅಪ್ಪನ ಪಡಿಯಚ್ಚು, ಪೂರ್ವಜರ ಪ್ರತಿನಿಧಿ. ಈ ವಿಷಯದಲ್ಲಿ ತಂದೆಗೆ ತಾಯಿಗಿಂತ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಏಕೆಂದರೆ ಮಗನನ್ನು ಒಬ್ಬ ಒಳ್ಳೆಯ ನಾಗರಿಕನನ್ನಾಗಿ ರೂಪುಗೊಳಿಸಿ ಸಮಾಜಕ್ಕೆ ಬಿಟ್ಟು ಹೋಗಬೇಕಾಗುತ್ತದೆ. ಮುಂದೆ ಮಗ ಏನೇ ತಪ್ಪು ಮಾಡಿದರೂ ಜನರ ಬಾಯಿಗೆ ಮೊದಲು ಬರುವುದು ಇವನ ಅಪ್ಪನ್ಯಾರು? ಎಂಬುವ ಪ್ರಶ್ನೆ. ಅಪ್ಪ ಬದುಕಿನಲ್ಲಿ ಮಾದರಿ ಆಗಿದ್ದರೆ ಮಗನು ಸಹ ಅಪ್ಪನ ದಾರಿಯನ್ನೇ ಹಿಡಿಯುತ್ತಾನೆ. ಅದಕ್ಕೆ ಹೇಳುವುದು ಮಕ್ಕಳ ಮುಂದೆ ಕೆಟ್ಟ ನಡುವಳಿಕೆಗಳ ಪ್ರದರ್ಶನಕ್ಕೆ ಅವಕಾಶ ಮಾಡಬಾರದೆಂದು. ಬಾಲ್ಯದಲ್ಲಿ ಮಕ್ಕಳು ಪೋಷಕರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ, ನಮ್ಮ ನಡುವಳಿಕೆಗಳು ಅವರ ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ಪ್ರಭಾವ ಬೀರುತ್ತವೆ.

ಮಗನೆಂಬ ಕಾರಣದಿಂದ ಅವನ ಅವಶ್ಯಕತೆಗಳನ್ನು ಪೂರೈಸಿದರೆ ಸಾಲದು. ಅವಶ್ಯಕತೆಗಳ ಜೊತೆ ಮಾನವೀಯ ಗುಣಗಳನ್ನು ಬೆರೆಸಿ ಬೆಳಸಬೇಕಾಗುವುದು ತಾಯಿಗಿಂತ ತಂದೆಗೆ ಹೊಣೆ ಜಾಸ್ತಿ. ತಾಯಿ ಮನೆಯೊಳಗೆ ಮಗನ ಹೊಟ್ಟೆ ತುಂಬಿಸಿ, ಲಾಲನೆ ಪಾಲನೆ ಮಾಡಿ ಬೆಳೆಸಬಹುದು ಆದರೆ ಅವನು ಹೊರ ಪ್ರಪಂಚದಲ್ಲಿ ತೆರೆದುಕೊಳ್ಳಲು ಅಪ್ಪನು ಊರುಗೋಲು ಆಗಬೇಕಾಗುತ್ತದೆ.

ಅಮ್ಮ ಮಗುವಿಗೆ ಇವರೇ ನಿಮ್ಮಪ್ಪ ಎಂದು ತೋರಿಸಿದ ಬಾಲ್ಯದಿಂದ ಬೆಳೆದು ದೊಡ್ಡನಾಗುವವರೆಗೂ ತಂದೆಯೇ ಮಗನ ಸಾಧನೆಗೆ ಸ್ಫೂರ್ತಿ. ಮಗ ಬೆಳೆಯುವಾಗ ತಂದೆಯನ್ನು ಅನುಕರಿಸುತ್ತಾನೆ. ಕೆಲವೊಮ್ಮೆ ಮಗನ ಸಾಧನೆಯಲ್ಲಿ ತಂದೆಯು ಅಡ್ಡಗಾಲು ಆಗುವುದುಂಟು, ತಂದೆ ಪ್ರತಿಷ್ಠಿತ ಸ್ಥಾನದಲ್ಲಿದ್ದರೆ, ಅಪ್ಪನನ್ನು ಬೆಂಚ್‌ಮಾರ್ಕ್ ಮಾಡಿಕೊಳ್ಳಲಾಗದು. ಕಾರಣ ಮಗ ಅಪ್ಪನನ್ನು ಮೀರಿಸಬೇಕೆಂಬುದು ತಪ್ಪು ಕಲ್ಪನೆ, ಮೇಲೆಕ್ಕೆ ಏರಿದರೆ ಒಳ್ಳೆಯ ಸಾಧನೆಯೇ ಸರಿ, ಅಪ್ಪನಾದವನಿಗೆ ತನ್ನ ಮಟ್ಟಕ್ಕೆ ಬೆಳೆಸುವುದು ಕಷ್ಟವಾದರೂ ಸಾಧಿಸಲು ಪೂರಕ ವಾತಾವರಣ ಸೃಷ್ಟಿಸಿ ಬೆಳಸಬೇಕಾಗುತ್ತದೆ. ಇಂತಹ ಪ್ರತಿಷ್ಠಿತ ಕುಟುಂಬಗಳಲ್ಲಿ ಮಗ ಗುರಿ ಮುಟ್ಟಲು ಸಾಧ್ಯವಾಗದಿದ್ದಲ್ಲಿ ಮಗನಿಗೆ ಕೊನೆವರೆಗೂ ತಂದೆಯ ಮೇಲೆ ವ್ಯಕ್ತಪಡಿಸಲಾಗದ ಸಿಟ್ಟು ಇರುತ್ತದೆ.

ತಂದೆಯಾದವನು ಮಗನನ್ನು ದೊಡ್ಡ ಮನುಷ್ಯನ್ನಾಗಿ ಬೆಳೆಸುವುದಕ್ಕಿಂತ ಒಳ್ಳೆಯ ಮಗನನ್ನಾಗಿ ಬೆಳೆಸುವುದರಲ್ಲಿ ಅರ್ಥವಿದೆ. ಅನಾಮಿಕರೊಬ್ಬರು ಹೇಳಿರುವಂತೆ Don't wait to make your son a great man? make him a great boy.

ಬೆಳೆಯುವ ಮಗ ಮಗನಾಗಿಯೇ ಬೆಳೆಯಲಿ ಮುಂದೊಮ್ಮೆ ಅವನೊಬ್ಬ ದೊಡ್ಡ ಮನುಷ್ಯ ಆಗದೇ ಇರಲಾರ. ಮುಖ್ಯವಾಗಿ ತಂದೆ ಮಗನಿಗೆ ಪ್ರೀತಿ ಕೊಡುವುದರಲ್ಲಿ ಸಫಲನಾಗಬೇಕು. ಮಗ ಜೀವನದಲ್ಲಿ ಜನ ಮೆಚ್ಚಿದ ಪ್ರಜೆಯಾಗಿ ಬೆಳೆಯಬೇಕಾದರೆ ತಂದೆಯಾದವನು ಕೆಲವನ್ನು ತ್ಯಾಗ ಮಾಡಲೇಬೇಕು. ಸ್ವಹಿತವನ್ನು ಬಿಡಬೇಕು, ಕೆಲವುಗಳಿಗೆ Comprom ise ಗುಣದ ಮೊರೆ ಹೋಗಬೇಕಾಗುತ್ತದೆ ಆಗ ಮಾತ್ರ ಮಗನಲ್ಲಿ ತಂದೆ ಸಂತೋಷ ಕಾಣುತ್ತಾನೆ.

ತಂದೆ–ಮಗನ ಸಂಬಂಧದಲ್ಲಿ ಜೈವಿಕವಾಗಿ ಬಹಳಷ್ಟು ಗುಣಗಳು ಹರಿದು ಬಂದಿರಬಹುದು ಈ ಗುಣಗಳು ತಂದೆಯಲ್ಲಿದ್ದ ವಂಶಪಾರಂಪರಿಕ ಕಾಯಿಲೆಗಳಿರಬಹುದು ಅಥವಾ ಬಣ್ಣ ಎತ್ತರ ಮುಖ ಚರ್ಯೆ ಅಥವಾ ಇನ್ನಿತರೆ ಭೌತಿಕ ಲಕ್ಷಣಗಳಿಗೆ ಸೀಮಿತ ಆಗುತ್ತದೆ. ಆದರೆ ಮಗ ಬೆಳೆಸಿಕೊಳ್ಳುವ ನಡತೆ, ಬುದ್ಧಿ, ಒಳ್ಳೆಯವನು, ಕೆಟ್ಟವನು, ಮುಂತಾದ ಗುಣಗಳನ್ನು ಮಗನಿಗೆ ಬೆಳೆದಂತೆ ಸ್ವಲ್ಪ ಸ್ವಲ್ಪವಾಗಿ ಕಲಿಸುಕೊಡುತ್ತದೆ ತಂದೆಯ ಮಾಡುವ ಪ್ರಯತ್ನದಿಂದಾಗಿ.

ತಂದೆಯಾದವನಿಗೆ ಮಗನ ಮೇಲೆ ತಾಯಿಗಿಂತ ಮಿಗಿಲಾದ ಆಸೆಗಳಿರುತ್ತವೆ. ಏಕೆಂದರೆ ವಂಶದ ಹೆಸರನ್ನು ಉಳಿಸುವುದು ಮಗ ಎನ್ನುವುದು ಎಲ್ಲ ತಂದೆಯರ ಮನಸ್ಸಿನಲ್ಲಿ ತಲತಲಾಂತರದಿಂದ ಬೇರೂರಿ ಮುಂದುವರಿದುಕೊಂಡು ಬಂದಿದೆ. ಎಲ್ಲಾ ಅಪ್ಪಂದಿರಿಗೆ ಮಗಳಿಗಿಂತ ಮಗನ ಮೇಲೆ ಭರವಸೆ ಜಾಸ್ತಿ. ಅನುಮಾನವೇ ಇಲ್ಲ. ಮಗಳ ಮೇಲೆ ತಂದೆಗೆ ಯಾವಾಗಲೂ ಪ್ರೀತಿ ಹೆಚ್ಚೆ. ಆದರೆ ವಂಶದ ಹೊಣೆಗಾರಿಕೆಗೆ ಗಂಡು ಮಕ್ಕಳನ್ನು ಮೇಲ್ಪಂಕ್ತಿಯಲ್ಲಿ ಇರಿಸಿದೆ ಇದಕ್ಕೆ ಕಾರಣಗಳು ಹಲವಾರು ಇರಬಹುದು.

ಪೂರಕ ಪರಿಸರವನ್ನು ನಿರ್ಮಿಸಿ ಮಕ್ಕಳು ಹಾಕುವ ಹೆಜ್ಜೆಹೆಜ್ಜೆಗೂ ತಂದೆಯಾದವನು ಊರುಗೋಲಾಗಿ ನಿಂತು ಅವನ ಸುಖ–ದುಃಖಗಳನ್ನು ತಾನು ಅನುಭವಿಸಿ ಮಿಡಿದರೆ ಮಕ್ಕಳು ತಂದೆಯ ಆಶೋತ್ತರಗಳನ್ನು ಈಡೇರಿಸಿ ಬದುಕಲ್ಲಿ ಯಶಸ್ಸು ಕಂಡು ಹುಟ್ಟಿದ ಮನೆ, ಊರು, ರಾಷ್ಟ್ರಕ್ಕೆ ಹೆಸರು ತರುವನು. ನೂಲಿನಂತೆ ಸೀರೆ ತಾಯಿಯಂತೆ ಮಗಳು ಎನ್ನುವ ನುಡಿ ಇದೆ ಆದರೆ 'ನೂಲಿನಂತೆ ಅಂಗಿ ತಂದೆಯಂತೆ ಮಗ' ಎನ್ನುವುದು ರೂಢಿಯಲ್ಲಿ ಇಲ್ಲ. ವಾಸ್ತವವಾಗಿ ತಂದೆಗೆ ತಕ್ಕ ಮಗ ಅನ್ನುವುದು ಹೆಚ್ಚು ಚಾಲ್ತಿಯಲ್ಲಿರುವ ತಂದೆ–ಮಗನ ಸಂಬಂಧದ ನುಡಿ.

ಸಾಹಿತ್ಯವನ್ನು ರಚಿಸಿದ ಕವಿಗಳು ಅಮ್ಮನನ್ನು ಹಾಡಿ ಹೊಗಳಿದಷ್ಟು ಅಪ್ಪನನ್ನು ಎಲ್ಲಿಯೂ ಬಿಂಬಿಸಿ ಕೊಂಡಾಡಲಿಲ್ಲ. ತಾಯಿ ಮಕ್ಕಳಿಗೆ ಕಣ್ಣಿಗೆ ಕಾಣುವ ದೇವರು ಎಂಬುದರಲ್ಲಿ ವಿರೋಧದ ಮಾತಿಲ್ಲ ಆದರೆ ತಂದೆಯ ಕರ್ತವ್ಯ ಅವನ ಶ್ರಮವನ್ನು ಹೆಚ್ಚು ವಿಶ್ಲೇಷಿಸಲಿಲ್ಲ, ನನಗನಿಸುವುದು ಕಾವ್ಯವನ್ನು ಕಟ್ಟಿದ ಹಿಂದಿನ ಕವಿಶ್ರೇಷ್ಠರು ಗಂಡಸರು ಆದ್ದರಿಂದ ಅವರ ಕಾವ್ಯಗಳು ಹೆಣ್ಣನ್ನೇ ಕೇಂದ್ರೀಕರಿಸಿ ರಚಿತವಾಗಿರಬಹುದು.

ಯಶಸ್ವೀ ಪುತ್ರನನ್ನಾಗಿ ರೂಪಿಸುವುದು ತಂದೆಯ ಬದುಕಿನ ನಿರ್ವಹಣೆಯಲ್ಲಿ ಅಡಗಿದೆ. ಕೆಲವು ಅಂಶಗಳನ್ನು ಅಳವಡಿಸಿಕೊಂಡರೆ ಸುಪುತ್ರನಾಗಿಸುವುದು ಸಾಧ್ಯವಿದೆ. ತಂದೆ ಮತ್ತು ಮಗ ಪರಸ್ಪರ ಭಾವನೆಗಳನ್ನು ವ್ಯಕ್ತಪಡಿಸುವುದು, ಬದಲಾವಣೆಗಾಗಿ ಆಸಕ್ತಿ ವಹಿಸುವುದು, ಗುರಿಮುಟ್ಟಲಾರದ ಆಸೆಗಳನ್ನು ಮನಸ್ಸಿನಿಂದ ಕಿತ್ತೆಸೆಯುವುದು, ನಮ್ಮ ಸುತ್ತಲು ಒಳ್ಳೆಯ ವಾತಾವರಣ ನಿರ್ಮಿಸಿಕೊಳ್ಳುವುದು, ತೆರೆದ ಮನಸ್ಸಿನಿಂದ ತಂದೆ ಮಗ ಭಾವನೆ ಆಸೆ ಅಭಿರುಚಿಗಳನ್ನು ಚರ್ಚಿಸುವುದು, ತಂದೆ ಮಗನ ಪ್ರೀತಿಯಲ್ಲಿ ವ್ಯಾಪಾರೀ ಮನೋಭಾವ ಇರಕೂಡದು, ತಂದೆಯಲ್ಲಿ ಮಗ ಮಗನಲ್ಲಿ ತಂದೆ ಧನಾತ್ಮಕವಾದ ಅಂಶಗಳನಷ್ಟೇ ನೋಡತಕ್ಕದ್ದು, ಆದಷ್ಟು ಋಣಾತ್ಮಕ ಚಿಂತನೆಗಳನ್ನು ಕಡಿದು ಹಾಕುವುದು ಸೂಕ್ತ, ಮಕ್ಕಳಲ್ಲಾಗುವ ಭೌತಿಕ ಮತ್ತು ಭಾವನಾತ್ಮಕ ಬದಲಾವಣೆಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸುವುದು, ಹೀಗೆ ತಂದೆ ಮಗನ ಸಂಬಂಧದಲ್ಲಿ ಗಟ್ಟಿಗೊಳ್ಳಲು ಮತ್ತು ಸಮಾಜಕ್ಕೆ ಒಳ್ಳೆಯ ನಾಗರಿಕನಾಗಿ ನಿರ್ಮಾಣಗೊಳ್ಳಲು ಹಾಗೂ ಚಾಲ್ತಿಯಲ್ಲಿರುವ ನನ್ನ ಹೆಸರನ್ನು ಮಗ ಉಳಿಸಬೇಕು ವಂಶೋದ್ಧಾರಕ ಆಗಬೇಕು ಎನ್ನುವ ತಂದೆಯಂದಿರ ಮಹತ್ವಾಕಾಂಕ್ಷೆ. ಮಕ್ಕಳನ್ನು ಪ್ರೀತಿಯಿಂದ ಮುದ್ದಿಸುತ್ತಾ..... ಬೆಳೆಸಿದಂತೆ ಸ್ನೇಹಿತರ ಸ್ಥಾನದಲ್ಲಿ ಕಂಡರೆ ತಂದೆಗೆ ತಕ್ಕ ಮಗ ಆಗೇ ಆಗುತ್ತಾನೆ.

ವೃದ್ಧಾಶ್ರಮಗಳು ಮಕ್ಕಳು ಬಂಧುಬಳಗ ಇಲ್ಲದವರಿಗೆ ಮಾತ್ರ ಆಶ್ರಯತಾಣವಾಗಲಿ, ಮಕ್ಕಳು ಮೊಮ್ಮಕ್ಕಳು ಇದ್ದವರು ಇಲ್ಲಿಗೆ ಬರದ ಹಾಗೆ ಪ್ರೀತಿಯಿಂದ ನೋಡಿಕೊಳ್ಳುವ ಅಕ್ಕರೆಯ ಗುಣಗಳು ಎಲ್ಲರಲ್ಲೂ ಇರುವಂತೆ ಆಗಲಿ, ಆ ನಿಟ್ಟಿನಲ್ಲಿ ಮಕ್ಕಳನ್ನು ಬೆಳೆಸುವುದು ಪೋಷಕರ ಬುದ್ಧಿವಂತಿಕೆಯ ಮೇಲೆ ನಿಂತಿದೆ. ಮಕ್ಕಳಿಗಾಗಿ ಆಸ್ತಿ ಹಂತಸ್ತುಗಳ ಸಂಪಾದನೆಯ ಧಾವಂತದಲ್ಲಿ ಮುಖ್ಯವಾದುದ್ದನ್ನು ಜೀವನದಲ್ಲಿ ಪರಿಗಣಿಸುವುದರಲ್ಲಿ ವಿಫಲರಾಗಿರುತ್ತೇವೆ.

ಅಮ್ಮನ ಮಡಿಲಿನಿಂದ ಕೈಹಿಡಿದು ನಮ್ಮನ್ನೆಲ್ಲ ಹೆಗಲಿಗೇರಿಸಿ ಲೋಕ ತೋರಿಸಿದ ಮಾರ್ಗದರ್ಶಕ ಅಪ್ಪನಿಗೆ ಕೃತಜ್ಞತೆ ನೀಡುವುದಾದರೆ ಸಮಾಜದ ಸತ್ಪ್ರಜೆ ಆಗಿ ಬೆಳೆದು ಏನಾದರೊಂದು ಕೊಡುಗೆ ಕೊಟ್ಟು ಹೆತ್ತವರ ವೃದ್ಧಾಪ್ಯದಲ್ಲಿ ನಾವು ಅಪ್ಪ/ಅಮ್ಮನಾಗಿ ಅವರನ್ನು ಮಗುವಿನಂತೆ ಶುಶ್ರೂಷೆ ಮಾಡೋಣ.

ಕಾಂಗ್ರೆಸ್‌ನಲ್ಲಿ ಸಿಎಂ ಸ್ಥಾನಕ್ಕೆ ಪೈಪೋಟಿ: ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್ ಜಟಾಪಟಿ



ಎಂ.ಬಿ.ಪಾಟೀಲ್ ಶಿವಾನಂದ ಪಾಟೀಲ್

ಬೆಂಗಳೂರು,ಸೆ.8–ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿರುವುದರಿಂದ ಇತ್ತ ಕಾಂಗ್ರೆಸ್‌ನಲ್ಲಿ ಸಿಎಂ ಹುದ್ದೆಗಾಗಿ ಆಕಾಂಕ್ಷಿಗಳ ನಡುವೆ ಪೈಪೋಟಿಯ ಲಕ್ಷಣಗಳು ಕಂಡುಬರುತ್ತಿವೆ.

ಎಲ್ಲಾ ಕಾಂಗ್ರೆಸ್ ಮುಖಂಡರು ಮತ್ತು ಸಚಿವರು, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರೆಯುತ್ತಾರೆ ಎಂದು ಹೇಳುತ್ತಿದ್ದಾರೆ. ಸಿಎಂ ಹುದ್ದೆಗೆ ಹಿರಿತನವೇ ಮುಖ್ಯವಾಗುವ ವಿಚಾರದಲ್ಲಿ ಹಿರಿಯ ನಾಯಕರಾದ ಎಂ.ಬಿ.ಪಾಟೀಲ್ ಮತ್ತು ಶಿವಾನಂದ ಪಾಟೀಲ್ ನಡುವೆ ಮಾತಿನ ಚಕಮಕಿ ನಡೆದಿದೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಗಲು ಆಗಲು ಎಂ.ಬಿ.ಪಾಟೀಲ್‌ಗಿಂತ ಬಹಳ ಜನರು ಹಿರಿಯರಿದ್ದಾರೆ ಎಂದು ಶಿವಾನಂದ ಪಾಟೀಲ್ ನೀಡಿದ ಹೇಳಿಕೆಗೆ ಎಂ.ಬಿ.ಪಾಟೀಲ್ ತಿರುಗೇಟು ನೀಡಿದ್ದಾರೆ. ವಿಜಯಪುರ ಜಿಲ್ಲೆ ಬಬಲೇಶ್ವರ ತಾಲೂಕಿನ ಮಮದಾಪೂರ ಗ್ರಾಮದಲ್ಲಿ ಮಾತನಾಡಿದ ಎಂಬಿ ಪಾಟೀಲ್, ನನಗಿಂತ ಹಿರಿಯರಿದ್ದಾರೆ. ಆದರೆ ಹಿರಿತನ ಮಾತ್ರ ಮಾನದಂಡವಲ್ಲ, ಈಗ ಮುಖ್ಯಮಂತ್ರಿ ಬದಲಾವಣೆಯ ಪ್ರಶ್ನೆಯೇ ಇಲ್ಲ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ, ಅವರು ಇರುತ್ತಾರೆ ಮತ್ತು ಮುಂದೆಯೂ ಮುಂದುವರಿಯುತ್ತಾರೆ, ಆದ್ದರಿಂದ ಸಿಎಂ ಬದಲಾಯಿಸುವ ಮಾತು ಅಪ್ರಸ್ತುತ ಎಂದರು.

ಶಿವಾನಂದ ಪಾಟೀಲ್ ಹೇಳಿದಂತೆ ಒಂದು ವೇಳೆ ಹಿರಿತನ ಪರಿಗಣಿಸುವುದಾದರೆ, ನಾನು ಕಾಯುತ್ತೇನೆ. ಅದನ್ನು ಒಪ್ಪಿಕೊಳ್ಳೋಣ. ಆದರೆ, ಇತ್ತೀಚೆಗೆ ಜನತಾದಳ, ಬಿಜೆಪಿಯಿಂದ ಬಂದಿರುವ ಅವರು ಮುಖ್ಯಮಂತ್ರಿ ರೇಸ್‌ನಲ್ಲಿ ಇರಲು ಸಾಧ್ಯವಿಲ್ಲ. ವಿಜಯಪುರ ಜಿಲ್ಲೆಯಿಂದ ಯಾರಾದರೂ ಮುಖ್ಯಮಂತ್ರಿ ಆಗಬೇಕಾದರೆ ನಾನು ಹೊರತುಪಡಿಸಿದರೆ ಬೇರೆ ಯಾರೂ ಇಲ್ಲ. ಶಿವಾನಂದ ಪಾಟೀಲ್ ಹೇಳಿಕೆಯು ಅವರ ವೈಯಕ್ತಿಕ ಅಭಿಪ್ರಾಯ ಎಂದು ತಳ್ಳಿಹಾಕಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಆರ್.ವಿ.ದೇಶಪಾಂಡೆ ನನಗಿಂತ ಹಿರಿಯರಿದ್ದಾರೆ. ಸತೀಶ್ ಜಾರಕಿಹೊಳಿ ನನಗಿಂತ ಕಿರಿಯರು, ಪರಮೇಶ್ವರ್ ನಾವೆಲ್ಲ ಒಂದೇ ಹಂತದಲ್ಲಿದ್ದೇವೆ. ಸಿಎಂ ಮಾಡುವ ವೇಳೆ ಸೀನಿಯರ್ ಜೂನಿಯಾರಿಟಿ ಪ್ರಶ್ನೆ ಬರಲ್ಲ. ಈಗ ಸಿಎಂ ಕುರ್ಚಿ ಖಾಲಿ ಇಲ್ಲ ಎಂದು ತಿಳಿಸಿದರು.

ಇದಕ್ಕೂ ಮುನ್ನಾ ಮಾತನಾಡಿದ್ದ ಶಿವಾನಂದ ಪಾಟೀಲ್, ಎಂಬಿ ಪಾಟೀಲ್‌ಗಿಂತ ಕಾಂಗ್ರೆಸ್‌ನಲ್ಲಿ ಹಲವರು ಹಿರಿಯರಿದ್ದಾರೆ. ಹಿರಿಯರು ಇರುವಾಗ ಕಾಯಬೇಕಲ್ಲವೇ? ಎಂದು ಪ್ರಶ್ನಿಸಿದ್ದರು. ಕೆಲಸ ಮಾಡಿ ಪಕ್ಷ ಕಟ್ಟಿಕೊಂಡು ಕಾಯುತ್ತಿರುವ ಹಿರಿಯರು ಸಿಎಂ ಆದರೆ ಖುಷಿಯಾಗುತ್ತೆ ಅಂತ ಹೇಳಿದ್ದೆ ಹೊರತು ಬೇರೇನೂ ಅಲ್ಲ ಎಂದರು. ಈ ನಡುವೆ ಮಾತನಾಡಿದ ಸತೀಶ್ ಜಾರಕಿಹೊಳಿ, ಸಿಎಂ ಬದಲಾವಣೆ ಈಗ ಅಪ್ರಸ್ತುತ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ. ನಾನು 2028ರವರೆಗೂ ಕಾಯುತ್ತೇನೆ ಎಂದರು. ಹಿರಿಯ ಕಾಂಗ್ರೆಸ್ ನಾಯಕ ಆರ್.ವಿ.ದೇಶಪಾಂಡೆ ಕೂಡಾ ಇತ್ತೀಚೆಗೆ ಮುಖ್ಯಮಂತ್ರಿ ಆಕಾಂಕ್ಷಿ ಎಂದಿದ್ದರು.

ದೇಶದ ಪ್ರಗತಿಗೆ ಕೌಶಲಯುಕ್ತ ಮಾನವ ಸಂಪನ್ಮೂಲ ಅಗತ್ಯ

ಇಸ್ರೋ ಯು.ಆರ್.ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ.ರಾಘವೇಂದ್ರ ಅಭಿಮತ



ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆದ ದ್ವಿತೀಯ ಘಟಿಕೋತ್ಸವದಲ್ಲಿ 14 ಮಂದಿ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಪದಕವನ್ನು ಇಸ್ರೋ ಯು.ಆರ್.ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ.ರಾಘವೇಂದ್ರ ಬಿ.ಕುಲಕರ್ಣಿ ವಿತರಿಸಿದರು.

ಮೈಸೂರು, ಸೆ.8(ಎಸ್‌ಪಿಎನ್)– ನಮ್ಮ ದೇಶ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಯಾಯ ಕ್ಷೇತ್ರಗಳಿಗೆ ಕೌಶಲಯುಕ್ತ ಮಾನವ ಸಂಪನ್ಮೂಲ ಅಗತ್ಯವಿದೆ ಎಂದು ಇಸ್ರೋ ಯು.ಆರ್.ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ.ರಾಘವೇಂದ್ರ ಬಿ.ಕುಲಕರ್ಣಿ ಅಭಿಪ್ರಾಯಪಟ್ಟರು.

ಮೈಸೂರು ಚದುರಂಗ ರಸ್ತೆಯಲ್ಲಿರುವ ಜಯಚಾಮರಾಜೇಂದ್ರ ತಾಂತ್ರಿಕ ಕಾಲೇಜು ಆವರಣದ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ನಡೆದ ದ್ವಿತೀಯ ಘಟಿಕೋತ್ಸವದಲ್ಲಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಪದಕ ವಿತರಣೆ ಹಾಗೂ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ, ಮಾತನಾಡಿದರು

ವಿದ್ಯಾರ್ಥಿಗಳು ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಪರಿಶ್ರಮ ಅಗತ್ಯ. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ದೇಶವನ್ನು ಮುನ್ನಡೆಸಬೇಕು. ಇಸ್ರೋ ಆರಂಭದ ದಿನಗಳು ಬಹಳ ಕಠಿಣ ದಿನಗಳನ್ನು ಎದುರಿಸಿದೆ. ಹಾಗಾಗಿ ಪ್ರಸ್ತುತ ಜಗತ್ತಿನ ಮುಂಚೂಣಿ ಬಾಹ್ಯಾಕಾಶ ಸಂಸ್ಥೆಯಾಗಿ ಹೊರಹೊಮ್ಮಿದೆ. ಇದಕ್ಕೆ ಅಲ್ಲಿನ ವಿಜ್ಞಾನಿಗಳ ಪರಿಶ್ರಮ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನದ ವಿದ್ಯಾರ್ಥಿಗಳು ನವನವೀನ ತಂತ್ರಜ್ಞಾನದ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಬೆಳೆಸಿಕೊಂಡು ಜ್ಞಾನದಾಹಿಗಳಾಗಬೇಕು. ಅಲ್ಲದೆ, ಅಧ್ಯಯನ ಸಂದರ್ಭದಲ್ಲಿ ಪಠ್ಯ ಹಾಗೂ ಪಠ್ಯಾದಾಚೆಗಿನ ಜ್ಞಾನವನ್ನು ಸಂಪಾದಿಸಿ, ದೇಶದ ಭವಿಷ್ಯವನ್ನು ಬರೆಯುವ ಯುವ ವಿಜ್ಞಾನಿಗಳಾಗಿ ಹೊರಹೊಮ್ಮಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಘಟಿಕೋತ್ಸವ ಪ್ರಮಾಣ ಪತ್ರ ವಿತರಣೆ: ಈ ವೇಳೆ ವಿವಿಧ ವಿಷಯಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 14 ವಿದ್ಯಾರ್ಥಿಗಳಲ್ಲಿ ಮೊದಲ ರ್‍ಯಾಂಕ್ ಪಡೆದ ಸಿ.ವಿ.ಉಜ್ವಲ್, ಜಿ.ಕುಶಾಲ್ ಜೈನ್, ಮಂಜುನಾಥ್‌ರಾಜೇ ಅರಸ್, ಅರ್ಫಾನ್ ಮೊಹಮ್ಮದ್ ಷರೀಫ್, ಬಿ.ಎಂ.ದರ್ಶನ್, ಸಿ.ಪಿ.ಸೃಜನ್, ಅತಿಶ್ ದೇವಿ ಪ್ರಕಾಶ್ ಆಳ್ವಾ ಹಾಗೂ ದ್ವಿತೀಯ ರ್‍ಯಾಂಕ್ ಪಡೆದ ಜಿ.ಮಂಜುನಾಥ್, ಅಹ್ಮದ್ ಅಲಿಖಾನ್, ಆರ್.ಮಂಜುನಾಥ್, ಎಂ.ಆರ್.ರಮೇಶ್, ಜೋನಾಥನ್ ವಿಕ್ಟರ್, ಎಸ್.ರಕ್ಷಿತ್‌ಕುಮಾರ್, ಕೆ.ಕುಮಾರ್ ಅರುಣ್ ಘಟಿಕೋತ್ಸವ ಪ್ರಮಾಣ ಪತ್ರ ಹಾಗೂ ಪದಕ ವಿತರಿಸಲಾಯಿತು. ನಂತರ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ 96 ವಿದ್ಯಾರ್ಥಿಗಳ ಪ್ರಮಾಣ ಪತ್ರ ವಿತರಿಸಲಾಯಿತು.

2023–24ನೇ ಸಾಲಿನ ಪರೀಕ್ಷೆಯಲ್ಲಿ 223 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇದರಲ್ಲಿ 96 ಮಂದಿ ಉನ್ನತ ಶ್ರೇಣಿ ಹಾಗೂ 14 ಮಂದಿ ಪ್ರಥಮ ಹಾಗೂ ದ್ವಿತೀಯ ರ್‍ಯಾಂಕ್ ಗಳಿಸಿದ್ದರು. ಯಶಸ್ವಿನಿ ಮತ್ತು ತಂಡದ ಪ್ರಾರ್ಥಿಸಿದರು. ಉಪನ್ಯಾಸಕಿ ಜಯರಾಜೇಶ್ವರಿ ಗಣ್ಯರನ್ನು ಸ್ವಾಗತಿಸಿದರು. ಉಪನ್ಯಾಸಕಿ ಶೃತಿ 2023–24ನೇ ಸಾಲಿನ ವರದಿ ಮಂಡಿಸಿದರು. ತೇಜಸ್ವಿನಿ ನಿರೂಪಿಸಿದರು. ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಎಸ್.ಮಂಜುಳಾ, ಪ್ರೊ.ಕೆ.ಎಸ್.ಭಕ್ತವತ್ಸಲ, ಎ.ಎಸ್.ನಾಗರಾಜ, ರೂಪಾ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪೌರಕಾರ್ಮಿಕರಿಗೆ ಬಾಗಿನ ಅರ್ಪಿಸುವ ಮೂಲಕ ಗೌರಿ-ಗಣೇಶ ಹಬ್ಬ ಆಚರಣೆ



ಗೌರಿ ಹಬ್ಬದ ಪ್ರಯುಕ್ತ ಪೌರಕಾರ್ಮಿಕರಿಗೆ ಬಾಗಿನ ನೀಡುವ ಮೂಲಕ ಹಬ್ಬವನ್ನು ವಿಶೇಷವಾಗಿ ಆಚರಿಸಲಾಯಿತು.

ಮೈಸೂರು, ಸೆ.8(ಜಿಎ)-ಗೌರಿ ಹಬ್ಬದ ಪ್ರಯುಕ್ತ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಪೌರಕಾರ್ಮಿಕರಿಗೆ ಬಾಗಿನ ನೀಡುವ ಮೂಲಕ ಹಬ್ಬವನ್ನು ವಿಶೇಷವಾಗಿ ಆಚರಿಸಿದರು.

ನಗರದ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಪಾಲಿಕೆ ಸದಸ್ಯ ಮಾ.ವಿ. ರಾಮ್ ಪ್ರಸಾದ್ ಅವರು ಪೌರಕಾರ್ಮಿಕರಿಗೆ ಬಾಗಿನ ನೀಡಿ ಶುಭ ಹಾರೈಸಿದರು.

ನಂತರ ಮಾತನಾಡಿದ ಅವರು, ಪೌರಕಾರ್ಮಿಕ ಮಹಿಳೆಯರು ತಮ್ಮ ಕುಟುಂಬದ ನಿರ್ವಹಣೆಯ ಜವಾಬ್ದಾರಿಯೊಂದಿಗೆ ನಗರದ ಜನರ ಆರೋಗ್ಯ ಸುರಕ್ಷತೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹ ಮೌಲ್ಯಯುತ ಸೇವೆ ತಮ್ಮಲ್ಲಿ ಖುಷಿ ನೀಡಿದ್ದು, ನಮಗಾಗಿ ದುಡಿಯುವ ಪೌರಕಾರ್ಮಿಕ ಮಹಿಳೆಯರ ಮನ-ಮೊಗದಲ್ಲಿ ಸಂತಸ ಮೂಡಿರುವುದು ಸಾರ್ಥಕ ತರಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಪಾಲಿಕೆ ವಲಯ ಕಚೇರಿ-1ರ ಆಯುಕ್ತ ಮಂಜುನಾಥ್ ರೆಡ್ಡಿ, ಹಿರಿಯ ಆರೋಗ್ಯ ನಿರೀಕ್ಷಕರಾದ ಶಿವಪ್ರಸಾದ್, ಸ್ಥಳೀಯ ಮುಖಂಡರಾದ ಉಮಾಶಂಕರ್, ಮಂಜುನಾಥ್, ಮುರುಳಿ, ಗುರುಮಲ್ಲಪ್ಪ, ಸಮೃದ್ಧಿ ಟ್ರಸ್ಟ್ ಅಧ್ಯಕ್ಷೆ ಸಹನಗೌಡ, ಮಧು, ತೀರ್ಥ, ರವಿ ಮತ್ತಿತರರು ಉಪಸ್ಥಿತರಿದ್ದರು.

ದೇವರನಾಮ ಸಂಕೀರ್ತನೆ



ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಗೌರಿ-ಗಣೇಶ ಹಬ್ಬದ ಪ್ರಯುಕ್ತ ಏರ್ಪಡಿಸಲಾಗಿದ್ದ ಸಂಗೀತ ಕಾರ್ಯಕ್ರಮದಲ್ಲಿ ಮೈಸೂರಿನ ಸಂಗೀತ ವಿದುಷಿ ವಿಜಯಲಕ್ಷ್ಮಿ (ಲಕ್ಷ್ಮಿ) ವಸಂತ್ ಅಮು ದೇವರನಾಮ ಸಂಕೀರ್ತನೆಯನ್ನು ನಡೆಸಿಕೊಟ್ಟರು. ವಿದ್ವಾನ್ ಯಶಸ್ವಿ(ವಯಲಿನ್), ವಿದ್ವಾನ್ ವಿಕ್ರಂ ಭಾರದ್ವಾಜ್ (ಮೃದಂಗ) ಸಾಥ್ ನೀಡಿದರು.

ಮೈಸೂರಲ್ಲಿ ಶ್ರದ್ಧಾಭಕ್ತಿಯ ಗೌರಿ-ಗಣೇಶ ಹಬ್ಬ





ಮೈಸೂರಿನ 101 ಗಣಪತಿ ದೇವಾಲಯದಲ್ಲಿ ಅಲಂಕೃತಗೊಂಡ ಗಣಪತಿ ವಿಗ್ರಹ ವೀಕ್ಷಣೆಗೆ ಮುಗಿ ಬಿದ್ದಿರುವ ಭಕ್ತರು. ಮತ್ತೊಂದು ಚಿತ್ರದಲ್ಲಿ ನಗರ ಪಾಲಿಕೆ ವತಿಯಿಂದ ಗಣಪತಿ ಮೂರ್ತಿ ವಿಸರ್ಜನೆಗೆ ವ್ಯವಸ್ಥೆ ಮಾಡಿದ್ದ ಟ್ಯಾಂಕರ್‌ಗಳಲ್ಲಿ ಭಕ್ತರು ಗೌರಿ-ಗಣಪತಿ ಮೂರ್ತಿಯನ್ನು ವಿಸರ್ಜಿಸುತ್ತಿರುವುದು.

ಮೈಸೂರು, ಸೆ.8(ಎಂಟಿವೈ)- ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶನಿವಾರ ಗೌರಿ-ಗಣೇಶ ಹಬ್ಬವನ್ನು ವಿಜೃಂಭಣೆ ಹಾಗೂ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಹಿಂದೂ ಸಂಪ್ರದಾಯದಲ್ಲಿ ಗಣಪತಿ ಹಬ್ಬಕ್ಕೆ ತನ್ನದೇ ಆದ ಮಹತ್ವವಿದ್ದು, ವಿಘ್ನ ನಿವಾರಕ ಗಣೇಶ ಮೂರ್ತಿಯನ್ನು ಎಲ್ಲೆಡೆ ಪ್ರತಿಷ್ಠಾಪಿಸಿ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸುವ ಮೂಲಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಶನಿವಾರ ಬೆಳಗಿನಿಂದಲೇ ವಿವಿಧೆಡೆ ಮಾರಾಟ ಮಾಡುತ್ತಿದ್ದ ಗಣಪನ ವಿಗ್ರಹವನ್ನು ಮೈಸೂರಿನ ಜನತೆ ಖರೀದಿ ಮಾಡಿ ಮನೆಗೆ ಕೊಂಡೊಯ್ಯುವ ಮೂಲಕ ಗಣಪತಿ ಹಬ್ಬಕ್ಕೆ ಸಜ್ಜಾದರು. ಅಲ್ಲದೇ ವಿವಿಧ ಬಡಾವಣೆಗಳಲ್ಲಿ, ರಸ್ತೆಗಳಲ್ಲಿ, ಆಟೋ ನಿಲ್ದಾಣಗಳಲ್ಲಿ ಪ್ರತಿಷ್ಠಾಪಿಸುವ ಗಣಪತಿ ವಿಗ್ರಹಗಳನ್ನು ಸಂಜೆ ವೇಳೆಗೆ ಖರೀದಿಸಿ ತಂದು ಪ್ರತಿಷ್ಠಾಪಿಸುವ ಮೂಲಕ ಗಣಪತಿ ಹಬ್ಬಕ್ಕೆ ಕಳೆ ಕಟ್ಟಿದರು.

ಸಂಜೆ ವೇಳೆಗೆ ಗಣಪತಿ ಹಬ್ಬ ಸಾಂಸ್ಕೃತಿಕ ನಗರಿಯಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸುವ ಮೂಲಕ ವಿನಾಯಕನಿಗೆ ವಿಶೇಷ ಪೂಜೆ ಸಲ್ಲಿಸಿದರು. ವಿವಿಧ ಬಣ್ಣ-ಬಣ್ಣದ ವಿದ್ಯುದ್ದೀಪಗಳಿಂದ ಅಲಂಕೃತಗೊಂಡಿದ್ದ ಚಪ್ಪರದಲ್ಲಿ ವಿವಿಧ ಬಗೆಯ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜಿಸಲಾಯಿತು.

ದೇವಾಲಯಗಳಲ್ಲಿ: ಮೈಸೂರಿನ ವಿವಿಧ ಗಣಪತಿ ದೇವಾಲಯಗಳಲ್ಲಿ ಗಣೇಶ ಹಬ್ಬದ ಅಂಗವಾಗಿ ವಿಶೇಷ ಪೂಜಾ ಮಹೋತ್ಸವವನ್ನು ಆಯೋಜಿಸಲಾಗಿತ್ತು. ಅದರಲ್ಲೂ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಇರುವ ಗಣೇಶ ದೇವಾಲಯ, ಅಗ್ರಹಾರದ 101 ಗಣಪತಿ ದೇವಾಲಯ, ವರಸಿದ್ಧಿವಿನಾಯಕ ದೇವಾಲಯ, ಪಡುವಾರಹಳ್ಳಿಯ ಗಣಪತಿ ದೇವಸ್ಥಾನ, ಬಿಎಂಶ್ರೀ ನಗರದಲ್ಲಿರುವ ಗಣಪತಿ ದೇವಾಲಯ, ಗೋಕುಲಂ, ಶಾರದಾದೇವಿನಗರ, ಸಿದ್ಧಾರ್ಥ ಬಡಾವಣೆಯಲ್ಲಿರುವ ಗಣಪತಿ ದೇವಾಲಯ, ಬೃಂದಾವನ ಬಡಾವಣೆ, ವಿಠಲನಗರ ಸೇರಿದಂತೆ ನಗರದ ವಿವಿಧ ಗಣಪತಿ ದೇವಾಲಯಗಳನ್ನು ಬಣ್ಣ-ಬಣ್ಣದ ಹೂಗಳಿಂದ ಅಲಂಕರಿಸಿ ಗಣೇಶ ಮೂರ್ತಿಗೆ ಬೆಣ್ಣೆ ಅಲಂಕಾರ ಸೇರಿದಂತೆ ವಿವಿಧ ಅಲಂಕಾರವನ್ನು ಮಾಡುವ ಮೂಲಕ ಗಣಪತಿ ಹಬ್ಬದ ವಿಶೇಷ ಪೂಜಾ ಮಹೋತ್ಸವವನ್ನು ಆಚರಿಸಲಾಯಿತು.

ಗಣಪತಿ ವಿಸರ್ಜನೆ

ಗಣಪತಿ ಹಬ್ಬದ ಅಂಗವಾಗಿ ಒಂದೇ ದಿನ ಪೂಜಿಸುವ ಸಂಪ್ರದಾಯ ಆಚರಿಸುವ ನೂರಾರು ಮಂದಿ ಶನಿವಾರ ಸಂಜೆಯೇ ಗಣಪತಿ ಮೂರ್ತಿಯನ್ನು ವಿಸರ್ಜಿಸಿದರು. ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಗಣಪತಿ ವಿಸರ್ಜನೆಗೆ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿತ್ತು. ನಿಗದಿತ ಸ್ಥಳದಲ್ಲಿ ಸಂಜೆ ಟ್ಯಾಂಕರ್‌ಗಳನ್ನು ನಿಲ್ಲಿಸಿ ಗಣಪತಿ ವಿಸರ್ಜನೆಗೆ ಕ್ರಮ ಕೈಗೊಳ್ಳಲಾಗಿತ್ತು. ನೂರಾರು ಮಂದಿ ತಮ್ಮ ಮನೆಯಲ್ಲಿ ಪೂಜಿಸಿದ್ದ ಗಣಪತಿ ಮೂರ್ತಿಯನ್ನು ಗೌರಿ ಮೂರ್ತಿಯೊಂದಿಗೆ ಶಾಸ್ತ್ರೋಕ್ತವಾಗಿ ತಂದು ವಿಸರ್ಜನೆ ಮಾಡುವ ಮೂಲಕ ಗೌರಿ-ಗಣೇಶ ಹಬ್ಬವನ್ನು ಸಂಪನ್ನಗೊಳಿಸಿದರು.

ಮತ್ತಷ್ಟು ಮಂದಿ ಮೈಸೂರಿನ ಹೊರ ವಲಯದ ಕಾಲುವೆ, ಕೆರೆಗಳಲ್ಲಿ ವಿಸರ್ಜಿಸಿದರು. ನೂರಾರು ಮಂದಿ ಮೈಸೂರು-ಬೆಂಗಳೂರು ಮುಖ್ಯರಸ್ತೆಯ ಸಿದ್ದಲಿಂಗಪುರ, ಮೈಸೂರು-ಬನ್ನೂರು ಮುಖ್ಯ ರಸ್ತೆಯ ವರುಣ ಉಪ ನಾಲೆ, ನರಸೀಪುರ ರಸ್ತೆಯ ಉಪ ನಾಲೆಗಳಲ್ಲಿ ಗೌರಿ-ಗಣಪತಿ ಮೂರ್ತಿಯನ್ನು ವಿಸರ್ಜಿಸಿ ನಮಿಸಿದರು.

ಪ್ರಸಾದ ವಿತರಣೆ: ಗಣಪತಿ ಹಬ್ಬದ ಹಿನ್ನೆಲೆಯಲ್ಲಿ ವಿವಿಧ ರಸ್ತೆ ಮತ್ತು ಬಡಾವಣೆಗಳಲ್ಲಿ ಗಣಪತಿಯ ಮೂರ್ತಿಯನ್ನು ಪೂಜಿಸುವ ಮೂಲಕ ಗಣಪತಿ ಹಬ್ಬವನ್ನು ಆಚರಿಸಲಾಯಿತು. ಈ ವೇಳೆ ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಯಿತು.

ಚಿನ್ನಾಭರಣ ಕಳುವಾದ 38 ಗಂಟೆಯಲ್ಲೇ ಆರೋಪಿಗಳ ಬಂಧಿಸಿದ ಪೊಲೀಸರು

ಮೈಸೂರು, ಸೆ.8(ಎಂಕೆ)- ಮನೆ ಮಂದಿಯೆಲ್ಲಾ ನಿದ್ರೆಯಲ್ಲಿದ್ದಾಗ ಟೆರೇಸ್ ಮೇಲಿನ ಬಾಗಿಲು ಮೀಟಿ ಚಿನ್ನಾಭರಣ ದೋಚಿದ್ದ ಖದೀಮರಿಬ್ಬರನ್ನು ಪ್ರಕರಣ ದಾಖಲಾದ 38 ಗಂಟೆಗಳಲ್ಲಿ ಬಂಧಿಸಿರುವ ನಜರ್‌ಬಾದ್ ಠಾಣೆ ಪೊಲೀಸರು, ಬಂಧಿತರಿಂದ ಸುಮಾರು 17 ಲಕ್ಷ ರೂ.ಮೌಲ್ಯದ 250 ಗ್ರಾಂ ಚಿನ್ನಾಭರಣ, 2 ಕೆಜಿ 500 ಗ್ರಾಂ ತೂಕದ ಬೆಳ್ಳಿ ಪದಾರ್ಥ ವಶಕ್ಕೆ ಪಡೆದಿದ್ದಾರೆ.

ತಮಿಳುನಾಡಿನ ವಿಳ್ಳುಪುರಂ ಜಿಲ್ಲೆ, ಎನ್.ಆರ್.ಪೇಟ್ಟೈ ನಿವಾಸಿ ಮಣಿ ಅಲಿಯಾಸ್ ಎಸ್.ನಾಗಮಣಿ(47), ನಂಜನಗೂಡಿನ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ರವಿಕುಮಾರ್(44) ಬಂಧಿತ ಆರೋಪಿಗಳು. ಮೈಸೂರಿನ ಸಿದ್ಧಾರ್ಥ ಬಡಾವಣೆ ನಿವಾಸಿ ಸುಗುಣ(70) ಎಂಬುವರ ಮನೆಯೊಳಗೆ ಸೆ.7ರ ರಾತ್ರಿ ಟೆರೇಸ್ ಮೇಲಿನ ಬಾಗಿಲು ಮುರಿದು ನುಗ್ಗಿದ ಖದೀಮರಿಬ್ಬರು, ನಿದ್ರೆಗೆ ಜಾರಿದ್ದ ಮನೆ ಮಂದಿಯ ಅರಿವಿಗೆ ಬಾರದಂತೆ ಬೀರುವಿನಲ್ಲಿದ್ದ ಚಿನ್ನಾಭರಣ ದೋಚಿದ್ದಾರೆ.

17 ಲಕ್ಷ ರೂ ಮೌಲ್ಯದ ಚಿನ್ನಾಭರಣ ವಶ



ಆರೋಪಿಗಳಿಂದ ವಶಪಡಿಸಿಕೊಂಡ ಚಿನ್ನಾಭರಣದೊಂದಿಗೆ ದೇವರಾಜ ವಿಭಾಗದ ಎಸಿಪಿ ಎಸ್.ಶಾಂತಮಲ್ಲಪ್ಪ ನಜರ್‌ಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಪಿಎಸ್‌ಐ ಹಾಗೂ ಸಿಬ್ಬಂದಿಗಳನ್ನು ಚಿತ್ರದಲ್ಲಿ ಕಾಣಬಹುದು.

ಬೆಳಗ್ಗೆ ಎದ್ದು ನೋಡಿದಾಗ ಮನೆಯಲ್ಲಿ ಕಳ್ಳತನವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತೀವ್ರ ಕಾರ್ಯಾಚರಣೆ ನಡೆಸಿದ ಪೊಲೀಸರು, 38 ಗಂಟೆಗಳಲ್ಲಿ ಆರೋಪಿಗಳಿಬ್ಬರನ್ನು ಬಂಧಿಸಿದ್ದಾರೆ. ಅಲ್ಲದೆ ಆರೋಪಿ ರವಿಕುಮಾರ್ ಮನೆ ಪರಿಶೀಲನೆ ನಡೆಸಿದ ಪೊಲೀಸರು, ಕಳ್ಳತನ ಮಾಡಿ ಮನೆಯಲ್ಲಿಟ್ಟ ಸುಮಾರು 17 ಲಕ್ಷ ರೂ. ಮೌಲ್ಯದ 250 ಗ್ರಾಂ ಚಿನ್ನಾಭರಣ, 2 ಕೆಜಿ 500 ಗ್ರಾಂ ತೂಕದ ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ದೇವರಾಜ ವಿಭಾಗದ ಎಸಿಪಿ ಎಸ್.ಶಾಂತಮಲ್ಲಪ್ಪ ಉಸ್ತುವಾರಿಯಲ್ಲಿ ನಜರ್‌ಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಪಿಎಸ್‌ಐಗಳಾದ ಶ್ರೀನಿವಾಸ್ ಪಾಟೀಲ್, ಪಿ.ನಟರಾಜು, ಪ್ರೊಬೇಷನರಿ ಪಿಎಸ್‌ಐ ಶೇಖ್ ಫೀರೋಜ್, ಸಿಬ್ಬಂದಿಗಳಾದ ಬಿ.ವಿ. ಪ್ರಕಾಶ್, ರಮೇಶ್, ಎಸ್.ಸತೀಶ್‌ಕುಮಾರ್, ಎಂ.ಸಂಜು, ವೆಂಕಟೇಶ್, ಮೊಹಮ್ಮದ್ ಇಸ್ಮಾಯಿಲ್, ಚಾಲಕ ಪ್ರವೀಣ್ ಹಾಗೂ ಸಿಡಿಆರ್ ಘಟಕದ ಪಿ.ಕುಮಾರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

101 ಗಣಪತಿ ಪ್ರತಿಷ್ಠಾಪನಾ ಕಾರ್ಯಕ್ರಮ...



ಮೈಸೂರಿನ ಪಡುವಾರಹಳ್ಳಿ ಗ್ರಾಮದಲ್ಲಿ ಬಬ್ರುವಾಹನ ಕನ್ನಡ ಯುವಕರ ಸಮಿತಿ ಆಶ್ರಯದಲ್ಲಿ 101 ಗಣಪತಿ ಪ್ರತಿಷ್ಠಾಪನಾ ಕಾರ್ಯಕ್ರಮ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ನೇತೃತ್ವದಲ್ಲಿ ನೆರವೇರಿತು. ಈ ವೇಳೆ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಸಿ.ಡಿ.ಕುಮಾರ್, ಎನ್.ಮಂಜುನಾಥ್, ಎನ್.ಮಹದೇವ ಉಪಸ್ಥಿತರಿದ್ದರು.

ಕೇರ್ಗಳ್ಳಿಯಲ್ಲಿ ಗೌರಿ-ಗಣೇಶ ಹಬ್ಬ



ಮೈಸೂರಿನ ಕೇರ್ಗಳ್ಳಿಯ ರಿಷಭ್ ಸಿದ್ಧಿ ಲೇಔಟ್ ನಿವಾಸಿಗಳು ವಿಜೃಂಭಣೆಯಿಂದ ಗೌರಿ-ಗಣೇಶ ಹಬ್ಬ ಆಚರಿಸಿದರು. ಈ ವೇಳೆ ಗಣಪನಿಗೆ ವಿಶೇಷ ಪೂಜೆ ಮತ್ತು ನೈವೇದ್ಯ ನೆರವೇರಿಸಿ ಪ್ರಸಾದ ವಿತರಿಸಲಾಯಿತು. ಸಂಜೆಯ ಹೊತ್ತಿಗೆ ವೈಭವದ ಮೆರವಣಿಗೆ ಮೂಲಕ ವಿಸರ್ಜಿಸಲಾಯಿತು.

ನಟ ಗೋಲ್ಡನ್ ಸ್ಟಾರ್ ಗಣೇಶರಿಂದ ಎಂ.ಎಸ್.ಗೋಲ್ಡ್ ಆಭರಣ ಮಳಿಗೆ ಉದ್ಘಾಟನೆ

ಮೈಸೂರು, ಸೆ.8(ಆರ್‌ಕೆ)-ಮೈಸೂರಿನ ಬಿ.ಎನ್.ರಸ್ತೆಯಲ್ಲಿ ಆರಂಭವಾಗಿರುವ ಎಂ.ಎಸ್.ಗೋಲ್ಡ್ ಮತ್ತು ವಜ್ರ ಮಾರಾಟ ಮಳಿಗೆಯನ್ನು ಕನ್ನಡದ ಚಲನಚಿತ್ರ ನಾಯಕ ನಟ ಗೋಲ್ಡನ್ ಸ್ಟಾರ್ ಗಣೇಶ ಅವರು ಭಾನುವಾರ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಸಂಪ್ರದಾಯ, ಸಂಸ್ಕೃತಿಗೆ ಜನರು ಹೆಚ್ಚು ಒತ್ತು ಕೊಡುತ್ತಾರೆ. ಉಡುಪು, ಅಲಂಕಾರದ ಸಮೃದ್ಧಿಗೆ ಪ್ರಸಿದ್ಧಿಯಾಗಿರುವ ಪಾರಂಪರಿಕ ನಗರಿಯಲ್ಲಿ ಎಂ.ಎಸ್.ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ ತೆರೆದಿರುವುದು ಇಲ್ಲಿನ ಆಭರಣ ಪ್ರಿಯರಿಗೆ ಉಪಯುಕ್ತಕಾರಿ ಎಂದರು.

ನಾಡಿನ ಜನತೆಗೆ ಗೌರಿ-ಗಣೇಶ ಹಬ್ಬ ಹಾಗೂ ದಸರಾ ಮಹೋತ್ಸವಕ್ಕೆ ಶುಭಾಶಯ ಕೋರಿದ ನಟ ಗಣೇಶ್, ಚಿತ್ರೀಕರಣ ಹಂತದಲ್ಲಿರುವ ತಮ್ಮ ಹೊಸ ಚಿತ್ರದಲ್ಲಿ ಮನೆ ಮಂದಿ ಎಲ್ಲಾ ಕುಳಿತು ನೋಡುವಂತೆ ಸೆಂಟಿಮೆಂಟಲ್ ವಿಷಯಕ್ಕೆ ಒತ್ತು ನೀಡಲಾಗಿದೆ ಎಂದರು. ಆಭರಣ ಮಳಿಗೆಯ ವ್ಯವಸ್ಥಾಪಕ ನಿರ್ದೇಶಕ ಸಮೀರ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಶಿನೋದ್, ಸಕೀರ್, ಮೊಹಮದ್ ಕಾಡನಕೋಟೆ ಹಾಗೂ ಇತರರು ಉಪಸ್ಥಿತರಿದ್ದರು.



ಬಿ.ಎನ್.ರಸ್ತೆಯಲ್ಲಿ ಆರಂಭವಾಗಿರುವ ಎಂ.ಎಸ್.ಗೋಲ್ಡ್ ಮತ್ತು ವಜ್ರ ಮಾರಾಟ ಮಳಿಗೆಯನ್ನು ಕನ್ನಡದ ಚಲನಚಿತ್ರ ನಾಯಕ ನಟ ಗೋಲ್ಡನ್ ಸ್ಟಾರ್ ಗಣೇಶ ಅವರು ಭಾನುವಾರ ಉದ್ಘಾಟಿಸಿದರು.

ದೇಶಕ್ಕೆ ಸಿಖ್ ಸಮುದಾಯದ ಕೊಡುಗೆ ಅಪಾರ

ಸಂಸದ ಯದುವೀರ್ ಅಭಿಮತ



ಮೈಸೂರು, ಸೆ.8(ಎಸ್‌ಪಿಎನ್)-ಸಿಖ್ ಸಮುದಾಯ ದೇಶಕ್ಕೆ ನೀಡಿರುವ ಸೇವೆ ಅಪಾರ. ಹಾಗಾಗಿ ಮುಖಂಡರು ಭಾರತೀಯ ಪರಂಪರೆ ಮತ್ತು ಮೌಲ್ಯವನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ ನೀಡಿದರು.

ಮೈಸೂರು ಕೆಆರ್‌ಎಸ್ ರಸ್ತೆಯ ಗುರುದ್ವಾರ ಶ್ರೀಗುರುಸಿಂಗ್ ಸಭಾದಲ್ಲಿ ಭಾನುವಾರ ಸಿಖ್ ಸಮುದಾಯದಿಂದ ಹಮ್ಮಿಕೊಂಡಿದ್ದ 'ಗುರು ಗ್ರಂಥ ಸಾಹಿಬ್ ಪ್ರಕಾಶ್ ಉತ್ಸವ್'ದಲ್ಲಿ ಪಾಲ್ಗೊಂಡು ಮಾತನಾಡಿದರು.

ಭಾರತ ವಿವಿಧತೆಯಲ್ಲಿ ಏಕತೆ ಹೊಂದಿದೆ. ಸಿಖ್ ಸಮುದಾಯದ ಈ ಕಾರ್ಯಕ್ರಮ ಉತ್ತಮ ನಿದರ್ಶನ. ಮೈಸೂರಿನಲ್ಲಿ ನೆಲೆಸಿ, ತಮ್ಮ ಕೆಲಸದ ನಡುವೆಯೂ ಸಮುದಾಯದ ಕಾರ್ಯಕ್ರಮವನ್ನು ಸಂಘಟಿಸುತ್ತಿರುವುದು ಅಭಿನಂದನಾರ್ಹ ಎಂದು ತಿಳಿಸಿದರು.

ದೇಶದಲ್ಲಿ ಸಹೋದರತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ವಿಕಸಿತ ಹಾಗೂ ಸಮೃದ್ಧ ಭಾರತದ ನಿರ್ಮಾಣಕ್ಕಾಗಿ ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕಾದ ಅನಿವಾರ್ಯತೆಯಿದೆ. ಭ್ರಾತೃತ್ವ ಭಾವನೆಯನ್ನು ಬೆಳೆಸಿಕೊಂಡು ನಮ್ಮ ಸಂಸ್ಕೃತಿಯ ಮೌಲ್ಯ ಎತ್ತಿ ಹಿಡಿಯುವ ಕಾರ್ಯ ಮಾಡೋಣ ಎಂದು ಸಲಹೆ ನೀಡಿದರು.

ಈ ವೇಳೆ ಬೆಂಗಳೂರಿನ ತಂಡ ಹಾಗೂ ಮೈಸೂರಿನ ದರ್ಶನ್ ಸಿಂಗ್ ತಂಡದ ಸದಸ್ಯರು ಕೀರ್ತನೆಗಳನ್ನು ಹಾಡಿದರು. ಗಾಯನಕ್ಕೆ ಸಮುದಾಯದ ಸದಸ್ಯರು ದನಿಗೂಡಿಸಿದರು. ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅಭಿನಂದಿಸಲಾಯಿತು.

ಧಾರ್ಮಿಕ ಸಭೆಯಲ್ಲಿ ಮುಖಂಡರಾದ ಸುಖವಿಂದರ್ ಸಿಂಗ್, ಹರ್‌ಪ್ರೀತ್ ಸಿಂಗ್, ಜಸ್‌ಬಿರ್ ಸಿಂಗ್, ಮನ್‌ಪ್ರೀತ್ ಕೌರ್ ಭಾಗವಹಿಸಿದ್ದರು.

ಮಾಧವಕೃಪಾದಲ್ಲಿ ಅರ್ಥಪೂರ್ಣ ಗಣೇಶೋತ್ಸವ

ಮೈಸೂರು, ಸೆ.8(ಎಸ್‌ಬಿಡಿ)- ಮೈಸೂರಿನ ಮಾಧವ ಕೃಪಾದಲ್ಲಿ ವಿಶಿಷ್ಟ ಹಾಗೂ ಅರ್ಥಪೂರ್ಣ ಗಣೇಶೋತ್ಸವ ಆಯೋಜಿಸಲಾಗಿದೆ.

ಪರಿಸರ ಸ್ನೇಹಿ ಗಣೇಶನ ವಿಗ್ರಹ ಪ್ರತಿಷ್ಠಾಪನೆ ಜೊತೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪನೆ, ಬೆಳೆದು ಬಂದ ದಾರಿ, ಅದರ ಸೇವಾ ಪಥ, ಸಾಧನೆ, ದೇಶ ಸೇವೆ, ಸಂಘದ ಮೂಲಕ ಮೂಡಿಬಂದ ಜನ ಸೇವಕರು, ದೇಶ-ವಿದೇಶಗಳಲ್ಲಿ ಸಂಘದ ಚಟುವಟಿಕೆಗಳು, ಪ್ರಮುಖ ಘಟನಾವಳಿಗಳು ಸೇರಿದಂತೆ ಸಂಘದ ಇತಿಹಾಸದ ಮೈಲಿಗಲ್ಲುಗಳು, ಸಂಘದ ಬಗ್ಗೆ ಗಣ್ಯರ ಅಭಿಪ್ರಾಯ ಕುರಿತ ಪ್ರದರ್ಶನ ಏರ್ಪಡಿಸಿರುವುದು ಜನರ ಮೆಚ್ಚುಗೆ ಪಡೆದಿದೆ.

ನಿತ್ಯ ಕಾರ್ಯಕ್ರಮ: ಗಣೇಶೋತ್ಸವದ ಅಂಗವಾಗಿ ಪ್ರತಿದಿನ ಸಂಜೆ 6 ರಿಂದ 8ರವರೆಗೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಬಳಿಕ ಪ್ರಸಾದ ವಿತರಣೆ ಇರಲಿದೆ. ಸೆ.11ರಂದು ನೂರಕ್ಕೂ ಹೆಚ್ಚು ಸಾರ್ವಜನಿಕ ಗಣೇಶ ವಿಗ್ರಹಗಳೊಂದಿಗೆ ಮಾಧವ ಕೃಪಾ ಗಣಪತಿಯನ್ನೂ ವಿಸರ್ಜಿಸಲಾಗುತ್ತದೆ.

ಗಣೇಶೋತ್ಸವದಲ್ಲಿ ಭಾಗಿಯಾದ ಸಂಸದ ಯದುವೀರ್, ಆರ್‌ಎಸ್‌ಎಸ್ ಕುರಿತ ಪ್ರದರ್ಶನವನ್ನು ವೀಕ್ಷಿಸಿ ಸಂಘದ ಸಂದೇಶವನ್ನು ಎಲ್ಲೆಡೆ ಪಸರಿಸುವ ನಿಟ್ಟಿನಲ್ಲಿ ಮತ್ತಷ್ಟು ಪ್ರಯತ್ನಗಳಾಗಬೇಕಿದೆ ಎಂದು ತಿಳಿಸಿದರು.




ಮೈಸೂರಿನ ಮಾಧವ ಕೃಪಾದಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ ಬಳಿ ಬೃಹತ್ ಅಗರ್‌ಬತ್ತಿಯನ್ನು ಸಂಸದ ಯದುವೀರ್ ಹೊತ್ತಿಸಿದರು.

ಅಯೋಧ್ಯೆಯ ಶ್ರೀ ಬಾಲರಾಮ ಮೂರ್ತಿ ಕೆತ್ತನೆ ಹಿರಿಮೆಯ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಾಧನೆ ಎಲ್ಲರಿಗೂ ಆದರ್ಶ ಎಂದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ಆರ್‌ಎಸ್‌ಎಸ್ ಹಿರಿಯ ಮುಖಂಡರಾದ ಮಾ.ವೆಂಕಟರಾಮು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಹೆಣ್ಣು ಭ್ರೂಣ ಹತ್ಯೆ ಪ್ರಕರಣ: ಮೈಸೂರಿನ ಮೂವರ ಬಂಧನ


ಸೋಮಶೇಖರ್


ರಾಮಕೃಷ್ಣ


ಗುರು


ಮಂಡ್ಯ,ಸೆ.8– ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರು ಆರೋಪಿಗಳನ್ನು ಮಂಡ್ಯ ಪೊಲೀಸರು ಬಂಧಿಸಿದ್ದಾರೆ. ಮಂಡ್ಯ ಜಿಲ್ಲೆಯ ಪಾಂಡವಪುರ, ಮೇಲುಕೋಟೆ ಹಾಗೂ ಬೆಳ್ಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ 12 ಮಂದಿಯನ್ನು ಮಂಡ್ಯ ಜಿಲ್ಲಾ ವಿಶೇಷ ಪೊಲೀಸ್ ತಂಡ ಬಂಧಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರನ್ನು ಬಂಧಿಸಲಾಗಿದೆ.

ಆರೋಪಿಗಳು ಕೃತ್ಯಕ್ಕೆ ಬಳಸುತ್ತಿದ್ದ ಸ್ಕ್ಯಾನಿಂಗ್ ಯಂತ್ರಗಳು, ಮೂರು ಕಾರು ಹಾಗೂ ಬಂಧಿತರ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ತನಿಖಾ ತಂಡ ಎಲ್ಲಾ ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮುಂದುವರೆದಿದೆ. ಬಂಧಿತರನ್ನು ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಬನ್ನೂರಿನ ಬೇವಿನಹಳ್ಳಿ ಗ್ರಾಮದ ರಾಮಕೃಷ್ಣ(55), ಮೈಸೂರು ನಗರದ ಆದಿಶಕ್ತಿ ಬಡಾವಣೆಯ ಸೋಮಶೇಖರ್ ಪಾಟೀಲ್(38) ಹಾಗೂ ಬನ್ನೂರು ಪಟ್ಟಣದ ಗುರು(22) ಎಂದು ಗುರುತಿಸಲಾಗಿದೆ.

ಶೀಘ್ರದಲ್ಲೇ ಹೆಜ್ಜಾಲ–ಮಳವಳ್ಳಿ ರೈಲ್ವೆ ಯೋಜನೆ

ಆದಿಚುಂಚನಗಿರಿ,ಸೆ.8–ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಜನರ ಬಹುದಿನದ ಕನಸಾದ ರೈಲ್ವೆ ಯೋಜನೆಯನ್ನು ಶೀಘ್ರದಲ್ಲೇ ಕಾರ್ಯರೂಪಕ್ಕೆ ತರಲಿದ್ದು, ಹೆಜ್ಜಾಲ, ಮಳವಳ್ಳಿ ಮಾರ್ಗವಾಗಿ ಚಾಮರಾಜನಗರ ತಲುಪುವ ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಭಾನುವಾರ ಶ್ರೀ ಕ್ಷೇತ್ರ ಆದಿಚುಂಚನಗಿರಿಯ ಕಾಲಭೈರವೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಕ್ಷೇತ್ರದ ದೇವತೆಗಳು ಹಾಗೂ ಜಗದ್ಗುರು ಡಾ.ಬಾಲಗಂಗಾಧರನಾಥ ಮಹಾ ಸ್ವಾಮೀಜಿ ಗದ್ದುಗೆಗೆ ಭೇಟಿ ನೀಡಿ ದರ್ಶನ ಪಡೆದು ಕಾಲಭೈರವೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಪೀಠಾಧಿಪತಿ ನಿರ್ಮಲಾನಂದಶ್ರೀಗಳ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯ ಸರ್ಕಾರದಿಂದ ರಾಜ್ಯಕ್ಕೆ ಹಲವಾರು ಯೋಜನೆಗಳನ್ನು ತಂದಿದ್ದು, ಅಭಿವೃದ್ಧಿ ಕಾರ್ಯಗಳು ಮತ್ತೆ ಮುಂದುವರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಆದಿಚುಂಚನಗಿರಿ ಪೀಠಾಧಿಪತಿ ನಿರ್ಮಲಾನಂದ ಶ್ರೀಗಳಿಂದ ಕೇಂದ್ರ ಸಚಿವ ವಿ.ಸೋಮಣ್ಣ ಆಶೀರ್ವಾದ ಪಡೆದರು.

ರಾಜ್ಯದಲ್ಲಿ ಹೊಸ ಮನ್ವಂತರಕ್ಕೆ ಹಲವು ರೈಲ್ವೆ ಯೋಜನೆಯು ನಾಂದಿ ಹಾಡಲಿದೆ. ರಾಜ್ಯದ ಶೇ.80ರಷ್ಟು ರೈಲ್ವೆ ಯೋಜನೆಯ ಕಾಮಗಾರಿಗಳು ಮುಗಿದಿವೆ. ನೂತನವಾಗಿ ರೈಲ್ವೆ ಇಲಾಖೆಯಿಂದ ಬೆಂಗಳೂರಿನ ಹೆಜ್ಜಾಲ ಮಾರ್ಗವಾಗಿ ಮಳವಳ್ಳಿ, ಚಾಮರಾಜನಗರಕ್ಕೆ ಮಾರ್ಗ ಕಲ್ಪಿಸುವ ಯೋಜನೆಯು 142 ಕೋಟಿ ವೆಚ್ಚದಲ್ಲಿ ಚಾಲನೆ ನೀಡಲಾಗಿದೆ. ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಶೀಘ್ರವೇ ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದರು. ಮೊಟ್ಟ ಮೊದಲ ಬಾರಿಗೆ ಸಂಸದನಾಗಿ ಆಯ್ಕೆಯಾಗಿ ಕೇಂದ್ರದಲ್ಲಿ ಸಚಿವ ಸ್ಥಾನ ಸಿಗಲು ಶ್ರೀ ಕ್ಷೇತ್ರದ ಕಾಲಭೈರವೇಶ್ವರ ಆಶೀರ್ವಾದ ಪರಮ ಪೂಜ್ಯ ಸ್ವಾಮೀಜಿಗಳ ಮಾರ್ಗವೇ ನನಗೆ ಆಶೀರ್ವಾದವಾಗಿದೆ. ನನಗೂ ಶ್ರೀಮಠಕ್ಕೂ ಅವಿನಾಭಾವ ಸಂಬಂಧವಿದ್ದು, ಈ ಸಂಬಂಧ ಬಾಲಗಂಗಾಧರನಾಥ ಶ್ರೀಗಳ ಕಾಲದಿಂದ ನಿರ್ಮಲಾನಂದಶ್ರೀಗಳ ಕಾಲದವರೆಗೂ ಮುಂದುವರೆದಿದೆ ಎಂದರು.

ಈ ಸಂದರ್ಭದಲ್ಲಿ ತುಮಕೂರು ಗ್ರಾಮಾಂತರ ಶಾಸಕ ಕೆ.ಸುರೇಶಗೌಡ, ಜೆಡಿಎಸ್ ಮುಖಂಡ ಗೌರೀಶ್ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಮುಖಂಡರು ಭಾಗವಹಿಸಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಶ್ರೀರಂಗಪಟ್ಟಣ,ಸೆ.8–ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಸೆ.10ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆವರೆಗೆ ಬೆಳಗೊಳ, ಕೆ.ಆರ್.ಸಾಗರ, ಹೊಸ ಆನಂದೂರು ಮೊಗರಹಳ್ಳಿ, ಕಾರೆಕುರ, ಕುಪ್ಪೆದಡ, ಕೆಐಎಡಿಬಿ ಇಂಡಸ್ಟ್ರಿಯಲ್, ಹೊಂಗಹಳ್ಳಿ ವಾಟರ್ ಸಪ್ಪೆ, ಆನಗನಹಳ್ಳಿ, ಹೊಸ ಉಂಡವಾಡಿ, ಮಜ್ಜಿಗೆಪುರ, ಎಂಎಂಜಿ ಲೇಔಟ್ ಹುಲಿಕೆರೆ ಹೊಸಹಳ್ಳಿ, ಪಾಲಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬ್ರಹ್ಮೇಶ್ವರ ದೇಗುಲದ ಗಣೇಶನಿಗೆ ಚೌತಿ ಪೂಜೆ

ಕಿಕ್ಕೇರಿ, ಸೆ.8–ಶತಮಾನಗಳ ಇತಿಹಾಸದ ಪ್ರಸಿದ್ಧ ಹೊಯ್ಸಳರ ಕಾಲದ ಬ್ರಹ್ಮೇಶ್ವರ ದೇವಾಲಯದ ಗಣೇಶನ ಮೂರ್ತಿಗೆ ಗಣೇಶ ಚೌತಿಯಂದು ವಿಶೇಷ ಪೂಜೆಗಳು ವಿಜೃಂಭಣೆಯಿಂದ ನೆರವೇರಿತು.

ಆನೆ ತಲೆ, ಸ್ತ್ರೀ ಶರೀರದ ಅಪರೂಪದ ಗಣೇಶನಿಗೆ ಭಕ್ತಿಯಿಂದ ಪೂಜಿಸಿದರೆ ಕಾರ್ಯಸಿದ್ಧಿ ಎಂಬ ನಂಬುಗೆ ಇರುವ ಗಣಪನಿಗೆ ಭಕ್ತರು ಭಕ್ತಿಯಿಂದ ಪೂಜಿಸಿದರು. ಬಹುತೇಕ ಭಕ್ತರು ಗಣೇಶನಿಗೆ ಪೂಜಿಸಿ ಮನೆಗಳಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿ ಪೂಜಿಸಿದರು.

ಈ ಬಾರಿ ಹೋಬಳಿಯಾದ್ಯಂತ ಎತ್ತ ನೋಡಿದರೂ ಸಣ್ಣಪುಟ್ಟ ಓಣಿ, ಗಲ್ಲಿಗಳಲ್ಲಿ ಗಣೇಶನ ಆರಾಧನೆ ಕಂಡು ಬಂದಿತು. ಕೋಟೆ ಗಣಪತಿಗೆ ಅರ್ಚಕ ವೆಂಕಟೇಶಮೂರ್ತಿ ಬೆಳಗ್ಗಿನಿಂದಲೇ ಪಂಚಾಮೃತ ಅಭಿಷೇಕ ಮತ್ತಿತರ ಪೂಜೆ ಸಲ್ಲಿಸಿದರು. ಸಣ್ಣಪುಟ್ಟ ಹಳ್ಳಿಗಳಲ್ಲಿಯೂ ಈ ಬಾರಿ ಗಣಪತಿ ಪ್ರತಿಷ್ಠಾಪಿಸಿ ಪಟಾಣಿಗಳು ಮನೆಯಿಂದ ಹೊರಗಿದ್ದು, ಇಡೀ ರಾತ್ರಿ ಗಣೇಶ ಮಂಟಪದಲ್ಲಿ ತಂಗುವ ವ್ಯವಸ್ಥೆ ಮಾಡಿಕೊಂಡಿದ್ದರು. ಮನೆಗಳಲ್ಲಿ ಶ್ರದ್ಧಾಭಕ್ತಿಯಿಂದ ಗರಿಕೆ ಹುಲ್ಲಿನ ಗಣಪ, ಫೋಟೋ ಗಣಪ ಸೇರಿದಂತೆ ಅರಿಸಿನ ಗಣಪ, ಮಣ್ಣಿನ



ಗಣಪ, ನೈಸರ್ಗಿಕ ಬಣ್ಣದ ಗಣಪನನ್ನು ಪ್ರತಿಷ್ಠಾಪಿಸಲಾಗಿತ್ತು. ಮೋದಕನಿಗೆ ಪ್ರಿಯವಾದ ಚಿಗಣಿ, ಎಳ್ಳು ಉಂಡೆ, ಸಿಹಿಕಡುಬು, ಕರ್ಜಿಕಾಯಿ, ಚಕ್ಕುಲಿ, ಚಿಕ್ಕಿನುಂಡೆ, ಶ್ಯಾವಿಗೆ, ಕಾಯಿ ಹಾಲಿನಂತಹ ವಿವಿಧ ಭಕ್ಷ್ಯಗಳನ್ನು ನೈವೇದ್ಯವಾಗಿ ಇಟ್ಟು ಪೂಜಿಸಿದರು. ಹಲವು ಚೌತಿ ಚಂದ್ರನನ್ನು ನೋಡಿದ ಭಯದಲ್ಲಿ 101 ಗಣಪನ ನೋಡಿ ಪಾಪವಿಮೋಚನೆ ಮಾಡಿಕೊಳ್ಳುವ ತವಕದಲ್ಲಿ ಮನೆಮನೆಗೆ ತೆರಳಿ ಗಣಪತಿ ನೋಡಿ ಭಕ್ತಿಯಿಂದ ನಮಿಸುತ್ತಿದ್ದರು.

ಆನೆಗೊಳ, ಮಾದಾಪುರ, ಮಂದಗೆರೆ, ಸೊಳ್ಳೇಪುರ, ಕಳ್ಳನಕೆರೆ, ಸಾಸಲು, ಊಗಿನಹಳ್ಳಿ ಮತ್ತಿತರ ಗ್ರಾಮಗಳಲ್ಲಿ ಗಣಪತಿ ಮೂರ್ತಿಗೆ ಅಲಂಕಾರ, ಪೂಜೆಗಳು ವಿಶೇಷವಾಗಿ ನಡೆದವು.

ವಿಪ್ರ ಸಮುದಾಯದವರು ಚೌತಿಯ ಶನಿವಾರವೇ ಪ್ರತಿಷ್ಠಾಪಿಸಿದ ಗಣಪನನ್ನು ಕೆಲವೇ ಗಂಟೆಗಳಲ್ಲಿ ಕೆರೆಕಟ್ಟೆಗಳಲ್ಲಿ ವಿಸರ್ಜಿಸಿದರು.

ಮಂಡ್ಯದಿಂದಲೇ ಕನ್ನಡ ನವೋದಯ ಸಾಹಿತ್ಯ ಸೃಷ್ಟಿ

ಮಂಡ್ಯ, ಸೆ.8– ಸಾಧಕರಲ್ಲೇ ಮಂಡ್ಯ ಜಿಲ್ಲೆಯವರೇ ಹೆಚ್ಚಿದ್ದಾರೆ. ಅನೇಕ ನೆನಪುಗಳು ಸಾಕ್ಷಿವೆ. ಮಂಡ್ಯದಲ್ಲಿಯೇ ಮೊದಲ ಬಾರಿಗೆ ಕನ್ನಡ ಜಾನಪದ ಮುಂಗೋಳಿ ಕೂಗಿದ್ದು, ಅದೇ ರೀತಿ ಮಂಡ್ಯ ಜಿಲ್ಲೆಯವರಿಂದಲೇ ಕನ್ನಡ ನವೋದಯ ಸಾಹಿತ್ಯ ಸೃಷ್ಟಿಯಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದರು.

ನಗರದ ಕರ್ನಾಟಕ ಸಂಘದ ಕೆವಿಎಸ್ ಭವನದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಸಾಹಿತಿ ಗಣಂಗೂರು ನಂಜೇಗೌಡ ಅವರ ರಚನೆಯ ರಣಧೀರ ಕಂಠೀರವ ಕೃತಿ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ನಾಗಮಂಗಲದ ಬೆಳ್ಳೂರಿನ ಶ್ರೀಕಂಠಯ್ಯ, ಜೀಶಂಪ, ಎಚ್.ಎಲ್.ನಾಗೇಗೌಡ, ಶ್ರೀಕಂಠೇಶಗೌಡರು ಪ್ರಾರಂಭದ ಸಾಧನೆಯ ಸಾಧಕರು. ಚರಿತ್ರೆಯಲ್ಲೂ ನಿಖರವಾಗಿ ದಾಖಲಾಗಿಲ್ಲ. ಇದರ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಕನ್ನಡ ಮೊಟ್ಟಮೊದಲ ಸಾಮ್ರಾಜ್ಯ ಕದಂಬರು ಎಂದು ಹೇಳಲಾಗುತ್ತಿದೆ. ಆದರೆ ಗಂಗರು ಎಂಬುದರ ಬಗ್ಗೆ


ಸಾಹಿತಿ ಗಣಂಗೂರು ನಂಜೇಗೌಡ ಅವರ ರಣಧೀರ ಕಂಠೀರವ ಕೃತಿ ಲೋಕಾರ್ಪಣೆ

ಸಂಶೋಧನೆ ನಡೆಯುತ್ತಿದೆ. ಕ್ರಿ.ಶ.345ರಲ್ಲಿ ಸ್ಥಾಪನೆಯಾದ ಕದಂಬ ಸಾಮ್ರಾಜ್ಯವನ್ನು ಕನ್ನಡದ ಕುಟುಂಬವೊಂದು ಸ್ಥಾಪನೆ ಮಾಡಿದೆ ಎಂದು ಹೇಳಲಾಗುತ್ತಿದೆ. ತಲಕಾಡು ಗಂಗರು ಕ್ರಿ.ಶ.350ರಲ್ಲಿ ಪ್ರಾರಂಭ ಮಾಡಿದರು ಎಂದು ಅಧ್ಯಯನ ಸೂಕ್ಷ್ಮಗಳು ಹೇಳುತ್ತವೆ ಎಂದರು.

ಮನುಷ್ಯ ದೀರ್ಘವಾಗಿ ಬದುಕುತ್ತೇವೆ ಎಂಬ ಭ್ರಮೆಯಿಂದ ಹಣ, ಅಧಿಕಾರಕ್ಕಾಗಿ ಅನೇಕ ಅತ್ಯಾಚಾರ, ದುರಾಚಾರಗಳನ್ನು ಮಾಡುತ್ತಿದ್ದಾರೆ. ಇತಿಹಾಸ ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ಅರಿಯಬೇಕಾಗಿದೆ. ನಮಗೆ ಚಾರಿತ್ರಿಕ ವಿಸ್ಮೃತಿ ಉಂಟಾದರೆ ಭವಿಷ್ಯ ಇರುವುದಿಲ್ಲ. ವರ್ತಮಾನದಲ್ಲಿ ನಿಂತು ಭೂತವನ್ನು ನೆನಪುಕೊಂಡಾಗ ಭವಿಷ್ಯ ಸುಂದರವಾಗಲಿದೆ. ಚರಿತ್ರೆ ಮರೆತರೆ ನಮ್ಮ ಮಕ್ಕಳ ಭವಿಷ್ಯ ನಾಶವಾಗಲಿದೆ. ಆದ್ದರಿಂದ ಚರಿತ್ರೆಯನ್ನು ಮತ್ತೆ ಮತ್ತೆ ಕಟ್ಟಿಕೊಡಬೇಕಾಗಿದೆ ಎಂದು ವಿವರಿಸಿದರು. ಸಮಾರಂಭದಲ್ಲಿ ಗಣಂಗೂರು ನಂಜೇಗೌಡ ಅವರ ರಚನೆಯ ರಣಧೀರ ಕಂಠೀರವ ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. ಶಾಸಕ ರಮೇಶ್‌ಬಂಡಿಸಿದ್ದೇಗೌಡ ಸಮಾರಂಭ ಉದ್ಘಾಟಿಸಿದರು. ಕೃತಿ ಕುರಿತು ಇತಿಹಾಸ ಸಂಶೋಧಕ ತೈಲೂರು ವೆಂಕಟಕೃಷ್ಣ ಮಾತನಾಡಿದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ಅಧ್ಯಕ್ಷತೆ ವಹಿಸಿದ್ದರು.

ಜಲಪಾತೋತ್ಸವ ಅಡ್ಡಿ ಹೇಳಿಕೆಗೆ ಖಂಡನೆ

ಮಂಡ್ಯ: ಕಳೆದ ಹಲವು ವರ್ಷಗಳಿಂದ ಬರದ ಹಿನ್ನೆಲೆಯಲ್ಲಿ ಗಗನಚುಕ್ಕಿ ಜಲಪಾತೋತ್ಸವ ಆಚರಣೆ ಮಾಡಲು ಸಾಧ್ಯವಾಗಿರಲಿಲ್ಲ. ವರುಣನ ಕೃಪೆಯಿಂದ ಕೆಆರ್‌ಎಸ್ ಜಲಾಶಯ ತುಂಬಿದ್ದು, ಈ ಹಿನ್ನೆಲೆಯಲ್ಲಿ ಗಗನಚುಕ್ಕಿ ಜಲಪಾತೋತ್ಸವ ನಮ್ಮ ಹೆಮ್ಮೆ, ಇದಕ್ಕೆ ಅಡ್ಡಿಪಡಿಸುವುದಾಗಿ ಹೇಳಿರುವ ಮಾಜಿ ಶಾಸಕ ಡಾ.ಕೆ. ಅನ್ನದಾನಿ ಹೇಳಿಕೆಯನ್ನು ನಾವು ತೀವ್ರವಾಗಿ ಖಂಡಿಸುವುದಾಗಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ತಿರುಗೇಟು ನೀಡಿದರು.



ಶಾಸಕ ನರೇಂದ್ರಸ್ವಾಮಿ ನೇತೃತ್ವದಲ್ಲಿ ಜಲಪಾತೋತ್ಸವಕ್ಕೆ ಸಿದ್ಧತೆ ನಡೆಸುತ್ತಿರುವ ವೇಳೆ ಜನರಿಂದ ತಿರಸ್ಕೃತಗೊಂಡಿರುವ ಮಾಜಿ ಶಾಸಕರೊಬ್ಬರು ಜಲಪಾತೋತ್ಸವಕ್ಕೆ ಅಡ್ಡಿ ಪಡಿಸಿ ಮುಖ್ಯಮಂತ್ರಿಗಳಿಗೆ ಕಪ್ಪು ಬಾವುಟ ಪ್ರದರ್ಶನ ಮಾಡುವುದಾಗಿ ಹೇಳಿದ್ದಾರೆ. ಇದು ನಿಮಗೆ ಶೋಭೆ ತರುವುದಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

ನಾಡಿನ ಜನತೆ ಗಗನಚುಕ್ಕಿ ಜಲಪಾತೋತ್ಸವನ್ನು ಕಣ್ತುಂಬಿಕೊಳ್ಳಲು ಆಗಮಿಸುತ್ತಾರೆ. ಬಿಟ್ಟಿ ಪ್ರಚಾರಕ್ಕೆ ಇಂತಹ ಅಸೂಯೆ ಹೇಳಿಕೆಗಳನ್ನು ಬಿಡಿ. ಜಲಪಾತೋತ್ಸವಕ್ಕೆ ಅಡ್ಡಿಪಡಿಸುವುದರಿಂದ ತಮ್ಮ ಜನಪ್ರಿಯತೆ ಹೆಚ್ಚಾಗುತ್ತದೆ ಎಂದು ತಿಳಿದುಕೊಂಡಿದ್ದರೆ ಅದು ನಿಮ್ಮ ಮೂರ್ಖತನ ಎಂದು ಲೇವಡಿ ಮಾಡಿದರು. ಕಡೇ ಭಾಗಕ್ಕೆ ನೀರು ಹರಿಸಿಲ್ಲ. ಕೆರೆಕಟ್ಟೆಗಳನ್ನು ತುಂಬಿಸಿಲ್ಲ ಎಂದು ಹೇಳುತ್ತಿರುವ ಮಾಜಿ ಶಾಸಕರು ಇಷ್ಟು ದಿನ ಏನು ಮಾಡುತ್ತಿದ್ದರು. ಜಲಪಾತೋತ್ಸವಕ್ಕೆ ಸಿದ್ಧತೆ ನಡೆಸುವಾಗ ಜ್ಞಾನೋದಯವಾಯಿತೆ ಎಂದು ಪ್ರಶ್ನಿಸಿದರು.

ಕಡೇ ಭಾಗಕ್ಕೆ ನೀರು ಹರಿಸುತ್ತಿಲ್ಲ ಎಂದು ಖುದ್ದು ಶಾಸಕ ನರೇಂದ್ರಸ್ವಾಮಿ ಅವರೇ ಜಿಲ್ಲಾ ಪಂಚಾಯತ್‌ನಲ್ಲಿ ನೀರಾವರಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ರೈತರ ಹಿತ ಕಾಯಲು ರಾಜ್ಯ ಸರ್ಕಾರ ಸದಾ ಸಿದ್ಧವಿದೆ ಎಂದು ಹೇಳಿದರು.

ತಮ್ಮ ವೈಯಕ್ತಿಕ ಹಿತಾಸಕ್ತಿಗೋಸ್ಕರ ಜಿಲ್ಲೆಯ ಹೆಮ್ಮೆಯ ಪ್ರತೀಕವಾಗಿರುವ ಜಲಪಾತೋತ್ಸವಕ್ಕೆ ಅಡ್ಡಿಪಡಿಸುವುದು ಸರಿಯಲ್ಲ. ಸ್ವಾರ್ಥಕ್ಕಾಗಿ ಅಗ್ಗದ ಪ್ರಚಾರ ಬಿಡಿ, ಒಳ್ಳೆಯ ಕೆಲಸಗಳಿಗೆ ಸಲಹೆ ಸಹಕಾರ ನೀಡಿ ಸ್ವೀಕರಿಸುತ್ತೇವೆ. ಅದನ್ನು ಬಿಟ್ಟು ಈ ರೀತಿಯ ಉದ್ಧಟತನದ ಪ್ರದರ್ಶನ ಬೇಡ ಎಂದು ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮುಡಾ ಅಧ್ಯಕ್ಷ ನಹೀಂ, ನಗರಸಭೆ ಸದಸ್ಯ ಶ್ರೀಧರ್ ಹಾಜರಿದ್ದರು.

ಉಕ್ರೇನ್ ಯುದ್ಧ: ಶಾಂತಿ ಮಾತುಕತೆಗಾಗಿ ರಷ್ಯಾಗೆ ಅಜಿತ್ ಧೋವಲ್ ಭೇಟಿ

ನವದೆಹಲಿ, ಸೆ.8– ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಮುಂದುವರೆದಿರುವಂತೆಯೇ ಇತ್ತ ಉಭಯ ದೇಶಗಳ ನಡುವಿನ ಶಾಂತಿ ಮಾತುಕತೆ ಕುರಿತ ಸಂಧಾನಕ್ಕಾಗಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್ ರಷ್ಯಾಗೆ ದೌಡಾಯಿಸಿದ್ದಾರೆ.




ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಈ ವಾರ ರಷ್ಯಾ–ಉಕ್ರೇನ್ ಯುದ್ಧಕ್ಕೆ ಶಾಂತಿಯುತ ಪರಿಹಾರವನ್ನು ಸಾಧಿಸುವ ಕುರಿತು ಮಾತುಕತೆಗಾಗಿ ರಷ್ಯಾಕ್ಕೆ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಳೆದ ಎರಡು ತಿಂಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಮತ್ತು ಉಕ್ರೇನ್‌ಗೆ ಭೇಟಿ ನೀಡಿದ ಬೆನ್ನಲ್ಲೇ ಈ ಬೆಳವಣಿಗೆಗಳು ಆರಂಭವಾಗಿವೆ.

ಶಾಂತಿ ಪ್ರಯತ್ನಗಳಲ್ಲಿ ಭಾರತದ ಪ್ರಧಾನಿ ಮೋದಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಈ ಜುಲೈನಲ್ಲಿ ರಷ್ಯಾಕ್ಕೆ ಭೇಟಿ ನೀಡಿದ್ದ ಮೋದಿ ಅವರು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಇದು ಯುದ್ಧದ ಯುಗವಲ್ಲ ಎಂದು ಪುನರುಚ್ಚರಿಸಿದ್ದರು.

ಒಂದು ತಿಂಗಳ ನಂತರ, ಮೋದಿ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರನ್ನು ಕೀವ್‌ನಲ್ಲಿ ಭೇಟಿಯಾಗಿದ್ದರು. ಈ ವೇಳೆ ಶಾಂತಿಗಾಗಿ ಭಾರತದ ಬದ್ಧತೆಯನ್ನು ಪುನರುಚ್ಚರಿಸಿದ್ದರು. ಗುರುವಾರ, ರಷ್ಯಾದ ನಗರವಾದ ವ್ಲಾಡಿವೋಸ್ಟಾಕ್‌ನಲ್ಲಿ ಈಸ್ಟರ್ನ್ ಎಕನಾಮಿಕ್ ಫೋರಂನಲ್ಲಿ ಪ್ಯಾನೆಲ್ ಚರ್ಚೆಯಲ್ಲಿ ಮಾತನಾಡಿದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಉಕ್ರೇನ್ ಸಂಘರ್ಷದ ಕುರಿತು ಭಾರತ, ಬ್ರೆಜಿಲ್ ಮತ್ತು ಚೀನಾದೊಂದಿಗೆ ಸಂಪರ್ಕದಲ್ಲಿರುವುದಾಗಿ ಹೇಳಿದ್ದರು.



50ನೇ ವರ್ಷದ ಗಣೇಶೋತ್ಸವ

ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ಅಶ್ವತ್ಥ ಕಟ್ಟೆ ಯುವಕರ ಸಂಘದ ವತಿಯಿಂದ 50ನೇ ವರ್ಷದ ಗಣೇಶೋತ್ಸವ ಆಚರಿಸಲಾಯಿತು. ಇದರ ಅಂಗವಾಗಿ ನಾಳೆ (ಸೋಮವಾರ) ಅನ್ನಸಂತರ್ಪಣೆ ಏರ್ಪಡಿಸಲಾಗಿದೆ

ಗೌರಿ–ಗಣೇಶ ಹಬ್ಬ ಮುಗಿಸಿಕೊಂಡು ಬರುತ್ತಿದ್ದ ವೇಳೆ ಕಾರು ಅಪಘಾತ: ಆರು ಮಂದಿ ದಾರುಣ ಸಾವು

ತುಮಕೂರು: ಗೌರಿ–ಗಣೇಶ ಹಬ್ಬ ಮುಗಿಸಿಕೊಂಡು ವಾಪಸ್ ಮನೆಗೆ ಬರುತ್ತಿದ್ದ ವೇಳೆ ಭೀಕರ ಕಾರು ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿ ಒಟ್ಟು ಆರು ಮಂದಿ ದಾರುಣ ಸಾವಿಗೀಡಾಗಿರುವ ಘಟನೆ ತುಮಕೂರಿನಲ್ಲಿ ನಡೆದಿದೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕೆರೆಗಳಪಾಳ್ಯ ಹಾಗೂ ಕಾಟಗಾನಹಟ್ಟಿ ಬಳಿ ಘಟನೆ ನಡೆದಿದ್ದು, ಮೂವರು ಪುರುಷರು ಹಾಗೂ ಇಬ್ಬರು ಮಹಿಳೆಯರು, ಓರ್ವ ಬಾಲಕ ಸಾವನ್ನಪ್ಪಿದ್ದಾರೆ. ಇನ್ನುಳಿದವರ ಹೆಸರು ಪತ್ತೆಯಾಗಿಲ್ಲ, ಅಪಘಾತಕ್ಕೀಡಾದವರ ಪೈಕಿ ಕಾರಿನಲ್ಲಿದ್ದ ಮತ್ತೋರ್ವ ಮಹಿಳೆ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ತುಮಕೂರು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ತುಮಕೂರು ಕಡೆಯಿಂದ ಬರುತ್ತಿದ್ದ ಸಿಯಾಜ್ ಮಾರುತಿ ಕಾರು ಹಾಗೂ ಮಧುಗಿರಿ ಕಡೆಯಿಂದ ತುಮಕೂರು ಕಡೆಗೆ ಹೊರಟಿದ್ದ ಟಾಟಾ ಟಿಯಾಗೋ ಕಾರಿನ ನಡುವೆ ಅಫಘಾತ ಸಂಭವಿಸಿದೆ. ಸ್ಥಳಕ್ಕೆ ತುಮಕೂರು ಎಸ್ಪಿ ಕೆ.ವಿ ಅಶೋಕ್ ಹಾಗೂ ಮಧುಗಿರಿ ಠಾಣೆ ಪಿಎಸ್‌ಐ ವಿಜಯ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದ್ದಾರೆ. ನಂತರ ಅಪಘಾತಕ್ಕೀಡಾದ ಕಾರುಗಳನ್ನ ಸ್ಥಳದಿಂದ ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಅಪಘಾತ ಆಗಿದ್ದು ಹೇಗೆ: ಮೃತ ಯೋಗೇಶ್ ಕುಟುಂಬಸ್ಥರು ಗೌರಿ–ಗಣೇಶ ಹಬ್ಬಕ್ಕೆಂದು ಊರಿಗೆ ತೆರಳಿದ್ದರು. ಬೆಂಗಳೂರಿನ ಜೆಪಿ ನಗರದಲ್ಲಿ ವಾಸವಾಗಿದ್ದ ಯೋಗೇಶ್ ಕುಟುಂಬ ಭಾನುವಾರ ಹಬ್ಬ ಮುಗಿಸಿಕೊಂಡು ವೈ.ಎನ್ ಹೊಸಕೋಟೆ ಕಡೆಯಿಂದ ಬೆಂಗಳೂರಿಗೆ ಹೊರಟಿತ್ತು. ಇತ್ತ ಮೃತ ನಾಗರಾಜ್ ಕೊರಟಗೆರೆ ಕಡೆಯಿಂದ ಮಧುಗಿರಿ ಕಡೆಗೆ ತೆರಳಿದ್ದರು. ಮಧುಗಿರಿ ತಾಲೂಕಿನ ಕಾಟಗಾನಹಟ್ಟಿ ಹಾಗೂ ಕೆರೆಗಳಪಾಳ್ಯ ಬಳಿ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿಯಾದ ರಭಸಕ್ಕೆ ಎರಡು ಕಾರಗಳು ಸಂಪೂರ್ಣ ಜಖಂ ಆಗಿವೆ.

ಕುಟುಂಬ ಸಮೇತ ಡಿಕೆಶಿ ಅಮೆರಿಕಾಕ್ಕೆ ಪ್ರವಾಸ

ಬೆಂಗಳೂರು, ಸೆ.8– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕುಟುಂಬ ಸಮೇತ ಅಮೆರಿಕಾ ಪ್ರವಾಸ ಕೈಗೊಂಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಇಂದು (ಭಾನುವಾರ) ರಾತ್ರಿ ಬೆಂಗಳೂರಿನಿಂದ ಅಮೆರಿಕಾಕ್ಕೆ ತೆರಳಿದ್ದು, ಅಮೆರಿಕದ ನಾರ್ಥ್ ಕ್ಯಾರೋಲಿನಾದಲ್ಲಿ ನಡೆಯುವ ಅದ್ಧೂರಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಕಾರ್ಯಕ್ರಮ ಮುಗಿದ ನಂತರ ಸೆಪ್ಟೆಂಬರ್ 14 ರಂದು ಸ್ವದೇಶಕ್ಕೆ ವಾಪಸ್ ಆಗಲಿದ್ದಾರೆ.

ರಾಜ್ಯದಲ್ಲಿ ಮುಡಾ ಹಗರಣ ತೀವ್ರ ಸ್ವರೂಪ ಪಡೆದುಕೊಂಡಿರುವ ಮಧ್ಯ ಸಿಎಂ ಕುರ್ಚಿ ಕಾಳಗ ಶುರುವಾಗಿದೆ. ಇದೆಲ್ಲದರ ಬೆಳವಣಿಗೆಗಳ ಮಧ್ಯ ಡಿ.ಕೆ. ಶಿವ ಕುಮಾರ್ ಅಮೆರಿಕಾಕ್ಕೆ ತೆರಳಲಿದ್ದಾರೆ. ಈ ಸಂಬಂಧ ಇಂದು ಬೆಳಗ್ಗೆ ಸಿಎಂ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಅಮೆರಿಕಾ ಪ್ರವಾಸದ ಬಗ್ಗೆ ಮಾಹಿತಿ ನೀಡಿದ್ದಾರೆ. ಅಲ್ಲದೇ ನಾಳೆ ಕೋರ್ಟ್‌ನಲ್ಲಿ ಮುಡಾ ಹಗರಣದ ವಿಚಾರಣೆಯ ಬಗ್ಗೆ ಮಹತ್ವದ ಚರ್ಚೆ ನಡೆಸಿದ್ದಾರೆ.



ಈ ಬಗ್ಗೆ ಇಂದು ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಡಿಕೆಶಿ, ನಾನು ಒಂದು ವಾರ ಇರಲ್ಲ, ಅಮೆರಿಕ ಪ್ರವಾಸ ಕೈಗೊಂಡಿದ್ದೇನೆ. ಅಮೆರಿಕಾದಲ್ಲಿ ಖಾಸಗಿ ಕಾರ್ಯಕ್ರಮವಿದೆ, ಯಾರನ್ನೂ ಭೇಟಿ ಆಗಲ್ಲ. ಇದು ಫ್ಯಾಮಿಲಿ ಟ್ರಿಪ್. ಕುಟುಂಬ ಸಮೇತ ಹೋಗುತ್ತಿದ್ದೇವೆ ನಾನು ಯಾರ ಆಹ್ವಾನದ ಮೇರೆಗೂ ಅಮೇರಿಕಾಗೆ ಹೋಗುತ್ತಿಲ್ಲ. ಇದರ ಬಗ್ಗೆ ಹರಡಿರುವ ವಿಚಾರಗಳು ಊಹಾ–ಪೋಹ ಎಂದು ಸ್ಪಷ್ಟಪಡಿಸಿದರು. ಅಮೇರಿಕಾ ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿರುವ ಭಾರತೀಯ ಮೂಲದವರಾದ ಕಮಲಾ ಹ್ಯಾರೀಸ್ ಆಹ್ವಾನದ ಮೇರೆಗೆ ಡಿ.ಕೆ.ಶಿವಕುಮಾರ್ ಅಮೇರಿಕಾಗೆ ತೆರಳುತ್ತಿದ್ದಾರೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿಯಾಗಿತ್ತು ಆದರೆ ಡಿಕೆಶಿ ಅದನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

ರಾಹುಲ್ ಗಾಂಧಿ ಅಮೆರಿಕ ಪ್ರವಾಸ; ವಿಮಾನ ನಿಲ್ದಾಣದಲ್ಲಿ ಸ್ವಾಗತ ಕೋರಿದ ಸ್ಯಾಮ್ ಪಿತ್ರೋಡಾ

ವಾಷಿಂಗ್ಟನ್, ಸೆ.8– ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇಂದಿನಿಂದ ಮೂರು ದಿನಗಳ ಕಾಲ ಅಮೆರಿಕಾ ಪ್ರವಾಸಕ್ಕೆ ತೆರಳಿದ್ದು, ಅವರಿಗೆ ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಸ್ವಾಗತ ಕೋರಿದರು.



ರಾಹುಲ್ ಗಾಂಧಿ ಅವರು ಇಂದಿನಿಂದ ಮೂರು ದಿನಗಳ ಅಮೆರಿಕ ಪ್ರವಾಸ ಕೈಗೊಂಡಿದ್ದು, ಇದರ ಭಾಗವಾಗಿ ಇಂದು (ಭಾನುವಾರ) ಟೆಕ್ಸಾಸ್‌ನ ಡಲ್ಲಾಸ್‌ಗೆ ಆಗಮಿಸಿದ್ದಾರೆ. ವಿಮಾನ ನಿಲ್ದಾಣದಲ್ಲಿ ರಾಹುಲ್ ಗಾಂಧಿ ಅವರನ್ನು ಕಾಂಗ್ರೆಸ್ ಪಕ್ಷದ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಸೇರಿದಂತೆ ಅನಿವಾಸಿ ಭಾರತೀಯರ ತಂಡದ ಸದಸ್ಯರು ಆತ್ಮೀಯವಾಗಿ ಸ್ವಾಗತಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್, ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ಬಲಪಡಿಸಲು ನಿಟ್ಟಿನಲ್ಲಿ ಅರ್ಥಪೂರ್ಣ ಚರ್ಚೆಯಲ್ಲಿ ತೊಡಗಿಸಿಕೊಳ್ಳುವ ನಿರೀಕ್ಷೆಯಲ್ಲಿದ್ದೇನೆ. ನನಗೆ ದೊರೆತ ಆತ್ಮೀಯ ಸ್ವಾಗತದಿಂದ ನಾನು ನಿಜವಾಗಿಯೂ ಸಂತೋಷಗೊಂಡಿದ್ದೇನೆ ಎಂದು ಹೇಳಿದ್ದಾರೆ.

ಇದೇ ವಿಚಾರವಾಗಿ ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ಈ ಭೇಟಿಯ ಸಮಯದಲ್ಲಿ ನಮ್ಮ ಎರಡು ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಅರ್ಥಪೂರ್ಣ ಚರ್ಚೆಗಳು ಮತ್ತು ಒಳನೋಟವುಳ್ಳ ಸಂಭಾಷಣೆಗಳಲ್ಲಿ ತೊಡಗಿಸಿಕೊಳ್ಳಲು ನಾನು ಕುತೂಹಲದಿಂದ ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ವಾಷಿಂಗ್ಟನ್, ಡಲ್ಲಾಸ್ ನಗರಗಳಲ್ಲಿ, ಜಾರ್ಜ್‌ಟೌನ್ ಮತ್ತು ಟೆಕ್ಸಾಸ್ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. 2024ರ ಲೋಕಸಭಾ ಚುನಾವಣೆ ಬಳಿಕ ಇದೇ ಮೊದಲ ಬಾರಿಗೆ ರಾಹುಲ್ ಗಾಂಧಿ ಅವರು ಅಮೆರಿಕಗೆ ಭೇಟಿ ನೀಡುತ್ತಿದ್ದಾರೆ. ಲೋಕಸಭಾ ವಿಪಕ್ಷ ನಾಯಕರೂ ಆಗಿರುವ ರಾಹುಲ್ ಗಾಂಧಿ, ಟೆಕ್ಸಾಸ್ ರಾಜ್ಯದ ಡಲ್ಲಾಸ್ ನಗರದಲ್ಲಿ ಸೆಪ್ಟೆಂಬರ್ 8ರಂದು ಇರಲಿದ್ದಾರೆ. ಬಳಿಕ ಸೆಪ್ಟೆಂಬರ್ 9 ಹಾಗೂ 10 ರಂದು ಅಮೆರಿಕ ರಾಜಧಾನಿ ವಾಷಿಂಗ್ಟನ್ ಡಿಸಿಯಲ್ಲಿ ರಾಹುಲ್ ಗಾಂಧಿ ಇರಲಿದ್ದಾರೆ.

ನಾಳೆ ಮುಕ್ತ ವಿವಿಯಲ್ಲಿ ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಉದ್ಘಾಟನೆ

ಎರಡು ದಿನಗಳ ವಿಚಾರ ಸಂಕಿರಣಕ್ಕೂ ಚಾಲನೆ

ಮೈಸೂರು,ಸೆ.8(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಅಸ್ತಿತ್ವಕ್ಕೆ ತಂದಿದ್ದು, ಸೆ.10ರಂದು ಕೇಂದ್ರದ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10.30ಕ್ಕೆ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಸಮಾರಂಭ ನಡೆಯಲಿದ್ದು, ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಸಮಾರಂಭದ ಸಾನಿಧ್ಯ ವಹಿಸಿ ಕೇಂದ್ರದ ಉದ್ಘಾಟನೆ ನೆರವೇರಿಸಲಿದ್ದಾರೆ. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವೈದ್ಯನಾಥ ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿ ಪ್ರೊ.ಕೃಷ್ಣೇಗೌಡ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಇತಿಹಾಸ ವಿದ್ವಾಂಸ ಡಾ.ತಲಕಾಡು ಚಿಕ್ಕರಂಗೇಗೌಡ ಮುಖ್ಯಭಾಷಣ ಮಾಡಲಿದ್ದಾರೆ.

ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ಕೇಂದ್ರದ ಸಂಯೋಜನಾಧಿಕಾರಿ ಡಾ.ಸಿ.ರಾಮೇಗೌಡ ಉಪಸ್ಥಿತರಿರಲಿದ್ದಾರೆ. ಇದೇ ವೇಳೆ ನಾಡಪ್ರಭು ಕೆಂಪೇಗೌಡರ ಕಿರು ಸಾಕ್ಷ್ಯಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಕೇಂದ್ರದ ಉದ್ಘಾಟನೆ ನಂತರ ವಿವಿಯ ಕಾವೇರಿ ಸಭಾಂಗಣದಲ್ಲಿ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಮಧ್ಯಾಹ್ನ 2.30ಕ್ಕೆ 'ಗಂಗರಾಜ ಮನೆತನಗಳು, ಕರ್ನಾಟಕ ಸಂಸ್ಕೃತಿ ಮತ್ತು ಸಮಾಜಕ್ಕೆ ಅವರ ಕೊಡುಗೆಗಳು' ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ.

ವಿಚಾರ ಸಂಕಿರಣದಲ್ಲಿ ಗಂಗರಾಜರುಗಳ ಯುದ್ಧ ನೀತಿಗಳು, ಆಡಳಿತ, ಕೃಷಿ ಪದ್ಧತಿ, ಕೆರೆಕಟ್ಟೆಗಳ ನಿರ್ಮಾಣ, ಅವರ ಧರ್ಮ, ಮುಖ್ಯವಾಗಿ ಗಂಗರ ಮೂಲದ ಬಗ್ಗೆ ವಿದ್ವಾಂಸರು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಿದ್ದಾರೆ. ಖ್ಯಾತ ವಿದ್ವಾಂಸರಾದ ಪ್ರೊ.ದೇವರಕೊಂಡಾ ರೆಡ್ಡಿ, ಪ್ರೊ.ಎಂ.ಜಿ.ಮಂಜುನಾಥ, ಪ್ರೊ.ಬೂದನೂರ ಪುಟ್ಟಸ್ವಾಮಿ, ಡಾ.ತಲಕಾಡು ಚಿಕ್ಕರಂಗೇಗೌಡ, ಪ್ರೊ.ಎಂ.ವಿ. ಶ್ರೀನಿವಾಸ, ಡಾ.ರವೀಶ್ ಸೇರಿದಂತೆ ಮೊದಲಾದವರು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಿದ್ದಾರೆ.

ನಾಡಪ್ರಭು ಕೆಂಪೇಗೌಡರ ಚಿಂತನೆ, ಜನಪರ ಕಾರ್ಯಗಳು, ನಗರ ಯೋಜನೆ, ಕೆರೆಕಟ್ಟೆಗಳ ನಿರ್ಮಾಣ, ಎಲ್ಲಾ ಸಮುದಾಯಗಳ ರಕ್ಷಣೆ, ಆಶ್ರಯ ನೀಡಿದ ಬಗ್ಗೆ ಸೇರಿದಂತೆ ಅನೇಕ ಅಂಶಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿ ಸಂಶೋಧಿಸುವ ಮೂಲಕ ಪಠ್ಯಕ್ರಮಗಳನ್ನು ರೂಪಿಸಿ ಡಿಪ್ಲೋಮಾ ಪದವಿಗಳನ್ನು ನೀಡುವ ಪ್ರಕ್ರಿಯೆಯು ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದಲ್ಲಿ ನಡೆಯಲಿದೆ ಎಂದು ಎಂದು ಪ್ರಕಟಣೆ ತಿಳಿಸಿದೆ.

ಸಂಸತ್ ಭದ್ರತಾ ಲೋಪ: ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ ದೆಹಲಿ ಪೊಲೀಸರು

ನವದೆಹಲಿ, ಸೆ.8– ಸಂಸತ್ತಿನಲ್ಲಿ ನಡೆದ ಭದ್ರತಾ ಲೋಪ ಪ್ರಕರಣದ ಆರೋಪಿಗಳು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಳಂಕ ಉಂಟುಮಾಡಲು ಬಯಸಿದ್ದರು ಹಾಗೂ ಅಲ್ಪ ಸಮಯದಲ್ಲೇ ಜಾಗತಿಕವಾಗಿ ಖ್ಯಾತಿ ಪಡೆಯಲು ಪ್ರಯತ್ನಿಸಿದ್ದರು ಎಂದು ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ಆರೋಪಪಟ್ಟಿಯಲ್ಲಿ ತಿಳಿಸಿದ್ದಾರೆ.

2023ರ ಡಿಸೆಂಬರ್ 13ರಂದು ನಡೆದಿದ್ದ ಪ್ರಕರಣದಲ್ಲಿ ಡಿ. ಮನೋರಂಜನ್, ಲಲಿತ್ ಝಾ, ಅಮೋಲ್ ಶಿಂದೆ, ಮಹೇಶ್ ಕುಮಾವತ್, ಸಾಗರ್ ಶರ್ಮಾ ಮತ್ತು ನೀಲಂ ಆಜಾದ್ ಅವರು ಆರೋಪಿಗಳಾಗಿದ್ದಾರೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯು ಪರಿಣಾಮಕಾರಿಯಾಗಿಲ್ಲ ಮತ್ತು ಅದನ್ನು ಬದಲಾಯಿಸಬೇಕಾಗಿದೆ ಎಂಬ ಸಂದೇಶವನ್ನು ರವಾನಿಸಲು ಆರೋಪಿಗಳು ಬಯಸಿದ್ದರು ಎಂದು ಮೂಲಗಳು ಹೇಳಿವೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಪರಸ್ಪರ ಪರಿಚಯವಾಗಿದ್ದ ಆರೋಪಿಗಳು, ತಮ್ಮ ಸಂಚನ್ನು ಕಾರ್ಯಗತಗೊಳಿಸಲು ಸುಮಾರು ಎರಡು ವರ್ಷ ತಯಾರಿ ನಡೆಸಿದ್ದರು. ಮೊದಲ ಸಭೆಯನ್ನು 2022ರ ಫೆಬ್ರುವರಿಯಲ್ಲಿ ಮೈಸೂರಿನಲ್ಲಿ ನಡೆಸಿದ್ದರು ಎಂಬುದನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು, ಗುರುಗ್ರಾಮ ಮತ್ತು ದೆಹಲಿಯಲ್ಲಿ ಐದು ಸಭೆಗಳನ್ನು ನಡೆಸಿದ ಬಳಿಕ ಅವರು ಯೋಜನೆಯನ್ನು ಅಂತಿಮಗೊಳಿಸಿದ್ದರು.

ಮನೋರಂಜನ್ ಅವರು ಎಂಜಿನಿಯರಿಂಗ್ ಶಿಕ್ಷಣವನ್ನು ಅರ್ಧದಲ್ಲೇ ಮೊಟಕುಗೊಳಿಸಿ 2014ರಲ್ಲಿ ಕಾಂಬೋಡಿಯಾಗೆ ಪ್ರಯಾಣಿಸಿ, ಅಲ್ಲಿ ಎಂಟು ತಿಂಗಳು ತಂಗಿದ್ದರು. ಭಾರತಕ್ಕೆ ಮರಳಿದ ಬಳಿಕ 2015ರಲ್ಲಿ ಬೈಕ್‌ನಲ್ಲಿ ಲಡಾಖ್‌ಗೆ ಪ್ರಯಾಣ ಕೈಗೊಂಡಿದ್ದರು. ಅವರ ಈ ಪ್ರಯಾಣಕ್ಕೆ ಕ್ಯೂಬಾದ ಕ್ರಾಂತಿಕಾರಿ ನಾಯಕ ಚೆಗುವೆರಾ ಬರೆದಿರುವ 'ಮೋಟರ್ ಸೈಕಲ್ ಡೈರೀಸ್' ಪುಸ್ತಕ ಪ್ರೇರಣೆಯಾಗಿತ್ತು ಎಂಬ ಅಂಶ ಆರೋಪ ಪಟ್ಟಿಯಲ್ಲಿದೆ.

ಲಡಾಖ್ ಪ್ರಯಾಣದ ವೇಳೆ ಆ ಸಮಯದಲ್ಲಿ ಹೈದರಾಬಾದ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಚೀನಾದ ವಿದ್ಯಾರ್ಥಿಯೊಬ್ಬ ದೆಹಲಿಯವರೆಗೆ ಮನೋರಂಜನ್ ಜತೆ ಸವಾರಿ ಮಾಡಿದ್ದರು. ಮಧ್ಯಪ್ರದೇಶ, ರಾಜಸ್ಥಾನ ಮಾರ್ಗವಾಗಿ ದೆಹಲಿ ತಲುಪಿದ್ದರು ಎಂದು ಹೇಳಿದೆ.

ಸಂಸತ್ ಮೇಲಿನ ದಾಳಿ ಪ್ರಕರಣದ 22ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಾಗರ್ ಶರ್ಮಾ ಮತ್ತು ಮನೋರಂಜನ್ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದಿದ್ದು, ಘೋಷಣೆಗಳನ್ನು ಕೂಗುತ್ತಾ 'ಸ್ಮೋಕ್ ಕ್ಯಾನ್' ಹಾರಿಸಿ ದಾಂದಲೆ ಎಬ್ಬಿಸಿದ್ದರು. ಅದೇ ಸಮಯಕ್ಕೆ ಸಂಸತ್ ಭವನದ ಹೊರಗೆ ಅಮೋಲ್ ಶಿಂದೆ ಮತ್ತು ನೀಲಂ ಆಜಾದ್ ಬಣ್ಣದ ಹೊಗೆ ಹಾರಿಸಿ ಘೋಷಣೆ ಕೂಗಿದ್ದರು.

ಮಹಾರಾಜ ಕಾಲೇಜಲ್ಲಿ ಶಿಕ್ಷಕರ ದಿನಾಚರಣೆ



ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು.

ಮೈಸೂರು, ಸೆ.8(ಎಂಕೆ)– ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು.

ಈ ವೇಳೆ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಕಾಲೇಜು ಪ್ರಾಂಶುಪಾಲ ಪ್ರೊ.ದೇವರಾಜಗೌಡ ಮಾತನಾಡಿ, ಸರ್ವ ಪಲ್ಲಿ ರಾಧಾಕೃಷ್ಣನ್ ಅವರು ಇದೇ ಕಾಲೇಜಿನಲ್ಲಿ ಶಿಕ್ಷಕರಾಗಿ ನಂತರ ರಾಷ್ಟ್ರಪತಿಯಾದರು. ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಬಳಿಕ ವಿದ್ಯಾರ್ಥಿಗಳು ಎಲ್ಲಾ ಅಧ್ಯಾಪಕರಿಗೂ ಹೂ–ಗುಚ್ಛ ನೀಡಿ ಗೌರವ ತೋರಿದರು. ಕಾಲೇಜು ಆಡಳಿತ ಅಧಿಕಾರಿ ಪ್ರೊ.ವಿ.ಷಣ್ಮುಗಂ, ಎನ್‌ಎಸ್‌ಎಸ್ ಘಟಕದ ಡಾ.ಎಸ್.ಕೃಷ್ಣಪ್ಪ, ಡಾ.ಪಿ.ಎಸ್.ಮಧುಸೂದನ್ ಮತ್ತಿತರರಿದ್ದರು.

ಮಹಿಳೆಯರಿಗೆ ಬಾಗಿನ...



ಗೌರಿ–ಗಣೇಶ ಹಬ್ಬದ ಪ್ರಯುಕ್ತ ಶಾಸಕ ಹರೀಶ್‌ಗೌಡರ ಪತ್ನಿ ಗೌರಿ ಮಹಿಳೆಯರಿಗೆ ಸೀರೆ, ಬಳೆ, ಸಿಹಿ ವಿತರಿಸಿದರು. ಪಡುವಾರಹಳ್ಳಿ ಪಾಪಣ್ಣ, ರಮೇಶ್, ಸತ್ಯನಾರಾಯಣ, ಕೃಷ್ಣ, ಪ್ರದೀಪ, ಲೋಕೇಶ್, ದೇವೇಗೌಡ, ಮಾದೇಶ್, ಸತೀಶ್, ಶ್ರೀನಿವಾಸ ಇದ್ದರು.

ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನ ಹಿರಿಯ ವಿದ್ಯಾರ್ಥಿನಿಯರ ಸಮಾವೇಶ




ಮೈಸೂರು: ಮೈಸೂರಿನ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನ 19ನೇ ಹಿರಿಯ ವಿದ್ಯಾರ್ಥಿನಿಯರ ಸಮಾವೇಶ ಸಂಸ್ಥೆಯ ಆವರಣದಲ್ಲಿ ನಡೆಯಿತು. ಸುಮಾರು 94 ಹಿರಿಯ ವಿದ್ಯಾರ್ಥಿನಿಯರು ಸಮಾವೇಶದಲ್ಲಿ ಭಾಗವಹಿಸಿದ್ದರು. ಹಿರಿಯ ವಿದ್ಯಾರ್ಥಿನಿಯರ ಸಂಘದ ಕಾರ್ಯನಿರ್ವಾಹಕಿ ಕುಮಾರಿ ಅವರ ಪ್ರಾರ್ಥನೆ ಮತ್ತು ದೀಪ ಬೆಳಗುವುದರೊಂದಿಗೆ ಆರಂಭವಾಯಿತು. ಇದೇ ವೇಳೆ ಹಿರಿಯ ವಿದ್ಯಾರ್ಥಿನಿಯರ ಸಂಘದ ವತಿಯಿಂದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯ 109ನೇ ಜಯಂತಿ ಆಚರಿಸಲಾಯಿತು. ಸಂಘದ ನಿರ್ದೇಶಕಿ ವಿಜಯಲಕ್ಷ್ಮಿ ಸ್ವಾಗತಿಸಿದರು. ಕಾಲೇಜಿನ ಪ್ರಾಂಶುಪಾಲ, ಹಿರಿಯ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷ ವಿ.ಬಿ.ಲೋಕೇಶ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಕು.ಕುಮಾರಿ ವಂದಿಸಿದರು. ಸಂಘದ ನಿರ್ದೇಶಕಿ ಕು.ಜಯಮಾಲ ನಿರೂಪಿಸಿದರು.

ಹಿರಿಯ ಪತ್ರಿಕಾ ವಿತರಕರಾದ ರಮಾದೇವಿಗೆ ಸನ್ಮಾನ



ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ಸಂತೆಪೇಟೆಯಲ್ಲಿ 50 ವರ್ಷದಿಂದ ಪತ್ರಿಕೆ ವಿತರಣೆ ಮಾಡುತ್ತಿರುವ ರಮಾದೇವಿ ಅವರಿಗೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಸನ್ಮಾನಿಸಲಾಯಿತು. ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಜಿ.ರಾಘವೇಂದ್ರ, ರಾಜೇಶ್, ರಾಕೇಶ್, ಅಶ್ವಿನಿ ಗೌಡ, ಪಾಂಡು ಇತರರಿದ್ದರು.

ವಿನಾಯಕ ಗೆಳೆಯರ ಬಳಗದಿಂದ ಶಿಕ್ಷಕರ ದಿನಾಚರಣೆ



ಮೈಸೂರಿನ ವಿನಾಯಕ ಗೆಳೆಯರ ಬಳಗದ ವತಿಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ ಜ್ಯೋತಿ ಬಾಪುಲೆ, ಸಾವಿತ್ರಿ ಬಾಪುಲೆ, ಡಾ.ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

ಸುನೀತಾ ವಿಲಿಯಮ್ಸ್ ಇಲ್ಲದೆ ಭೂಮಿಗೆ ಮರಳಿದ ಖಾಲಿ ಸ್ಟಾರ್‌ಲೈನರ್: ಬಾಹ್ಯಾಕಾಶ ರಂಗದಲ್ಲಿಯೇ ಮೊದಲ ಘಟನೆ



ವಾಷಿಂಗ್ಟನ್, ಸೆ.8– ಹಿಂದೆಂದೂ ನಡೆಯದಂತಹ ಘಟನೆಗಳು ಮತ್ತು ಸವಾಲುಗಳ ಬಳಿಕ ಹಾನಿಗೊಳಗಾದ ಬೋಯಿಂಗ್ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯು ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರಿಲ್ಲದೆ ಶನಿವಾರ ಮರಳಿ ಭೂಮಿಗೆ ತಲುಪಿದೆ. ಬಾಹ್ಯಾಕಾಶ ಯಾನದ ಇತಿಹಾಸದಲ್ಲಿಯೇ ಸಿಬ್ಬಂದಿಯೊಂದಿಗೆ ಉಡಾವಣೆಗೊಂಡು, ಅವರಿಲ್ಲದೆ ಖಾಲಿ ಭೂಮಿಗೆ ವಾಪಸಾದ ಮೊದಲ ನೌಕೆ ಎನಿಸಿದೆ.

ಈ ವಿಚಿತ್ರ ಸನ್ನಿವೇಶವು ಬಾಹ್ಯಾಕಾಶ ಅನ್ವೇಷಣೆಯಲ್ಲಿ ಮಹತ್ವದ ಸಂದರ್ಭ ಎನಿಸಿದ್ದು, ಹೊಸ ಬಾಹ್ಯಾಕಾಶ ನೌಕಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಾಗಿನ ಸವಾಲುಗಳನ್ನು ಎತ್ತಿ ತೋರಿಸಿದೆ.

ನಾಸಾದ ವಾಣಿಜ್ಯಾತ್ಮಕ ಸಿಬ್ಬಂದಿ ಯೋಜನೆಯ ಭಾಗವಾಗಿ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯನ್ನು ಹಲವು ವರ್ಷಗಳ ವಿಳಂಬದ ಬಳಿಕ ಜೂನ್ 5ರಂದು ಉಡಾವಣೆ ಮಾಡಲಾಗಿತ್ತು. ನಾಸಾ ಗಗನಯಾತ್ರಿಕರಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ನೌಕೆಯು ಕರೆದೊಯ್ದಿತ್ತು.

ಈ ಯೋಜನೆಯು ನಿರ್ಣಾಯಕ ಪರೀಕ್ಷಾರ್ಥ ಹಾರಾಟದ ಉದ್ದೇಶದ ಜತೆಗೆ, ಕಕ್ಷಾ ಪ್ರಯೋಗಾಲಯಕ್ಕೆ ಮತ್ತು ಅಲ್ಲಿಂದ ಗಗನಯಾನಿಗಳನ್ನು ಸುರಕ್ಷಿತವಾಗಿ ಕರೆದೊಯ್ಯುವ ಕ್ಯಾಪ್ಸೂಲ್‌ನ ಸಾಮರ್ಥ್ಯವನ್ನು ಬಿಂಬಿಸುವ ಗುರಿ ಹೊಂದಿತ್ತು. ಆದರೆ ಐಎಸ್‌ಎಸ್ ತಲುಪಿದ ಕೆಲವೇ ಸಮಯದಲ್ಲಿ ಸ್ಟಾರ್‌ಲೈನರ್‌ನಲ್ಲಿ ಹೀಲಿಯಂ ಸೋರಿಕೆ ಹಾಗೂ ರಿಯಾಕ್ಷನ್ ಕಂಟ್ರೋಲ್ ಥ್ರಸ್ಟರ್‌ಗಳಲ್ಲಿನ ಸಮಸ್ಯೆಗಳು ಸೇರಿದಂತೆ ಅನೇಕ ತಾಂತ್ರಿಕ ಸಮಸ್ಯೆಗಳನ್ನು ಎಂಜಿನಿಯರ್‌ಗಳು ಪತ್ತೆ ಮಾಡಿದ್ದರು.

ಫೆಬ್ರವರಿವರೆಗೂ ಕಾಯಬೇಕು: ಈ ಅನಿರೀಕ್ಷಿತ ಸನ್ನಿವೇಶ ನಾಸಾಕ್ಕೆ ಇಕ್ಕಟ್ಟು ಉಂಟುಮಾಡಿತ್ತು. ಕೆಲವೇ ದಿನಗಳ ಮಟ್ಟಿಗಾಗಿ ಈ ಗಗನಯಾತ್ರಿಗಳು ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರೂ, ಅವರ ಸುರಕ್ಷಿತ ವಾಪಸಾತಿ ನಾಸಾಕ್ಕೆ ತಲೆನೋವು ಉಂಟುಮಾಡಿತ್ತು. ಸ್ಟಾರ್‌ಲೈನರ್‌ನಲ್ಲಿಯೇ ಅವರು ಭೂಮಿಗೆ ವಾಪಸಾಗುವುದು ಸುರಕ್ಷಿತವಲ್ಲ ಎಂಬ ಆತಂಕ ಉಂಟಾಗಿತ್ತು. ಹೀಗಾಗಿ ಸುನೀತಾ ಮತ್ತು ವಿಲ್ಮೋರ್ ಅವರನ್ನು ಭೂಮಿಗೆ ವಾಪಸ್ ಕರೆತರಲು ಪ್ರತಿಸ್ಪರ್ಧಿ ಸ್ಪೇಸ್ ಎಕ್ಸ್ ನೆರವು ಪಡೆಯುವುದು ಅನಿವಾರ್ಯ ವಾಯಿತು. ಸ್ಪೇಸ್ ಎಕ್ಸ್‌ನ ಕ್ರ್ಯೂ ಡ್ರ್ಯಾಗನ್ ನೌಕೆಯು ಇಬ್ಬರು ಗಗನಯಾನಿಗಳನ್ನು ಮರಳಿ ಕರೆತರಲಿದೆ. ಆದರೆ ಅದಕ್ಕಾಗಿ 2025ರ ಫೆಬ್ರವರಿವರೆಗೂ ಕಾಯಬೇಕಿದೆ.

ಅಂಟಿನ ಉಂಡೆಯ ಆಕಾರದ ಈ ನೌಕೆಯು ಶನಿವಾರ ಸ್ಥಳೀಯ ಕಾಲಮಾನ ಬೆಳಗ್ಗೆ 9.30ರ ಸುಮಾರಿಗೆ ನ್ಯೂ ಮೆಕ್ಸಿಕೋದ ವೈಟ್ ಸ್ಯಾಂಡ್ಸ್ ಸ್ಪೇಸ್ ಹಾರ್ಬರ್‌ಗೆ ಸುಗಮವಾಗಿ ಬಂದು ಇಳಿದಿದೆ. ಐಎಸ್‌ಎಸ್‌ನಿಂದ 6 ಗಂಟೆಗಳ ಮುಂಚೆ ಹೊರಟ ನೌಕೆಯು ಪ್ಯಾರಾಚೂಟ್‌ಗಳು ಮತ್ತು ಏರ್‌ಬ್ಯಾಗ್‌ಗಳ ಕುಷನ್ ನೆರವಿನಿಂದ ನಿಧಾನವಾಗಿ ಭೂಸ್ಪರ್ಶ ಮಾಡಿತು.

ಸೀಟುಗಳನ್ನು ಕಳಚಿದ ಗಗನಯಾನಿಗಳು: ಇದಕ್ಕೂ ಮುನ್ನ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಮಾನವರಹಿತವಾಗಿ ಸ್ಟಾರ್‌ಲೈನರ್ ಭೂಮಿಗೆ ವಾಪಸಾಗಲು ಬೇಕಿದ್ದ ಅಂತಿಮ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದರು. ಗುರುವಾರ ತಡರಾತ್ರಿ ಸ್ಟಾರ್‌ಲೈನರ್‌ನ ದ್ವಾರವನ್ನು ಮುಚ್ಚಿದ ಅವರು, ನೌಕೆಗೆ ಗುಡ್‌ಬೈ ಹೇಳಿದ್ದರು. ಸರಕುಗಳ ಸಂಗ್ರಹಕ್ಕಾಗಿ ಅವರು ಜಾಗರೂಕತೆಯಿಂದ ಸಿಬ್ಬಂದಿ ಸೀಟುಗಳನ್ನು ಕಳಚಿದ್ದರು. ಇದರಿಂದ ಬಾಹ್ಯಾಕಾಶ ನಿಲ್ದಾಣದಿಂದ ನೌಕೆಯಲ್ಲಿ ಸಾಕಷ್ಟು ಸಾಮಗ್ರಿಗಳನ್ನು ಭೂಮಿಗೆ ಕಳುಹಿಸಲು ಸಾಧ್ಯವಾಗಿದೆ.

ಜಾನಪದ ನೃತ್ಯ, ಗೀತೆಗಳ ಕಲಿಕಾ ತರಬೇತಿ ಶಿಬಿರ



ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರದಲ್ಲಿ ಹಿರಿಯ ರಂಗಕರ್ಮಿ ಜನಾರ್ಧನ್ (ಜನ್ನಿ) ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.8(ಎಂಕೆ)–ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲೆಗಳ ಕಲಿಕಾ ಕೇಂದ್ರ, ಕರ್ನಾಟಕ ಜಾಣಪದ ವಿಶ್ವವಿದ್ಯಾಲಯ ಹಾಗೂ ಏಕತಾರಿ ಸಾಂಸ್ಕೃತಿಕ ಸಂಘಟನೆ ವತಿಯಿಂದ ಆಯೋಜಿಸಿದ್ದ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರದಲ್ಲಿ ಜಾನಪದ ಸಾಧಕರಿಗೆ 'ಜನಪದ ನೃತ್ಯಸಿರಿ ಪ್ರಶಸ್ತಿ–2024' ನೀಡಿ ಅಭಿನಂದಿಸಲಾಯಿತು.

ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ), ಜಾನಪದ ಸಾಧಕರಾದ ಡಾ.ನಿಂಗರಾಜು (ಕಂಸಾಳೆ), ಸಿ.ಸುಂದರೇಶ್(ಪೂಜಾ ಕುಣಿತ), ಕೃಷ್ಣಮೂರ್ತಿ ತಲಕಾಡು(ಕಂಸಾಳೆ), ಕೃಷ್ಣಯ್ಯ (ವೀರ ಮಕ್ಕಳ ಕುಣಿತ), ಬಿಳಿಗಿರಿ(ಕಂಸಾಳೆ), ಎನ್.ನಿಖಿಲ್ (ಡೊಳ್ಳು ಕುಣಿತ), ಸಂತೋಷ್ (ಕಂಸಾಳೆ), ಪಿ.ಪುನೀತ್ ಕುಮಾರ್(ಡೊಳ್ಳು ಕುಣಿತ), ಎಸ್.ರಮ್ಯ (ಡೊಳ್ಳು ಕುಣಿತ), ಸಿದ್ದರಾಜು ಎಂ.ಜಂಗಮ (ಡೊಳ್ಳು ಕುಣಿತ), ಎನ್.ಶಿವು(ಕಂಸಾಳೆ), ಎಸ್.ಬಿ.ಪ್ರಿಯಾಂಕ (ಕಂಸಾಳೆ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ.ಉಮೇಶ್ ಮಾತನಾಡಿ, ನಾವೆಲ್ಲರೂ ಆತ್ಮವಿಶ್ವಾಸದಿಂದ ಬದುಕಲು ಜಾನಪದ ಶಕ್ತಿ ಸಹಕಾರಿಯಾಗಿದೆ. ಜಾನಪದ ಸಾಹಿತ್ಯದಲ್ಲಿನ ಹಾಗೂ ದಿನನಿತ್ಯ ಕೇಳುವ ಪವಾಡಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಯಾರನ್ನೂ ನಾಶಮಾಡಬೇಕು ಎನ್ನುವ ಉದ್ದೇಶ ಪವಾಡಗಳದಲ್ಲ. ಮಂತ್ರಶಕ್ತಿಯಾಗಲೀ, ಯಾರನ್ನಾದರೂ ಕೊಲ್ಲಬೇಕು ಎಂಬ ಶಕ್ತಿಯಾಗಲೀ.. ವಾಮಾಚಾರವಾಗಲೀ ಪವಾಡಗಳಲ್ಲಿ ಇಲ್ಲ. ಮನುಷ್ಯರನ್ನು ಮಹಾತ್ಮರನ್ನಾಗಿಸುವ, ಮನುಷ್ಯತ್ವವನ್ನು ಮೆರೆಯುವ ಪವಾಡಗಳು ಜಾನಪದ ಸಾಹಿತ್ಯದಲ್ಲಿದೆ. ಆದ್ದರಿಂದ ಜಾನಪದ ಸಾಹಿತ್ಯವನ್ನು ಮಕ್ಕಳಿಗೆ ಕಲಿಸಿ ಎಂದು ಮನವಿ ಮಾಡಿದರು. ಇದೇ ವೇಳೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಾಗೂ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾದ ಗೊರವಾಲೆ ಚಂದ್ರಶೇಖರ್, ಮೋಹನ್, ನಾಗರಾಜ್ ದಂಡಿಕೆರೆ ಹಾಗೂ ಬೀರಪ್ಪ ಅವರನ್ನು ಅಭಿನಂದಿಸಲಾಯಿತು. ರಂಗಕರ್ಮಿ ಮೈಮ್ ರಮೇಶ್, ವಿವಿ ಕ್ರಿಯೇಷನ್ಸ್‌ನ ವಿಮಲಾ ವೀರೇಶ್, ಶಿಬಿರದ ನಿರ್ದೇಶಕ ದೇವಾನಂದ ವರಪ್ರಸಾದ್ ಇತರರು ಉಪಸ್ಥಿತರಿದ್ದರು.

ಪ್ರಧಾನ ಮಂತ್ರಿ ಶಿಷ್ಯ ವೇತನಕ್ಕಾಗಿ ಅರ್ಜಿ

ಮೈಸೂರು: 2024–25ನೇ ಸಾಲಿನ ವೃತ್ತಿಪರ ಕೋರ್ಸ್‌ಗಳಲ್ಲಿ ಮೊದಲನೇ ವರ್ಷದಲ್ಲಿ ಓದುತ್ತಿರುವ ಮಾಜಿ ಸೈನಿಕರ ಮಕ್ಕಳಿಗೆ (ಸೈನ್ಯಾಧಿಕಾರಿಗಳ ಮಕ್ಕಳನ್ನು ಹೊರತುಪಡಿಸಿ) ಕೇಂದ್ರೀಯ ಸೈನಿಕ ಮಂಡಳಿಯಿಂದ ಪ್ರಧಾನ ಮಂತ್ರಿ ಶಿಷ್ಯ ವೇತನಕ್ಕಾಗಿ ಅರ್ಜಿ ಸಲ್ಲಿಸಲು ನ.30 ಕೊನೇ ದಿನವಾಗಿದ್ದು, ಅರ್ಹ ವಿದ್ಯಾರ್ಥಿಗಳು ಅರ್ಜಿಯನ್ನು www.ksb.gov.in ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಹೆಚ್.ಎನ್.ನಾಗೇಂದ್ರ ಅವರ ಮಾರ್ಗದರ್ಶನದಲ್ಲಿ ಎಸ್.ಎಂ.ಗೌತಮ್ ಕೋಣಿಕರ್ ನಗರ ಮತ್ತು ಪ್ರಾದೇಶಿಕ ಯೋಜನೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು ಕರ್ನಾಟಕ ಸರ್ಕಾರಿ ನೌಕರರ ಸಂಘದ ನವೀಕೃತ ಕಟ್ಟಡ ಉದ್ಘಾಟನೆ

ಮೈಸೂರು,ಸೆ.8– ಕರ್ನಾಟಕ ಸರ್ಕಾರಿ ನೌಕರರ ಸಂಘದ ವತಿಯಿಂದ ಸೆಪ್ಟೆಂಬರ್ 9 ರಂದು ಬೆಳಗ್ಗೆ 10 ಗಂಟೆಗೆ ಧನ್ವಂತರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ ಸಂಘದ ನವೀಕೃತ ಕಟ್ಟಡ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿಮಹದೇವಪ್ಪ ಕಾರ್ಯಕ್ರಮದ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಹೆಚ್.ಡಿ ಕೋಟೆ ವಿಧಾನ ಸಭಾ ಕ್ಷೇತ್ರದ ಶಾಸಕ ಅನಿಲ್ ಕುಮಾರ್ ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಭಾಗವಹಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ರವಿಶಂಕರ್ ಡಿ, ಟಿ.ಎಸ್ ಶ್ರೀವತ್ಸ, ಜಿ.ಡಿ ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್‌ನ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತಿಂದ್ರ.ಎಸ್, ವಿವೇಕಾನಂದ.ಎಸ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಯ ಅಧ್ಯಕ್ಷ ಕೆ.ಮರಿಸ್ವಾಮಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿಗಳು ಹಾಗೂ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್, ಮೈಸೂರು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಸುಯೋಗ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ ಆಚರಣೆ



ಆರೋಗ್ಯದಲ್ಲಿ ಪೌಷ್ಟಿಕಾಂಶದ ಮಹತ್ವ ಕುರಿತ ವಿಚಾರ ಸಂಕಿರಣವನ್ನು ಡಾ.ಪೂರ್ಣಿಮಾ ಉದ್ಘಾಟಿಸಿದರು.

ಮೈಸೂರು, ಸೆ. 8– ನಮ್ಮ ದೈಹಿಕ ಆರೋಗ್ಯಕ್ಕೆ ನಾವು ಸೇವಿಸುವ ಆಹಾರದಲ್ಲಿನ ಪೋಷಕಾಂಶಗಳು ಅತ್ಯವಶ್ಯಕ ಎಂದು ಪೂರ್ಣಿಮಾ ಆಸ್ಪತ್ರೆ ನಿರ್ದೇಶಕಿ ಡಾ.ಎಸ್.ಪೂರ್ಣಿಮಾ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರದ ಸುಯೋಗ ಆಸ್ಪತ್ರೆಯಲ್ಲಿ ಸುಯೋಗ ಆಸ್ಪತ್ರೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಉತ್ತಿಷ್ಠ ಭಾರತ ಪ್ರತಿಷ್ಠಾನ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹದ ಅಂಗವಾಗಿ ಏರ್ಪಡಿಸಿದ್ದ ಆರೋಗ್ಯದಲ್ಲಿ ಪೌಷ್ಟಿಕಾಂಶದ ಮಹತ್ವ ಕುರಿತು ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಗರ್ಭಿಣಿಯರು ತೆಗೆದುಕೊಳ್ಳುವ ಪೋಷಕಾಂಶಗಳು ಜನಿಸುವ ಮಗುವಿನ ಮೇಲೆ ಪರಿಣಾಮ ಬೀರುತ್ತದೆ ಎಂದ ಅವರು, ಹಣ್ಣು ಸೊಪ್ಪು, ತರಕಾರಿಗಳಲ್ಲಿ ಹೆಚ್ಚು ಪೋಷಕಾಂಶವಿದ್ದು, ಮಾರು ಕಟ್ಟೆಯಲ್ಲಿ ಸಿಗುವ ಪೋಷಕಾಂಶದ ಪಾನೀಯಗಳು ಉಪಯುಕ್ತವಲ್ಲ, ಅವು ಎಂದೆಂದೂ ಅಪಾಯಕಾರಿಯೇ ಎಂದು ಎಚ್ಚರಿಸಿದ ಅವರು ಮನೆಯೊಳಗೆ ತಯಾರಿಸಿದ ಆಹಾರ ಸೇವಿಸಿ. ನಮ್ಮ ಆಹಾರವನ್ನು ಗೌರವಿಸಿ ಅದರಿಂದ ಉತ್ತಮ ಆರೋಗ್ಯವನ್ನು ಹೊಂದಿರಿ ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕ ನುಡಿಗಳಗಳನ್ನಾಡಿದ ಸುಯೋಗ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ತಿಂದ ಆಹಾರವನ್ನು ಜೀರ್ಣಿಸಿಕೊಂಡಾಗ ಮಾತ್ರ ಆರೋಗ್ಯ ಸಾಧ್ಯ, ಋತುಮಾನಕ್ಕೆ ತಕ್ಕಂತೆ ಆಹಾರ ಸೇವಿಸಬೇಕು. ನಾವು ಪ್ರಕೃತಿಯ ಭಾಗವಾಗಿ ಪ್ರಕೃತಿಯನ್ನು ಅನುಸರಿಸುವುದರಿಂದ ಉತ್ತಮ ಆರೋಗ್ಯ ಹೊಂದಬಹುದು ಎಂದರು. ನಾವು ಯಾವಾಗ ತಿನ್ನಬೇಕು, ಎಷ್ಟು ತಿನ್ನಬೇಕು, ಹೇಗೆ ತಿನ್ನಬೇಕು ಎಂಬುದರ ಪ್ರಜ್ಞೆ ಅವಶ್ಯಕ. ಸೂರ್ಯನ ಬೆಳಕಿಗೆ ಮೈ ಒಡ್ಡುವಿಕೆಯಿಂದ ಉಚಿತವಾಗಿ ಸಿಗಬಹುದಾದ ವಿಟಮಿನ್ ಡಿ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಖ್ಯಾತ ಸಂಸ್ಕೃತ ವಿದುಷಿ ಡಾ.ಲೀಲಾ ಪ್ರಕಾಶ್ ಮಾತನಾಡಿ, ಚರಕ ಸುಶ್ರುತರಿಂದ ಹೇಳಲ್ಪಟ್ಟ ವೈದ್ಯಕೀಯ ವಿಚಾರಗಳು ಸಾರ್ವಕಾಲಿಕ ಮಹತ್ವ ಹೊಂದಿದ್ದು, ಹಸಿವಾದಾಗ ಮಾತ್ರ ತಿನ್ನಿ. ಎರಡು ಬಾರಿ ಮಾತ್ರ ಆಹಾರಸೇವನೆ ಅಪೇಕ್ಷಣೀಯ. ಆಹಾರದ ಪರಿಕ್ರಮಗಳ ಬಗ್ಗೆ ಎಚ್ಚರ ವಹಿಸಿ. ಮೊಬೈಲ್ ನೋಡುತ್ತ ಆಹಾರ ಸೇವಿಸಬೇಡಿ. ಬಿಸಿಯಾಗಿ ಆಹಾರ ಸೇವಿಸಿ. ಶಾಂತಚಿತ್ತದಿಂದ ಆಹಾರ ಸೇವಿಸಿ ಎಂದು ಆರೋಗ್ಯದ ಬಗ್ಗೆ ಉಪಯುಕ್ತಕರ ಮಾಹಿತಿ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ ವಾಜಪೇಯಿ, ಹಿರಿಯ ಯೋಗಾಚಾರ್ಯ ಎಂಪಿ ರಮೇಶ್ ಬಾಬು, ಉತ್ತಿಷ್ಠ ಭಾರತ ಪ್ರತಿಷ್ಠಾನ ಕಾರ್ಯದರ್ಶಿ ಎಂ.ವಿ.ನಾಗೇಂದ್ರ ಬಾಬು ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಅಮೆರಿಕಾದ ಕೆಂಟುಕಿ ಹೆದ್ದಾರಿಯಲ್ಲಿ ಹಲವರ ಮೇಲೆ ಗುಂಡಿನ ದಾಳಿ



ವಾಷಿಂಗ್ಟನ್: ಅಮೆರಿಕಾದ ಕೆಂಟುಕಿ ಹೆದ್ದಾರಿ ಬಳಿ ಬಂದೂಕುಧಾರಿಯೊಬ್ಬ ಹಲವರ ಮೇಲೆ ಗುಂಡಿನ ದಾಳಿ ನಡೆಸಿರುವ ಘಟನೆ ಶನಿವಾರ ರಾತ್ರಿ ನಡೆದಿದೆ. ಕೆಂಟುಕಿ ಪೊಲೀಸ್ ವಕ್ತಾರ ಸ್ಕಾಟಿ ಪೆನ್ನಿಂಗ್ಟನ್ ಮಾಧ್ಯಮಗಳೊಂದಿಗೆ ಮಾತನಾಡಿದ್ದು, ಐ–75 ಹೆದ್ದಾರಿಯಲ್ಲಿ ಹಲವರ ಮೇಲೆ ಗುಂಡಿನ ದಾಳಿಯಾಗಿದ್ದು, 4–6 ಮಂದಿ ಗಾಯಗೊಂಡಿದ್ದಾರೆ. ಶಂಕಿತರ ಕೈವಾಡದ ಬಗ್ಗೆ ತಕ್ಷಣಕ್ಕೆ ಏನೂ ತಿಳಿದುಬಂದಿಲ್ಲ. ಕಾನೂನು ಜಾರಿ ಪ್ರಕ್ರಿಯೆ ಹಿನ್ನೆಲೆ ಲಂಡನ್‌ನ ಸಣ್ಣ ನಗರದ ಉತ್ತರ ಭಾಗದ 9 ಮೈಲಿಯನ್ನು ಮುಚ್ಚಲಾಗಿದೆ ಎಂದು ಹೇಳಿದ್ದಾರೆ. ಲಾರೆಲ್ ಕೌಂಟಿ ಶೆರಿಫ್ ಕಚೇರಿ ಹೇಳಿಕೆ ಬಿಡುಗಡೆ ಮಾಡಿ, ಹಲವರಿಗೆ ತೀವ್ರ ಗಾಯಗಳಾಗಿದ್ದು, ಸಾವುಗಳು ಸಂಭವಿಸಿಲ್ಲ. ಗವರ್ನರ್ ಆಂಡಿ ಬೆಶಿಯರ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಈ ಪರಿಸ್ಥಿತಿ ಬಗ್ಗೆ ತಿಳಿದಿರುವುದಾಗಿ ಹೇಳಿಕೊಂಡಿದ್ದಾರೆ. ನಾವು ಪರಿಸ್ಥಿತಿಯನ್ನು ಸಕ್ರಿಯವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇವೆ. ಸಾಧ್ಯವಿರುವ ಯಾವುದೇ ರೀತಿಯಲ್ಲಿ ಬೆಂಬಲವನ್ನು ನೀಡುತ್ತೇವೆ, ಶಂಕಿತನ ಬಂಧನವಾಗಿಲ್ಲ. ಆತ ಎಲ್ಲಿದ್ದಾನೆಂಬುದು ತಿಳಿದುಬಂದಿಲ್ಲ.

ಮೂವರು ಮಹಿಳೆಯರ ಬಳಿ ಇತ್ತು ವಿಶ್ವದ ಅತ್ಯಂತ ಅಪಾಯಕಾರಿ ವಿಷ



ಹೈದರಾಬಾದ್: ಆಂಧ್ರಪ್ರದೇಶ ಪೊಲೀಸರು ಮೂವರು ಮಹಿಳೆಯರನ್ನು ಬಂಧಿಸಿದ್ದಾರೆ ಮತ್ತು ಅವರಿಂದ ವಿಶ್ವದ ಅತ್ಯಂತ ಅಪಾಯಕಾರಿ ವಿಷವೆಂದು ಪರಿಗಣಿಸಲಾದ ಸೈನೈಡ್ ಅನ್ನು ವಶಪಡಿಸಿಕೊಂಡಿದ್ದಾರೆ. ಈ ಮಹಿಳೆಯರ ಬಂಧನದ ಬಳಿಕ ಬಹಿರಂಗಗೊಂಡಿರುವ ಮಾಹಿತಿ ಪೊಲೀಸರನ್ನು ಬೆಚ್ಚಿ ಬೀಳಿಸಿದೆ. ದೊಡ್ಡ ಸಂಚು ನಡೆಸುತ್ತಿರುವಾಗ, ಈ ಮಹಿಳೆಯರು ಇದುವರೆಗೆ ಕನಿಷ್ಠ ನಾಲ್ವರನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಈ ಮೂವರು ಮಹಿಳೆಯರು ಇತ್ತೀಚೆಗೆ ನಾಗೂರ್ ಬಿ ಎಂಬ ಮಹಿಳೆಯನ್ನು ಕೊಂದು ನಂತರ ಇಬ್ಬರು ಮಹಿಳೆಯರನ್ನು ಕೊಲ್ಲಲು ಪ್ರಯತ್ನಿಸಿದರು, ಆದರೆ ಅವರು ಬದುಕುಳಿದರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ರಜನಿ, ವೆಂಕಟೇಶ್ವರಿ ಮತ್ತು ರಮಣಮ್ಮ ಎಂಬ ಮೂವರು ಮಹಿಳೆಯರನ್ನು ಪೊಲೀಸರು ಬಂಧಿಸಿದ್ದಾರೆ. ಇವರು ತೆನಾಲಿ ಜಿಲ್ಲೆಯ ನಿವಾಸಿಗಳು. ಆರೋಪಿಗಳಲ್ಲಿ ಒಬ್ಬಳಾದ ಮಡಿಯಾಲ ವೆಂಕಟೇಶ್ವರಿ ಈ ಹಿಂದೆ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ 30ಕ್ಕೂ ಹೆಚ್ಚು ಉಗ್ರರ ಬಂಧನ



ಲಾಹೋರ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಪ್ರಮುಖ ಭಯೋತ್ಪಾದಕ ದಾಳಿಯ ಸಂಚನ್ನು ವಿಫಲಗೊಳಿಸಲಾಗಿದ್ದು, ಅಲ್–ಖೈದಾ,133 ಬ್ರಿಗೇಡ್ ಸೇರಿದಂತೆ ವಿವಿಧ ನಿಷೇಧಿತ ಗುಂಪುಗಳ 33 ಉಗ್ರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ವಾರ ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ 475 ಗುಪ್ತಚರ–ಆಧಾರಿತ ಕಾರ್ಯಾಚರಣೆ ನಡೆಸಿರುವ ಪಂಜಾಬ್ ಪೊಲೀಸರ ಭಯೋತ್ಪಾದನಾ ನಿಗ್ರಹ ಇಲಾಖೆ ಉಗ್ರರ ವಿರುದ್ಧ ವಿರುದ್ಧ 32 ಪ್ರಕರಣಗಳನ್ನು ದಾಖಲಿಸಿದೆ. ಅಲ್ಲದೇ ಅವರನ್ನು ಅಜ್ಞಾತಸ್ಥಳಕ್ಕೆ ಸ್ಥಳಾಂತರಿಸಿದ್ದಾರೆ. ಕನಿಷ್ಠ 475 ಶಂಕಿತ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಅಲ್‌ಖೈದಾ, 133 ಬ್ರಿಗೇಡ್, ಸಿಪಾಹ್ ಸಹಬಾ ಪಾಕಿಸ್ತಾನ, ಲಷ್ಕರ್ ಜಾಂಗ್ವಿ ಮತ್ತು ತೆಹ್ರೀಕ್ ಜಫಾರಿಯಾ ಪಾಕಿಸ್ತಾನದ ಭಯೋತ್ಪಾದಕರನ್ನು, ಶಸ್ತ್ರಾಸ್ತ್ರಗಳು, ಸ್ಫೋಟಕಗಳು ಮತ್ತು ಇತರ ನಿಷೇಧಿತ ವಸ್ತುಗಳೊಂದಿಗೆ ಬಂಧಿಸಲಾಗಿದೆ.

ಪಿಹೆಚ್.ಡಿ ಪದವೀಧರನ ಬೀದಿಬದಿ ಆಹಾರ ವ್ಯಾಪಾರ



ಚೆನ್ನೈ: ತಮಿಳುನಾಡಿನ ಚೆನ್ನೈನಲ್ಲಿ ಜೈವಿಕ ತಂತ್ರಜ್ಞಾನ ವಿಷಯದಲ್ಲಿ ಪಿಎಚ್.ಡಿ ಪಡೆದಿರುವ ಯುವಕ ಬೀದಿಬದಿಯಲ್ಲಿ ಆಹಾರ ಹೋಟೆಲ್ ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ಅಷ್ಟೇ ಅಲ್ಲ, ಅವರು ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯತೆ ಪಡೆದುಕೊಂಡಿದ್ದಾರೆ. ಅಮೆರಿಕದ ಜನಪ್ರಿಯ ವ್ಲಾಗರ್ ಕ್ರಿಸ್ಟೋಫರ್ ಲೆವಿಸ್ ಅವರು ಇತ್ತೀಚೆಗೆ ಚೆನ್ನೈನಲ್ಲಿ ಗೂಗಲ್ ಮ್ಯಾಪ್ ಸಹಾಯದಿಂದ ಪ್ರಯಾಣಿಸುವಾಗ ಲೆವಿಸ್ ಅವರು ಪಿಎಚ್.ಡಿ ಪದವೀಧರನ ಬೀದಿಬದಿ ಫುಡ್ ಕಾರ್ಟ್ ಪತ್ತೆ ಮಾಡಿದ್ದರು. ಚಿಕನ್ 65 ಆರ್ಡರ್ ಮಾಡಿದ ಲೆವಿಸ್, ಅದು ತಯಾರಾಗುವವರೆಗೂ ಮಾರಾಟಗಾರನ ಜತೆ ಮಾತಿಗಿಳಿದರು. ಆತ ಬಯೋ ಟೆಕ್ನಾಲಜಿ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಾತ ಎನ್ನುವುದನ್ನು ತಿಳಿದು ಅಚ್ಚರಿಗೊಂಡರು.

ಈ ವಿಡಿಯೋವನ್ನು 'ಚೆನ್ನೈನಲ್ಲಿ ಚಿಕನ್ 65 ಮಾರಾಟ ಮಾಡುತ್ತಿರುವ ಕಠಿಣ ಪರಿಶ್ರಮಿ ವಿದ್ಯಾರ್ಥಿಗೆ 100 ಡಾಲರ್ ಉಡುಗೊರೆ ಎಂಬ ಅಡಿಬರಹದೊಂದಿಗೆ ಲೆವಿಸ್ ಹಂಚಿಕೊಂಡಿದ್ದಾರೆ. ತಾವು ಪಿಎಚ್.ಡಿ ಪದವೀಧರ ಎಂದು ಹೇಳಿಕೊಂಡ ರಾಯನ್, ಗೂಗಲ್‌ನಲ್ಲಿ ತಮ್ಮ ಸಂಶೋಧನಾ ಲೇಖನಗಳು ಸಿಗುತ್ತವೆ.

ಮಗಳ ತಲೆಗೆ ಸಿಸಿಟಿವಿ ಅಳವಡಿಸಿದ ತಂದೆ



ಪಾಕಿಸ್ತಾನ: ಸಾಮಾನ್ಯವಾಗಿ ಸಾರ್ವಜನಿಕ ಸ್ಥಳ, ಕಂಪೆನಿ ಹಾಗೂ ಮನೆಗಳಲ್ಲಿ ಭದ್ರತೆಯ ದೃಷ್ಟಿಯಿಂದ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿರುತ್ತಾರೆ. ಆದರೆ ಇಲ್ಲೊಬ್ಬ ವ್ಯಕ್ತಿ ತನ್ನ ಮಗಳ ತಲೆ ಮೇಲೆ ಕಿರೀಟದಂತೆ ಸಿಸಿ ಕ್ಯಾಮರಾ ಅಳವಡಿಸಿದ್ದು, ಸದ್ಯ ಘಟನೆಗೆ ಸಂಬಂಧಿಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗುತ್ತಿದೆ. ಮಗಳು ಎಲ್ಲೆಲ್ಲಿ ಹೋಗ್ತಾಳೆ, ಏನು ಮಾಡುತ್ತಾಳೆ ಎಂದು ತಿಳಿಯಲು ಈತ ತನ್ನ ಮಗಳ ತಲೆ ಮೇಲೆ ಸಿಸಿ ಕ್ಯಾಮರಾ ಅಳವಡಿಸಿರುವುದಾಗಿ ವರದಿಯಾಗಿದೆ. ಈ ಘಟನೆ ಪಾಕಿಸ್ತಾನದಲ್ಲಿ ನಡೆದಿದ್ದು. ವೈರಲ್ ಆಗಿರುವ ವಿಡಿಯೋದಲ್ಲಿ ತನ್ನ ತಂದೆ 24/7 ತನ್ನ ಮೇಲೆ ನಿಗಾ ವಹಿಸಲು ಸಿಸಿಟಿವಿ ಫಿಕ್ಸ್ ಮಾಡಿದ್ದಾರೆ ಎಂದು ಯುವತಿ ಹೇಳಿದ್ದಾಳೆ. ಇದಲ್ಲದೇ ತಂದೆಯ ಈ ನಿರ್ಧಾರದಿಂದ ನಾನು ಸಂತೋಷವಾಗಿದ್ದೇನೆ ಎಂದು ಹೇಳಿಕೊಂಡಿದ್ದಾಳೆ.

ಮಡಿಕೇರಿಯಲ್ಲಿ ಸ್ಕ್ವಾ.ಲೀ.ದೇವಯ್ಯ ಪುಣ್ಯಸ್ಮರಣೆ

ಭಾವಚಿತ್ರಕ್ಕೆ ಕುಟುಂಬಸ್ಥರು, ಮಾಜಿ ಯೋಧರಿಂದ ಪುಷ್ಪಾರ್ಚನೆ

ಮಡಿಕೇರಿ, ಸೆ.8-ಭಾರತ-ಪಾಕ್ ನಡುವಿನ 1965ರ ಯುದ್ಧದಲ್ಲಿ ವೀರ ಮರಣವನ್ನಪ್ಪಿದ ಕೊಡಗಿನ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಅವರ 59ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಗರದ ಖಾಸಗಿ ಬಸ್ ನಿಲ್ದಾಣದ ವೀರಯೋಧ ವೃತ್ತದಲ್ಲಿ ಪುಷ್ಪನಮನ ಸಲ್ಲಿಸುವ ಮೂಲಕ ನಡೆಯಿತು.

ಕೊಡವ ಮಕ್ಕಡ ಕೂಟ, ಅಜ್ಜಮಾಡ ಕುಟುಂಬಸ್ಥರು ಹಾಗೂ ಸ್ಕ್ವಾ.ಲೀ.ಅಜ್ಜಮಾಡ ದೇವಯ್ಯ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಜ್ಜಮಾಡ ದೇವಯ್ಯ ಭಾವಚಿತ್ರಕ್ಕೆ ಏರ್ ಮಾರ್ಷಲ್ ಕೆ.ಸಿ.ನಂದಾ ಕಾರ್ಯಪ್ಪ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಅಡಿಷನಲ್ ಎಸ್.ಪಿ. ಸುಂದರ್ ರಾಜ್, ಅಜ್ಜಮಾಡ ಕುಟುಂಬಸ್ಥರು, ಮಾಜಿ ಯೋಧರು ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಿದರು.



ಮಡಿಕೇರಿ ಖಾಸಗಿ ಬಸ್ ನಿಲ್ದಾಣದ ವೀರಯೋಧ ವೃತ್ತದಲ್ಲಿ ಅಜ್ಜಮಾಡ ದೇವಯ್ಯ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ರಾಷ್ಟ್ರೀಯ ಪುಣ್ಯದಿನವನ್ನಾಗಿ ಘೋಷಿಸಿ: ಇದೇ ವೇಳೆ ಮಾತನಾಡಿದ ಸ್ಕ್ವಾ.ಲೀ.ಅಜ್ಜಮಾಡ ದೇವಯ್ಯ ಟ್ರಸ್ಟ್‌ನ ಅಧ್ಯಕ್ಷ ಅಜ್ಜಮಾಡ ಕಟ್ಟಿಮಂದಯ್ಯ, ಭಾರತ-ಪಾಕ್ ಯುದ್ಧದ ಸಂದರ್ಭ ಶತ್ರು ರಾಷ್ಟ್ರದ ವಿಮಾನವನ್ನು ಹೊಡೆದುರುಳಿಸುವ ಮೂಲಕ ಕೆಚ್ಚೆದೆಯ ಸಾಹಸ ಮೆರೆದು ಸ್ಕ್ವಾ.ಲೀ.ದೇವಯ್ಯ ಹುತಾತ್ಮರಾದರು. ಅವರ ಬಲಿದಾನದ ದಿನವನ್ನು 'ರಾಷ್ಟ್ರೀಯ ಪುಣ್ಯದಿನ'ವನ್ನಾಗಿ ಘೋಷಿಸುವ ಮೂಲಕ ಸರ್ಕಾರವೇ ಪುಣ್ಯದಿನ ಆಚರಿಸಬೇಕೆಂದು ಒತ್ತಾಯಿಸಿದರು.

ಕೊಡಗು ಫೀ.ಮಾ.ಕೆ.ಎಂ.ಕಾರ್ಯಪ್ಪ, ಜ.ತಿಮ್ಮಯ್ಯ ಅವರಂತಹ ಮಹಾನ್ ವೀರ ಸೇನಾನಿಗಳು ಹಾಗೂ ಕೆಚ್ಚೆದೆಯ ಯೋಧರನ್ನು ಈ ನಾಡಿಗೆ ನೀಡಿದ ಪುಣ್ಯಭೂಮಿ. ಈ ನೆಲದ ಸುಪುತ್ರರಾಗಿ ದೇಶ ರಕ್ಷಣೆಗಾಗಿ ಬಲಿದಾನಗೈದ ಸ್ಕ್ವಾ.ಲೀ. ದೇವಯ್ಯ ಅವರ ಭಾವಚಿತ್ರವನ್ನು ಎಲ್ಲಾ ಕೊಡವ ಸಮಾಜಗಳಲ್ಲಿ ಅಳವಡಿಸಬೇಕು. ದೇವಯ್ಯ ಅವರು ಅಜ್ಜಮಾಡ ಕುಟುಂಬದಲ್ಲಿ ಜನಿಸಿರಬಹುದು. ಆದರೆ, ಅವರು ಇಡೀ ರಾಷ್ಟ್ರಕ್ಕೆ ಸೇರಿದ ವ್ಯಕ್ತಿಯಾಗಿದ್ದಾರೆ ಎಂದು ಸ್ಮರಿಸಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ದೇವಯ್ಯ ಅವರು ರಾಷ್ಟ್ರ ರಕ್ಷಣೆಗಾಗಿ ನಡೆಸಿದ ಹೋರಾಟದ ಮೂಲಕ ಎಲ್ಲಾ ವಿಚಾರಗಳಿಗೂ ಮಿಗಿಲಾಗಿ 'ದೇಶ ಮೊದಲು' ಎನ್ನುವುದನ್ನು ತೋರಿಸಿಕೊಡುವ ಮೂಲಕ ಪ್ರತಿಯೊಬ್ಬರಿಗೂ ಮಾರ್ಗದರ್ಶಕರಾಗಿದ್ದಾರೆ ಎಂದು ಹೇಳಿದರು.

ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಮುತ್ತಪ್ಪ ಮಾತನಾಡಿ, ರಾಷ್ಟ್ರದ ಹೆಮ್ಮೆಯ ಪುತ್ರ ದೇವಯ್ಯ ಅವರ ಭಾವಚಿತ್ರವನ್ನು ಮಡಿಕೇರಿ ಕೊಡವ ಸಮಾಜದಲ್ಲಿ ಅಳವಡಿಸಲಾಗುವುದು. ಅವರು ತಮ್ಮ ದೇಶಪ್ರೇಮ, ಸಾಹಸ, ಕೆಚ್ಚೆದೆಯ ನಿಲುವುಗಳ ಮೂಲಕ ಯುವ ಪೀಳಿಗೆಗೆ ಮಾರ್ಗದರ್ಶಕರಾಗಿದ್ದಾರೆ ಎಂದು ತಿಳಿಸಿದರು.

> ಯೋಧರ ನಾಡೆಂದು ಕರೆಯಲ್ಪಡುವ ಕೊಡಗಿನಲ್ಲಿ ಇತ್ತೀಚಿನ ದಿನಗಳಲ್ಲಿ ಸೈನ್ಯಕ್ಕೆ ಸೇರುತ್ತಿರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ದೇವಯ್ಯ ಅವರ ಆದರ್ಶಗಳನ್ನು ಯುವ ಪೀಳಿಗೆ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಲು ಮುಂದೆ ಬರಬೇಕು.
>
> -ಅನಿತಾ ಪೂವಯ್ಯ, ನಗರಸಭೆ ಮಾಜಿ ಅಧ್ಯಕ್ಷೆ

ಮಾಜಿ ಯೋಧ ಮುಂಜಾಂದಿರ ಅಪ್ಪಯ್ಯ ರಾಜಾ ಮಾತನಾಡಿದರು. ಇದೇ ವೇಳೆ ಕೊಡವ ಮಕ್ಕಡ ಕೂಟದ ಬೊಳ್ಳಜಿರ ಅಯ್ಯಪ್ಪ, ದೇವಯ್ಯ ಅವರ ಭಾವಚಿತ್ರವನ್ನು ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಎಂ.ಪಿ. ಮುತ್ತಪ್ಪ ಅವರಿಗೆ ಕೊಡುಗೆ ನೀಡಿದರು. ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಮಾಜಿ ಯೋಧರಾರ ಮಲಚ್ಚೀರ ಅಚ್ಚಯ್ಯ, ಬೊಟ್ಟಂಗಡ ಜಪ್ಪು, ಬಾಳೆಯಡ ಮಂದಪ್ಪ, ಅಜ್ಜಮಾಡ ಕುಟುಂಬಸ್ಥರಾದ ಬೆಳ್ಯಪ್ಪ, ಕಾರ್ಯಪ್ಪ ಚಂಗಪ್ಪ, ಬೋಪಯ್ಯ, ಅಯ್ಯಣ್ಣ, ಪುಟ್ಟಿಚಂಡ ಡಾನ್ ದೇವಯ್ಯ, ಕೂಟದ ಪದಾಧಿಕಾರಿ ಪುತ್ತೇರಿರ ಕಾಳಯ್ಯ ಮೊದಲಾದವರು ಹಾಜರಿದ್ದರು.

ಇಂದು, ನಾಳೆ ಜನಜಾಗೃತಿ ಕಾರ್ಯಕ್ರಮ

ಮಡಿಕೇರಿ, ಸೆ.8-ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಸೋಮವಾರ (ಸೆ.9) ನಾಪೋಕ್ಲು ಮತ್ತು ಮಂಗಳವಾರ(ಸೆ.10) ಚೇರಂಬಾಣೆಯಲ್ಲಿ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ನಾಪೋಕ್ಲು ಮತ್ತು ಚೇರಂಬಾಣೆಯಲ್ಲಿ ಅಂದು ಬೆಳಗ್ಗೆ 10.30ಕ್ಕೆ ಮಾನವ ಸರಪಳಿ ನಿರ್ಮಿಸಿ ಹಕ್ಕೊತ್ತಾಯ ಮಂಡಿಸಲಾಗುವುದು. ಜನಜಾಗೃತಿ ಕಾರ್ಯಕ್ರಮದಲ್ಲಿ ಸರ್ವ ಕೊಡವರು ಪಾಲ್ಗೊಳ್ಳುವ ಮೂಲಕ ಸಿಎನ್‌ಸಿ ಹೋರಾಟಕ್ಕೆ ಕೈಜೋಡಿಸಬೇಕು. ಕೊಡವರ ಭೂಮಿಯ ಹಕ್ಕನ್ನು ರಕ್ಷಿಸಲು ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರುದ್ಧ ಹೋರಾಟ ಅನಿವಾರ್ಯವಾಗಿದೆ. ಕೊಡವ ಲ್ಯಾಂಡ್ ಸ್ವಯಂ ನಿರ್ಣಯದ ಭೂ ರಾಜಕೀಯ ಸ್ವಾಯತ್ತೆ ಘೋಷಣೆ ಮತ್ತು ಕೊಡವರಿಗೆ ಎಸ್‌ಟಿ ಟ್ಯಾಗ್ ನೀಡುವುದು ಅಗತ್ಯವಾಗಿದೆ. ಇದಕ್ಕಾಗಿ ವ್ಯಾಪಕ ಜನಜಾಗೃತಿ ಮತ್ತು ಜಿಲ್ಲೆಯಾದ್ಯಂತ ಶಾಂತಿಯುತ ಬೃಹತ್ ಮಾನವ ಸರಪಳಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ನಾಚಪ್ಪ ತಿಳಿಸಿದ್ದಾರೆ.

ಪಂಚಮುಖಿ ನಾಗ ಗಣೇಶ ಮೂರ್ತಿ ಪ್ರತಿಷ್ಠಾಪನೆ



ವಿರಾಜಪೇಟೆ, ಸೆ.8-ಪಟ್ಟಣದ ಅರಸು ನಗರದ ಶ್ರೀ ವಿಘ್ನೇಶ್ವರ ಸೇವಾ ಸಮಿತಿ ವತಿಯಿಂದ 44ನೇ ವರ್ಷದ ಗೌರಿ-ಗಣೇಶೋತ್ಸವದ ಅಂಗವಾಗಿ ಉದ್ಭವ ಪಂಚಮುಖಿ ನಾಗ ಹಾಗೂ ಶಿವಲಿಂಗ ಚಿತ್ರ ಹೋಲುವ ಮಂಟಪದಲ್ಲಿ ಶ್ರೀ ವಿಘ್ನೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಪ್ರತಿಷ್ಠಾಪನೆಗೂ ಮುನ್ನ ಮಂಟಪದಲ್ಲಿ ಸ್ಥಳೀಯ ಜ್ಯೋತಿಷ್ಯರಾದ ದಿವಾಕರ್ ಭಟ್ ನೇತೃತ್ವದಲ್ಲಿ ವಿವಿಧ ಪೂಜಾ ಕಾರ್ಯ ನಡೆಸಲಾಯಿತು. ಬಳಿಕ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ, ಅನ್ನಸಂತರ್ಪಣೆ ಏರ್ಪಡಿಸಲಾಯಿತು.

ಇದೇ ವೇಳೆ ಶ್ರೀಕಾಂತ್ ಶೆಟ್ಟಿ, ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ಬಿ.ಕೆ.ಚಂದ್ರು, ಶ್ರೀ ಮುತ್ತಪ್ಪ ದೇವಸ್ಥಾನ ಅಧ್ಯಕ್ಷ ಸದಾನಂದ, ಸ್ಥಳೀಯರಾದ ರಾಜಣ್ಣ, ಅಂಬಿಕಾ, ವಿಘ್ನೇಶ್ವರ ಸೇವಾ ಸಮಿತಿ ಸದಸ್ಯರು ಮತ್ತು ನಿವಾಸಿಗಳು ಉಪಸ್ಥಿತರಿದ್ದರು.

ಕುವೇಂಡ ವೈ.ಹಂಝುಉಲ್ಲಾರಿಗೆ ಪ್ರಶಸ್ತಿ ಪ್ರದಾನ



ಹಿರಿಯ ಪತ್ರಕರ್ತ ಕುವೇಂಡ ವೈ.ಹಂಝುಉಲ್ಲಾ ಅವರಿಗೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪೊನ್ನಂಪೇಟೆ, ಸೆ.8-ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ)ನ ಸ್ಥಾಪಕ ಅಧ್ಯಕ್ಷ ಹಾಗೂ ಹಿರಿಯ ಪತ್ರಕರ್ತ ಕುವೇಂಡ ವೈ.ಹಂಝುಉಲ್ಲಾ ಅವರಿಗೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ 2022ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಂಗಳೂರಿನ ಕುದ್ಮಲ್ ರಂಗರಾವ್ ಪುರಭವನದಲ್ಲಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುವೇಂಡ ವೈ.ಹಂಝುಉಲ್ಲಾ ಅವರಿಗೆ ಶಿಕ್ಷಣ ಪ್ರೇಮಿ, ಪದ್ಮಶ್ರೀ ಹರೇಕಳ ಹಾಜಬ್ಬ 50 ಸಾವಿರ ನಗದು ಬಹುಮಾನ ಒಳಗೊಂಡ ಪ್ರಶಸ್ತಿ ಪ್ರದಾನ ಮಾಡಿದರು.

ಅಕಾಡೆಮಿ ಅಧ್ಯಕ್ಷ ಯು.ಎಚ್.ಉಮರ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಬ್ಯಾರಿ ಅಧ್ಯಯನ ಪೀಠದ ಸಂಯೋಜಕ ಡಾ. ಅಬೂಬಕ್ಕರ್ ಸಿದ್ದೀಕ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಟ್ಯಾನಿ ಜೋಕಿಂ ಆಳ್ವಾರಿಸ್, ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ.ತಲ್ಲೂರು ಶಿವರಾಮ ಶೆಟ್ಟಿ, ಬಂಟ್ವಾಳ ಮೂಡದ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಅಬ್ದುಲ್ ರಜಾಕ್ ಅನಂತಾಡಿ, ಕೆಎಂಎ ಅಧ್ಯಕ್ಷ ದುದ್ದಿಯಂಡ ಸೂಫಿ ಹಾಜಿ, ಪ್ರಧಾನ ಕಾರ್ಯದರ್ಶಿ ಈತಲತಂಡ ರಫೀಕ್ ತೂಚಮಕೇರಿ, ಹಿರಿಯ ನಿರ್ದೇಶಕ ಪುದಿಯತಂಡ ಹೆಚ್.ಸಂಸುದ್ದೀನ್, ಪದಾಧಿಕಾರಿಗಳಾದ ಪ್ರೊಯಕೆರ ಎಸ್.ಮೊಹಮ್ಮದ್ ರಫೀಕ್, ಪುದಿಯಾಣೆರ ಎಂ.ಹನೀಫ್, ದುದ್ದಿಯಂಡ ಹೆಚ್.ಮೊಯ್ದು ಹಾಜಿ, ಮಂದಮಾಡ ಎ.ಮುನೀರ್, ದುದ್ದಿಯಂಡ ಮಸೂಕ್ ಸೂಫಿ ಮೊದಲಾದವರಿದ್ದರು.

ವಿರಾಜಪೇಟೆಯಲ್ಲಿ ಕನ್ನಡ ರಥಯಾತ್ರೆಗೆ ಅದ್ದೂರಿ ಸ್ವಾಗತ



ವಿರಾಜಪೇಟೆಗೆ ಆಗಮಿಸಿದ ಕನ್ನಡ ರಥ ಯಾತ್ರೆಗೆ ತಾಲೂಕು ಆಡಳಿತ ಹಾಗೂ ಪುರಸಭೆ ವತಿಯಿಂದ ಸ್ವಾಗತಿಸಲಾಯಿತು.

ವಿರಾಜಪೇಟೆ, ಸೆ.8-ವಿರಾಜಪೇಟೆಗೆ ಭಾನುವಾರ ಆಗಮಿಸಿದ ಕನ್ನಡ ಸುವರ್ಣ ಸಂಭ್ರಮ-50ರ ಜ್ಯೋತಿ ರಥಯಾತ್ರೆಗೆ ತಾಲೂಕು ಆಡಳಿತ ಹಾಗೂ ಪುರಸಭೆ ವತಿಯಿಂದ ಅದ್ದೂರಿ ಸ್ವಾಗತಿಸಲಾಯಿತು.

ಬಳಿಕ ರಥಯಾತ್ರೆಯನ್ನು ಪಂಜರುಪೇಟೆಯಿಂದ ಕಾರು ನಿಲ್ದಾಣ ವರೆಗೆ ಮುಖ್ಯ ರಸ್ತೆಯಲ್ಲಿ ಡೊಳ್ಳು ಕುಣಿತ, ವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ನಂತರ ಕಾರು ನಿಲ್ದಾಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಚಂದ್ರ ಕುಮಾರ್ ಮಾತನಾಡಿ, ಕರ್ನಾಟಕ ಉದಯವಾಗಿ 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅದರ ಸವಿನೆನಪಿನ ಅಂಗವಾಗಿ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಕನ್ನಡ ರಥಯಾತ್ರೆಯನ್ನು ರಾಜ್ಯದ ಗಡಿ ಭಾಗಗಳಲ್ಲಿ ಸಂಚರಿಸುತ್ತಿದೆ. ಕನ್ನಡ ಅಭಿಮಾನ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಕೊಡಗಿನ ಪೊನ್ನಂಪೇಟೆ, ವಿರಾಜಪೇಟೆ, ಮಡಿಕೇರಿಯಲ್ಲಿ ರಥಯಾತ್ರೆ ಸಂಚರಿಸಲಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಪಿ. ರಾಜೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಪುರಸಭೆ ಸದಸ್ಯರಾದ ಎಸ್.ಹೆಚ್. ಮತೀನ್, ಮಹ್ಮದ್ ರಾಫಿ, ರಜನಿಕಾಂತ್, ಸುನೀತಾ ಜೂನಾ, ಮಹದೇವ್, ಗ್ರೇಡ್-2 ತಹಸೀಲ್ದಾರ್ ಪ್ರದೀಪ್ ಕುಮಾರ್, ಕಂದಾಯ ಪರಿವೀಕ್ಷಕ ಎಂ.ಹರೀಶ್, ಯೋಗೇಶ್ ನಾಯ್ಡು, ಸಾಹಿತ್ಯ ಪರಿಷತ್‌ನ ನಿರ್ಮಲಾ ದಶರತ್ ಉಪಸ್ಥಿತರಿದ್ದರು.

ಇದೇ ವೇಳೆ ಕಲಾವಿದೆ ಸುಪ್ರೀತಾ ದಿಲೀಪ್ ಸಂಗಡಿಗರಿಂದ ಗೀತಾ ಗಾಯನ ಕಾರ್ಯಕ್ರಮ ನಡೆಯಿತು. ರಥಯಾತ್ರೆ ಮೆರವಣಿಗೆಯಲ್ಲಿ ಜೈ ಭಾರತ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು, ಪುರಸಭೆ ಸಿಬ್ಬಂದಿ, ನಗರ ಠಾಣೆ ಪೊಲೀಸರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹುಲಿ ದಾಳಿಗೆ ಹಸು ಬಲಿ

ಗೋಣಿಕೊಪ್ಪ, ಸೆ.8-ಪೊನ್ನಂಪೇಟೆ ತಾಲೂಕಿನ ಬೆಳ್ಳೂರು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಭಾನುವಾರ ಬಲಿಯಾಗಿದೆ.

ಗ್ರಾಮದ ಕಾಫಿ ಬೆಳೆಗಾರ ನಂಜಪ್ಪ ಅವರಿಗೆ ಸೇರಿದ ಹಸು ಬಲಿಯಾಗಿದ್ದು, ಮಧ್ಯಾಹ್ನ ಸುಮಾರು 12.40ಕ್ಕೆ ಹುಲಿ ದಾಳಿ ಮಾಡಿ ಕೊಂದು ಹಾಕಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮಕ್ಕೆ ಮುಂದಾಗಿದ್ದಾರೆ.



ಬೆಳ್ಳೂರು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿರುವುದು.

ಕಾರಾಗೃಹದಲ್ಲಿ ಅರ್ಥಪೂರ್ಣ ಸಾಕ್ಷರತಾ ದಿನಾಚರಣೆ

ಚಾಮರಾಜನಗರ, ಸೆ.8-ಕಾರಾಗೃಹ ಕೈದಿಗಳ ಮನಪರಿವರ್ತನೆಗಾಗಿ ಅಕ್ಷರದ ಬೀಜ ಬಿತ್ತುವ ಮೂಲಕ ಶಿಕ್ಷಣ ಕುರಿತ ಪ್ರಬಂಧ, ಚಿತ್ರಕಲೆ ಹಾಗೂ ರಂಗೋಲಿ ಇನ್ನಿತರೆ ಸ್ಪರ್ಧೆ ಏರ್ಪಡಿಸುವ ಮೂಲಕ ಅಂತಾರಾಷ್ಟ್ರೀಯ ಸಾಕ್ಷರತೆ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಜಿಲ್ಲಾ ಕಾರಾಗೃಹದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಜೇತರಿಗೆ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್ ಬಹುಮಾನ ವಿತರಿಸಿದರು.



ಚಾಮರಾಜನಗರದ ಜಿಲ್ಲಾ ಕಾರಾಗೃಹದಲ್ಲಿ ನಡೆದ ಸಾಕ್ಷರತಾ ದಿನಾಚರಣೆಯಲ್ಲಿ ಕೈದಿಗಳಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಬಳಿಕ ಮಾತನಾಡಿದ ಶ್ರೀಕಂಠರಾಜೇ ಅರಸ್, ಕಾರಾಗೃಹ ಕೈದಿಗಳಿಗೆ ಮನ ಪರಿವರ್ತನೆಯ ತಾಣವಾಗಬೇಕು. ಆಕಸ್ಮಿಕವಾಗಿ ತಪ್ಪುಗಳು ಸಹಜ. ಆದರೆ, ಅದನ್ನು ತಿದ್ದಿ ನಡೆಯುವುದರಲ್ಲಿ ನಿಜವಾದ ಅರ್ಥವಿದೆ. ಕಾರಾಗೃಹದಲ್ಲಿ ಕಂಪ್ಯೂಟರ್ ಕಲಿಕೆ ಹಾಗೂ ಗ್ರಂಥಾಲಯಗಳನ್ನು ಆರಂಭಿಸುವ ಮೂಲಕ ಕೈದಿಗಳ ಪರಿವರ್ತನೆಗೆ ಸರ್ಕಾರ ಸಾಕಷ್ಟು ಅರಿವು ಕಾರ್ಯಕ್ರಮ ಹಮ್ಮಿಕೊಂಡಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಕಾರಾಗೃಹ ವಾಸ ಮುಗಿದ ಬಳಿಕ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬದುಕಬೇಕು ಎಂದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಪ್ರಾಂಶುಪಾಲ ಕಾಶೀನಾಥ್ ಮಾತನಾಡಿ, ಅಜ್ಞಾನದಿಂದ ಸುಜ್ಞಾನದೆಡೆಗೆ ನಡೆಸುವುದೇ ಶಿಕ್ಷಣ. ಮಾನವನಿಂದ ಮಹಾಮಾನವನಾಗಲು ಶಿಕ್ಷಣ, ಸಾಕ್ಷರತೆ ಅಗತ್ಯವಾಗಿದೆ. ಹಿಂದೆ ದೇಶದಲ್ಲಿ ಕಡುಬಡತನ, ಅನಕ್ಷರತೆ ಇತ್ತು. ಪ್ರಸ್ತುತ ಶಿಕ್ಷಣದ ಮಹತ್ವ ಮನಗಂಡು ದೇಶ ಸಾಕ್ಷರತೆಯಲ್ಲಿ ಮುನ್ನಡೆಯುತ್ತಿದೆ. ಇದು ಆರೋಗ್ಯಕರ ಬೆಳವಣಿಗೆಯಾಗಿದೆ. ಕೈದಿಗಳು ಕಾರಾಗೃಹದಲ್ಲಿರುವಷ್ಟು ದಿನಗಳನ್ನು ವ್ಯರ್ಥಮಾಡದೇ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಬೇಕು. ಬರವಣಿಗೆ ಶೈಲಿ ರೂಢಿಸಿಕೊಳ್ಳಬೇಕು. ಗ್ರಂಥಾಲಯದ ಮಹಾತ್ಮರ, ದಾರ್ಶನಿಕರ ಜೀವನಚರಿತ್ರೆಗಳನ್ನು ಓದಬೇಕು. ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಲೋಕೇಶ್ ಮಾತನಾಡಿ, ಸೆ.8ರಂದು ವಿಶ್ವಾದ್ಯಂತ ಸಾಕ್ಷರತಾ ದಿನ ಆಚರಿಸಲಾಗುತ್ತಿದೆ. ದೇಶದಲ್ಲಿ ಅನಕ್ಷರತೆ ತೊಲಗಿಸಿ, ಪ್ರತಿಯೊಬ್ಬರಲ್ಲೂ ಸಾಕ್ಷರತೆ ಬೀಜ ಬಿತ್ತಲು 1967ರಿಂದ ಪ್ರತಿವರ್ಷ ವಿಶ್ವ ಸಾಕ್ಷರತಾ ದಿನ ಆಚರಿಸಲಾಗುತ್ತಿದೆ ಎಂದರು.

ಜಿಲ್ಲಾ ಕಾರಾಗೃಹ ಪ್ರಭಾರ ಅಧೀಕ್ಷಕ ಉತ್ತಮ್ ಜೀ ತಳ್ಳಿಮನಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ಸುರೇಶ್‌ಕುಮಾರ್, ಶಿಕ್ಷಣ ಹಾಗೂ ಸಾಕ್ಷರತೆ ಮಹತ್ವ ಕುರಿತು ತಿಳಿಸಿದರು. ಇದೇ ವೇಳೆ ಸಾಕ್ಷರತೆ ಅರಿವು ಮೂಡಿಸುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಾಕ್ಷರತಾ ಪಾಕ್ಷಿಕ ಭಿತ್ತಿಪತ್ರ ಬಿಡುಗಡೆಗೊಳಿಸಲಾಯಿತು. ಕೈದಿಗಳಿಗೆ ಸಾಕ್ಷರತಾ ಪ್ರಮಾಣ ವಚನ ಬೋಧಿಸಲಾಯಿತು. ಜಿಲ್ಲಾ ಕಾರಾಗೃಹ ವಾರ್ಡರ್ ಅರ್ಪಿತಾ, ಬೋರೇಗೌಡ, ವಯಸ್ಕರ ಶಿಕ್ಷಣ ಇಲಾಖೆ ಕಾರ್ಯಕ್ರಮ ಸಹಾಯಕ ಶೋಭಾ, ಜ್ಯೋತಿ, ಬಿಆರ್‌ಸಿ ಕೇಂದ್ರದ ರೆಬೆಲ್ಲೋ, ಸಿಆರ್‌ಪಿ ಕಿಟ್ಟು ಇತರರು ಕಾರ್ಯಕ್ರಮದಲ್ಲಿ ಇದ್ದರು.

ಇಂದು ನಗರಸಭೆ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆ

ಅಧಿಕಾರದ ಚುಕ್ಕಾಣಿ ಹಿಡಿಯಲು ಬಿಜೆಪಿ ಸುರೇಶ್, ಕಾಂಗ್ರೆಸ್‌ನ ರಾಜಪ್ಪ ನಡುವೆ ಪೈಪೋಟಿ

ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಸೆ.8-ಜಿಲ್ಲಾ ಕೇಂದ್ರ ಚಾಮರಾಜನಗರ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಸೋಮವಾರ (ಸೆ.9) ಚುನಾವಣೆ ನಡೆಯಲಿದ್ದು, ಅಧಿಕಾರದ ಚುಕ್ಕಾಣಿ ಹಿಡಿಯಲು ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ.



ಸುರೇಶ್



ಚಾಮರಾಜನಗರ ನಗರಸಭಾ ಕಾರ್ಯಾಲಯ.



ಆರ್.ಎಂ.ರಾಜಪ್ಪ

31 ಸದಸ್ಯ ಬಲವುಳ್ಳ ನಗರಸಭೆಯಲ್ಲಿ ಬಿಜೆಪಿ 15, ಕಾಂಗ್ರೆಸ್ 8, ಎಸ್‌ಡಿಪಿಐ 6, ಬಿಎಸ್‌ಪಿ 1 ಹಾಗೂ ಒಬ್ಬರು ಪಕ್ಷೇತರರು ಸದಸ್ಯರು ಆಯ್ಕೆಯಾಗಿದ್ದಾರೆ. ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸ್ಥಳೀಯ ಶಾಸಕರು ಹಾಗೂ ಸಂಸದರ ಹಕ್ಕು ಹೊಂದಿರುವುದರಿಂದ ಸಂಖ್ಯಾಬಲ 33ಕ್ಕೇರಿದೆ. ಈ ನಡುವೆ ನಗರಸಭೆ ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರಾಗಿರುವುದರಿಂದ ಬಿಎಸ್‌ಪಿ ಸದಸ್ಯ ಪ್ರಕಾಶ್ ಸದಸ್ಯತ್ವ ಸ್ಥಾನವನ್ನು ವಜಾಗೊಳಿಸಲಾಗಿದೆ. ಹೀಗಾಗಿ, ಸಂಖ್ಯಾಬಲ 32ಕ್ಕೆ ಕುಸಿದಿದೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳೆರಡು ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವುದರಿಂದ 30 ಸದಸ್ಯರ ಪೈಕಿ ಯಾರಾದರೂ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಬಹುದು. ಆದರೆ, ಆಯ್ಕೆಯಾಗುವ ಸದಸ್ಯರಿಗೆ 17 ಸದಸ್ಯರ ಬೆಂಬಲ ಬೇಕಾಗಿದೆ. ಯಾವುದೇ ಪಕ್ಷ 17 ಸದಸ್ಯರ ಬಲವನ್ನು ಹೊಂದಿಲ್ಲ. ಹೀಗಾಗಿ, ಯಾವ ಪಕ್ಷ ಅಧಿಕಾರ ಹಿಡಿಯಲಿದೆ ಎಂಬುದು ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಕಾಂಗ್ರೆಸ್-ಬಿಜೆಪಿ ಪೈಪೋಟಿ: ಕಾಂಗ್ರೆಸ್ ತನ್ನ 8 ಸದಸ್ಯರ ಬಲದೊಂದಿಗೆ ಎಸ್‌ಡಿಪಿಐನ 6 ಸ್ಥಾನ ಹಾಗೂ ಪಕ್ಷೇತರರಾಗಿ ಗೆದ್ದಿದ್ದ ಬಸವಣ್ಣ ಕಾಂಗ್ರೆಸ್ ಸೇರ್ಪಡೆಯಾಗಿದ್ದು, ಶಾಸಕ, ಸಂಸದರು ಪಕ್ಷದವರಾಗಿರುವುದಿಂದ ಕಾಂಗ್ರೆಸ್ 17 ಸದಸ್ಯರ ಬಲ ಹೊಂದಿದ್ದು, ಅಧಿಕಾರ ಪಡೆಯುವ ವಿಶ್ವಾಸ ಹೊಂದಿದೆ.

ಕಾಂಗ್ರೆಸ್‌ನಿಂದ ಆರ್.ಎಂ.ರಾಜಪ್ಪ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಕಣಕ್ಕಿಳಿಸಲಿದೆ ಎನ್ನಲಾಗಿದ್ದು, ಉಪಾಧ್ಯಕ್ಷ ಸ್ಥಾನವನ್ನು ಎಸ್‌ಡಿಪಿಐಗೆ ಬಿಟ್ಟುಕೊಟ್ಟಿದೆ ಎಂದು ತಿಳಿದು ಬಂದಿದೆ. ಬಿಜೆಪಿ ಹೇಗಾದರೂ ಮಾಡಿ ಅಧಿಕಾರ ಹಿಡಿಯಬೇಕೆಂದು ಪಣ ತೊಟ್ಟಿದ್ದು, ನಗರಸಭೆಯಲ್ಲಿ ಕಮಲ ಅರಳಿಸಲು ತಂತ್ರಗಾರಿಕೆಯಲ್ಲಿ ತೊಡಗಿದೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಆಯ್ಕೆ ಚುನಾವಣೆ ವೇಳೆ ಕಾಂಗ್ರೆಸ್‌ನ ಇಬ್ಬರು ಸದಸ್ಯರನ್ನು ಗೈರು ಮಾಡಿಸುವ ಮೂಲಕ ಅಧಿಕಾರವನ್ನು ತನ್ನ ಕಮಲದಂತ ಸೆಳೆದುಕೊಳ್ಳುವ ತಂತ್ರಗಾರಿಕೆ ರೂಪಿಸಿದೆ ಎನ್ನಲಾಗಿದೆ. ಬಿಜೆಪಿಯಿಂದ ಅಧ್ಯಕ್ಷ ಸ್ಥಾನಕ್ಕೆ 28ನೇ ವಾರ್ಡ್‌ನ ಸದಸ್ಯ ಸುರೇಶ್ ಅವರನ್ನು ಅಂತಿಮಗೊಳಿಸಲಾಗಿದ್ದು, ಉಪಾಧ್ಯಕ್ಷ ಸ್ಥಾನಕ್ಕೆ ಯಾರೆಂಬುದನ್ನು ಇನ್ನು ಅಂತಿಮಗೊಳಿಸಿಲ್ಲ.

ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತವಿಲ್ಲದ ಕಾರಣ ಕಾಂಗ್ರೆಸ್ ಅಧಿಕಾರ ಹಿಡಿದು ಆರ್.ಎಂ.ರಾಜಪ್ಪ ಅಧ್ಯಕ್ಷರಾಗುತ್ತಾರೋ ಅಥವಾ ಬಿಜೆಪಿ ಅಧಿಕಾರ ಪಡೆದು ಸುರೇಶ್ ಅಧ್ಯಕ್ಷರಾಗುತ್ತಾರೋ ಎಂಬುದಕ್ಕೆ ಇನ್ನೂ ಕೆಲವೇ ಗಂಟೆಯಲ್ಲಿ ಉತ್ತರ ದೊರೆಯಲಿದೆ.

ಸೆ.14ರಿಂದ ಜಿಲ್ಲೆಯಾದ್ಯಂತ ಸ್ವಚ್ಛತಾ ಆಂದೋಲನ

ಚಾಮರಾಜನಗರ: ಜಿಲ್ಲೆಯಾದ್ಯಂತ ಸೆ.14ರಿಂದ ಅ.2ರವರೆಗೆ ಸ್ವಚ್ಛತಾ ಹೀ ಸೇವಾ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಸ್ವಚ್ಛತೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.



ಚಾ.ನಗರ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಸ್ವಚ್ಛತಾ ಆಂದೋಲನ ಪೂರ್ವಭಾವಿ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸ್ವಭಾವ ಸ್ವಚ್ಛತಾ-ಸಂಸ್ಕಾರ ಸ್ವಚ್ಛತಾ ಧ್ಯೇಯೋದ್ದೇಶದೊಂದಿಗೆ ಏರ್ಪಡಿಸಿರುವ ಸ್ವಚ್ಛತಾ ಆಂದೋಲನ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ನಿರ್ದೇಶನದನ್ವಯ ಪ್ರತಿವರ್ಷದಂತೆ ಈ ಬಾರಿಯೂ ಸ್ವಚ್ಛತೆ ಸಂಬಂಧ ವಿಶಿಷ್ಟ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲಾ ನಗರ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿ ಆಯೋಜಿಸಲಾಗಿದೆ. ಸ್ವಚ್ಛತೆಯೇ ಸೇವೆ ಶೀರ್ಷಿಕೆಯಡಿ ಸಾರ್ವಜನಿಕರಿಗೆ ಶುಚಿತ್ವ, ನೈರ್ಮಲ್ಯದ ಮಹತ್ವ ಕುರಿತು ವ್ಯಾಪಕ ಅರಿವು ಮೂಡಿಸುವುದೇ ಪಾಕ್ಷಿಕ ಆಚರಣೆಯ ಉದ್ದೇಶವಾಗಿದೆ. ಸ್ವಚ್ಛತಾ ಹೀ ಸೇವಾ ಆಂದೋಲನವನ್ನು ಸ್ವಚ್ಛತಾ ಕಿ ಭಾಗಿದಾರಿ, ಸಂಪೂರ್ಣ ಸ್ವಚ್ಛತಾ ಕಾರ್ಯಕ್ರಮ ಹಾಗೂ ಸಫಾಯಿ ಮಿತ್ರ ಆರೋಗ್ಯ ಸುರಕ್ಷಾ ಶಿಬಿರಗಳನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪಾಕ್ಷಿಕ ಆಚರಣೆ ಮೊದಲ ದಿನ ಸ್ವಚ್ಛತಾ ಕಿ ಭಾಗಿದಾರಿ ಕಾರ್ಯಕ್ರಮದಡಿ ಪ್ರತಿಜ್ಞಾ ಸ್ವೀಕಾರ, ಕಾರ್ಯಾಗಾರ, ಮ್ಯಾರಥಾನ್, ಸೈಕಲ್ ಜಾಥಾ, ಮಾನವ ಸರಪಳಿ, ವಿಶೇಷ ಗ್ರಾಮಸಭೆ, ಯುವಕರ ಜಾಥಾ, ತ್ಯಾಜ್ಯವಸ್ತುಗಳಿಂದ ಚಿತ್ರಕಲೆ, ಬ್ರ್ಯಾಂಡಿಂಗ್ ಚಟುವಟಿಕೆ, ತಾಯಿ ಹೆಸರಿನಲ್ಲಿ ಸಸಿ ನೆಡುವ ಅಭಿಯಾನ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ, ರಂಗೋಲಿ, ಚರ್ಚಾ ಸ್ಪರ್ಧೆ, ಗ್ರಾಮೀಣ ಕ್ರೀಡಾಕೂಟ, ಹಸಿ ಮತ್ತು ಒಣಕಸ ವಿಂಗಡಣೆ, ತ್ಯಾಜ್ಯ ಮರುಬಳಕೆ, ಕಲಾಕೃತಿ ರಚನೆ, ಬೀದಿ ಬದಿ ಶುಚಿತ್ವ ಜಾಗೃತಿ ಸೇರಿದಂತೆ ಇತರೆ ಸ್ವಚ್ಛತಾ ಅಭಿಯಾನಕ್ಕೆ ಅಗತ್ಯ ಸಿದ್ಧತೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮಿ, ಅಬಕಾರಿ ಉಪ ಆಯುಕ್ತ ನಾಗಶಯನ, ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ, ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಮಂಜುನಾಥ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಬೈಕ್‌ಗೆ ಬಸ್ ಡಿಕ್ಕಿ: ಸವಾರ ಸಾವು



ಕೊಳ್ಳೇಗಾಲ: ಖಾಸಗಿ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದ ಮುಡಿಗುಂಡದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ತಾಲೂಕಿನ ಮುಳ್ಳೂರು ಗ್ರಾಮದ ರಾಬರ್ಟ್ ಅವರ ಮಗ ಪ್ರವೀಣ್(32) ಮೃತಪಟ್ಟಿದ್ದು, ಈತ ಗ್ರಾಮದಿಂದ ಕೊಳ್ಳೇಗಾಲ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದರು. ಈ ವೇಳೆ ಕೆಸ್ತೂರು ಗ್ರಾಮದ ಕಡೆಯಿಂದ ಪಟ್ಟಣಕ್ಕೆ ಬರುತ್ತಿದ್ದ ಖಾಸಗಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳ ಪರಿಶೀಲಿಸಿದ ಪಟ್ಟಣ ಠಾಣೆ ಪೊಲೀಸರು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹನೂರಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ



ಹನೂರಿನಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸಿರುವುದು.

ಹನೂರು, ಸೆ.8-ತಾಲೂಕಿನ ಎಲ್ಲೆಡೆ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪೂಜಿಸಲಾಯಿತು.

ಇದೇ ವೇಳೆ ಮಾತನಾಡಿದ ಶಾಸಕ ಎಂ.ಆರ್.ಮಂಜುನಾಥ್, ಕ್ಷೇತ್ರದ ಎಲ್ಲರೂ ಸುಭಿಕ್ಷೆಯಿಂದ ಇರಲು ಈ ಬಾರಿ ಉತ್ತಮ ಮಳೆಯಾಗಿದೆ. ಇದರಿಂದ ಕೆರೆಕಟ್ಟೆಗಳು ಭರ್ತಿಯಾಗಿವೆ. ಉತ್ತಮ ಬೆಳೆಯೊಂದಿಗೆ ರೈತರ ಬದುಕು ಹಸನಾಗಲಿ. ಗೌರಿ-ಗಣೇಶ ಹಬ್ಬ ಎಲ್ಲರಿಗೂ ಶುಭ ತರಲಿ ಎಂದರು.

ಮುಖಂಡರಾದ ಪ್ರಶಾಂತ್ ಕುಮಾರ್, ವಿಜಯ್ ಕುಮಾರ್, ಶ್ರೀರಂಗಂ ರಾಜೇಂದ್ರ, ಮುರುಗೇಶ್, ರಾಮು, ಅರುಣ್‌ಸ್ವಾಮಿ, ಮಹದೇವ್, ಸಂಗವೇಲು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 9 ಸೆಪ್ಟೆಂಬರ್ 2024

ಇಂದು ಬಂಧನ ಅವಧಿ ಮುಕ್ತಾಯ: ಜಾಮೀನು ಅರ್ಜಿ ಸಲ್ಲಿಸಲು ದರ್ಶನ್ ತಯಾರಿ

ಬೆಂಗಳೂರು, ಸೆ.8– ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಸೋಮವಾರ (ಸೆ.8) ಮುಕ್ತಾಯವಾಗಲಿದೆ. ದರ್ಶನ್ ಸೇರಿ ಎಲ್ಲಾ 17 ಆರೋಪಿಗಳು ವಿವಿಧ ಜೈಲಲ್ಲಿರುವ ಕಾರಣ ಎಲ್ಲರನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಕೋರ್ಟ್ ಮುಂದೆ ಹಾಜರುಪಡಿಸಲಾಗುತ್ತದೆ. ವಿಚಾರಣೆ ಬಳಿಕ ನಟ ದರ್ಶನ್ ಜಾಮೀನು ಕೋರಿ ಅರ್ಜಿ ಸಲ್ಲಿಸಲಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.



ದರ್ಶನ್ ಮಾತ್ರವಲ್ಲ ಡಿ–ಗ್ಯಾಂಗ್‌ನ ಉಳಿದ ಸದಸ್ಯರು ಜಾಮೀನು ಪಡೆಯಲು ಕಸರತ್ತು ನಡೆಸಿದ್ದಾರೆ. ಎ1 ಪವಿತ್ರಾಗೌಡ, ಎ7 ಅನುಕುಮಾರ್ ಹೈಕೋರ್ಟ್ ಮೊರೆ ಹೋಗಿದ್ದಾರೆ. ನಾಳೆ ಇಬ್ಬರ ಅರ್ಜಿಗಳು ವಿಚಾರಣೆಗೆ ಬರುವ ಸಂಭವ ಇದೆ.

ಈಗಾಗಲೇ ಪತ್ನಿ ವಿಜಯಲಕ್ಷ್ಮಿ ಹಾಗೂ ಸಹೋದರ ದಿನಕರ್ ಜೊತೆ ಜಾಮೀನು ಅರ್ಜಿ ಸಲ್ಲಿಕೆ ಮಾಡುವ ಕುರಿತು ದರ್ಶನ್ ಚರ್ಚೆ ಮಾಡಿದ್ದಾರೆ. ಆದ್ದರಿಂದ ಸೆ.9 ಅಥವಾ ಸೆ.10ರಂದು ಎಸಿಎಂಎಂ ಕೋರ್ಟ್‌ಗೆ ಜಾಮೀನು ಕೋರಿ ಅರ್ಜಿ ಸಲ್ಲಿಕೆ ಮಾಡುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

ಅನುಕುಮಾರ್ ಅರ್ಜಿಯೂ ವಿಚಾರಣೆ: ಇನ್ನೂ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎ7 ಆರೋಪಿಯಾಗಿರುವ ಅನುಕುಮಾರ್ ಅವರ ಅರ್ಜಿ ವಿಚಾರಣೆಯೂ ಸೋಮವಾರ ಹೈಕೋರ್ಟ್‌ನಲ್ಲಿ ನಡೆಯಲಿದೆ. ಸಿಟಿ ಸಿವಿಲ್ ಕೋರ್ಟ್ ನಲ್ಲಿ ಅರ್ಜಿ ವಜಾ ಬಳಿಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಸೋಮವಾರ ವಿಚಾರಣೆ ನಡೆಯಲಿದೆ. ಅನುಕುಮಾರ್ ಪರ ವಕೀಲ ರಾಮ್ ಸಿಂಗ್ ಅರ್ಜಿ ಸಲ್ಲಿಕೆ ಮಾಡಿದ್ದರು.

ಮುಡಾ ಒಂದೇ ಅಲ್ಲ, ಸಿದ್ದರಾಮಯ್ಯ ವಿರುದ್ಧ ಇನ್ನೂ ಸಾಕಷ್ಟು ಕೇಸ್‌ಗಳಿವೆ

ಬಿಜೆಪಿ ಸಂಸದ ರಮೇಶ್ ಜಿಗಜಿಣಗಿ ಹೊಸ ಬಾಂಬ್

ಬೆಂಗಳೂರು, ಸೆ.8– ಮುಡಾ ಒಂದೇ ಅಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದ್ದು ಇನ್ನೂ ಹಲವು ಕೇಸ್‌ಗಳಿವೆ ಎಂದು ಬಿಜೆಪಿ ಸಂಸದ ರಮೇಶ್ ಜಿಗಜಿಣಗಿ ಹೊಸ ಬಾಂಬ್ ಸಿಡಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯರದ್ದು ಇದೊಂದೇ ಕೇಸ್ ಅಲ್ಲ. ಇನ್ನೂ ಬಹಳ ಇವೆ. ಯಾವ ಕೇಸ್ ಎಂದು ಗೊತ್ತಿಲ್ಲ. ಅವರಿವರು ಕರೆ ಮಾಡಿ ಹೇಳುತ್ತಿದ್ದಾರೆ. ಕೇಸ್ ಆಗುವುದಂತೂ ಸತ್ಯ. ಇದೆಲ್ಲಾ ಬಿಜೆಪಿ ಪ್ಲ್ಯಾನ್ ಅಲ್ಲ. ಅವರ ಜನರೇ ಪ್ಲ್ಯಾನ್ ಹಾಕುತ್ತಾರೆಂದು ಬಾಂಬ್ ಸಿಡಿಸಿದ್ದಾರೆ.

ಮುಡಾ ಹಗರಣದಲ್ಲಿ ಸಿಎಂ ವಿರುದ್ಧ ಕಾಂಗ್ರೆಸ್ ನಾಯಕರು ಹಾಗೂ ಬಿಜೆಪಿಯವರು ಬಳಕೆ ಮಾಡಿಕೊಂಡರು ಎಂಬ ವಿಚಾರವಾಗಿ ಮಾತನಾಡಿ, ಮುಡಾದಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದು ನಿಜ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯ ಮಾಡಿದ್ದೇವೆ. ಸಿದ್ದರಾಮಯ್ಯ ಒಳ್ಳೆ ಮನುಷ್ಯ, ಆತನ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ ಎಂದರು.



ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ನಾಯಕ. ಆದರೆ, ಈ ವಿಷಯದಲ್ಲಿ ಅವರೂ ಅಧಿಕಾರಕ್ಕೆ ಬೆನ್ನು ಹತ್ತಿದ್ದಾರೆಂದು ಆರೋಪಿಸಿದರು. ಈ ವಿಚಾರದಲ್ಲಿ ನನಗೂ ಬಹಳ ಕೆಡುಕೆನಿಸುತ್ತದೆ. ಹಿಂದೆ ಫೋನ್ ಕದ್ದಾಲಿಕೆ ವಿಚಾರ ಬಂದಾಗ ರಾಮಕೃಷ್ಣ ಹೆಗಡೆ ರಾಜೀನಾಮೆ ನೀಡಿದ್ದರು. ಮುಂದಿನ 50 ವರ್ಷ ಹೆಗಡೆ ಅವರ ಹೆಸರು ಇರುತ್ತದೆ. ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದರೆ ಅವರದ್ದೂ ಹೆಸರು ಇರುತ್ತಿತ್ತು. ಆದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಕೊಡಲಿಲ್ಲ ಇವರು ಅಧಿಕಾರಕ್ಕೆ ಬೆನ್ನು ಹತ್ತಿದ್ದಾರೆ. ಯಾವುದೇ ತಪ್ಪಿಲ್ಲಾ ಎಂದು ಸಿಎಂ ಹೇಳುತ್ತಿದ್ದಾರೆ. ನಾಳೆ ಕೋರ್ಟ್ ಹೇಳುತ್ತದೆಯಲ್ಲ ಎಂದು ರಮೇಶ್ ತಿಳಿಸಿದರು. ಮುಖ್ಯಮಂತ್ರಿ ಕುರ್ಚಿಗಾಗಿ ಕಾಂಗ್ರೆಸ್ ನಡೆಯುತ್ತಿರುವ ಪೈಪೋಟಿ ಕುರಿತು ಮಾತನಾಡಿ, ಮುಖ್ಯಮಂತ್ರಿ ಸ್ಥಾನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರಿದೆ, ಆದರೆ, ಅವರನ್ನು ಮೂಲೆಗೆ ಕೂರಿಸಿದ್ದಾರೆ. ಅವರ ಹೆಸರನ್ನು ಯಾರೂ ಪ್ರಸ್ತಾಪಿಸುತ್ತಿಲ್ಲ. ಎಂ.ಬಿ.ಪಾಟೀಲ್ ಅಷ್ಟೇ ಯಾಕೆ ಎಲ್ಲರೂ ಸಿಎಂ ಆಗಬೇಕೆನ್ನುತ್ತಾರೆ. ಇದು ಅವರ ಒಗ್ಗಟ್ಟು ಹೇಗಿದೆ ಎಂದು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ಒಂದನೇ ಪುಟದಿಂದ

ನಿವೇಶನ ಬಿಡುಗಡೆ, ಖಾತೆ ನೋಂದಣಿ

ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿದರು. ಬಿಜೆಪಿಯಲ್ಲಿದ್ದ ರಾಜೀವ್, ತಮ್ಮ ಅಕ್ರಮ ಬಡಾವಣೆಗಳನ್ನು ಸಕ್ರಮ ಮಾಡಿಕೊಳ್ಳಲು ಹಾಗೂ ಯಾವುದೇ ಕ್ರಮ ಆಗದಂತೆ ಸರ್ಕಾರದ ಆಶ್ರಯ ಪಡೆಯುವ ಸಲುವಾಗಿ ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು ಎಂದು ಶ್ರೀವತ್ಸ ಹೇಳಿದರು.

ವಿವರ: ಹೆಚ್.ವಿ.ರಾಜೀವ್ ಅಧ್ಯಕ್ಷರಾಗಿರುವ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದಿಂದ ಕೇರ್ಗಳ್ಳಿ ಹಾಗೂ ನಗರ್ತಹಳ್ಳಿ ಗ್ರಾಮಗಳಲ್ಲಿ ಒಟ್ಟು 252.10 ಎಕರೆ ಭೂಮಿಯಲ್ಲಿ ವಸತಿ ಬಡಾವಣೆ ನಿರ್ಮಾಣ ಮಾಡಲಾಗಿದೆ. ಈ ಬಡಾವಣೆಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ಬಡಾವಣೆಗಳ ನಿವೇಶನಗಳ ಹಕ್ಕು ವರ್ಗಾವಣೆ ಮಾಡಬಾರದೆಂದು ಸಿವಿಲ್ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ. ಈ ಕಾರಣದಿಂದ ನಿವೇಶನಗಳ ಬಿಡುಗಡೆ ಹಾಗೂ ಖಾತೆ ನೋಂದಾವಣೆ ಮಾಡಲು ಸರ್ಕಾರದ ಆಕ್ಷೇಪಣೆಯೂ ಇತ್ತು. ಅಂದಿನ ಆಯುಕ್ತ ನಟೇಶ್ ಅವರು ಅಕ್ರಮವಾಗಿ ನಿವೇಶನ ಬಿಡುಗಡೆ ಹಾಗೂ ಖಾತೆ ನೋಂದಣಿ ಮಾಡಲು ಮುಡಾ ಅಧ್ಯಕ್ಷರಾಗಿದ್ದ ರಾಜೀವ್ ಅವರಿಗೆ ಅಸಹಕಾರ ನೀಡಿದ್ದರು ಎಂದು ಶ್ರೀವತ್ಸ ಹೇಳಿದರು.

ಈ ಮಧ್ಯೆ ರಾಜೀವ್ ಅವರು ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸೇರಿದ 5 ಕಡತಗಳನ್ನು ತಮ್ಮ ಬಳಿಗೆ ತರಿಸಿಕೊಂಡು, ಈ ನಿವೇಶನಗಳಿಗೆ ಆಯುಕ್ತರು ಅನುಮೋದನೆ ನೀಡಿದ್ದಾರೆ ಎಂದು ಉಲ್ಲೇಖಿಸಿ ಒಂದೆರಡು ದಿನದಲ್ಲೇ ನಿವೇಶನಗಳ ಬಿಡುಗಡೆ ಹಾಗೂ ಖಾತೆ ನೋಂದಣಿಯನ್ನು ಅಕ್ರಮವಾಗಿ ಮಾಡಿದ್ದಾರೆ.

ಈ ಸಂಬಂಧ ಅಂದಿನ ಮುಡಾ ಆಯುಕ್ತ ನಟೇಶ್ ಅವರು 2022ರ ಫೆಬ್ರವರಿ 16ರಂದು, 2020ರ ಜೂನ್ 30ರ ಸರ್ಕಾರಿ ಆದೇಶಕ್ಕೆ ವಿರುದ್ಧವಾಗಿ 848 ನಿವೇಶನಗಳನ್ನು ಬಿಡುಗಡೆ ಮಾಡಿಕೊಂಡು ಒಂದೇ ದಿನದಲ್ಲಿ ಖಾತೆ ಮಾಡಿಸಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಈ ಸಂಬಂಧ ಅನೇಕ ದೂರುಗಳು ಸಲ್ಲಿಕೆಯಾಗಿದ್ದು, ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಿಂದ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿರುವುದರಿಂದ ತಮ್ಮ ಬಳಿ ಇರುವ ಸಂಬಂಧಿಸಿದ ಕಡತಗಳನ್ನು ಹಿಂತಿರುಗಿಸಬೇಕೆಂದು ಅಧ್ಯಕ್ಷರಾಗಿದ್ದ ರಾಜೀವ್ ಅವರಿಗೆ ಟಿಪ್ಪಣಿ ಸಲ್ಲಿಸಿದ್ದರು. ಆನಂತರ 2022ರ ಫೆಬ್ರವರಿ 22ರಂದು ಕೂಡ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದಿಂದ ರಚಿಸಲಾಗಿರುವ ಬಡಾವಣೆಗಳಿಗೆ ಸಂಬಂಧಿಸಿದ ಕಡತಗಳನ್ನು ತಮಗೆ ಹಿಂತಿರುಗಿಸುವಂತೆ ಮತ್ತೊಂದು ಟಿಪ್ಪಣಿಯನ್ನು ಸಲ್ಲಿಸಿದ್ದರೂ ಕೂಡ ರಾಜೀವ್ ಕಡತಗಳನ್ನು ಆಯುಕ್ತರಿಗೆ ಹಿಂತಿರುಗಿಸಲೇ ಇಲ್ಲ. ಈ ಕಾರಣದಿಂದಾಗಿ ಆಯುಕ್ತರಾಗಿದ್ದ ನಟೇಶ್ ಅವರು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಿಗೆ ಪತ್ರ ಬರೆದು ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದಿಂದ ರಚಿಸಲಾಗಿರುವ ಬಡಾವಣೆಗೆ ಸಂಬಂಧಿಸಿದಂತೆ ಅಕ್ರಮವಾಗಿ ನಿವೇಶನಗಳನ್ನು ಅಧ್ಯಕ್ಷರಾದ ಹೆಚ್.ವಿ. ರಾಜೀವ್ ಬಿಡುಗಡೆ ಮಾಡಿದ್ದಾರೆ. ಅವರು, ತಮ್ಮ ಅಧ್ಯಕ್ಷ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಹೀಗಾಗಿ ಅವರ ಬಳಿ ಇರುವ ಕಡತಗಳನ್ನು ತಮಗೆ (ನಟೇಶ್) ಹಿಂತಿರುಗಿಸುವಂತೆ ಅವರಿಗೆ ಸೂಚನೆ ನೀಡಬೇಕು ಎಂದು ಕಾರ್ಯದರ್ಶಿಗಳನ್ನು ಕೋರಿದ್ದಲ್ಲದೇ, ಮುಡಾ ಅಧ್ಯಕ್ಷರು ಅಧಿಕಾರ ವ್ಯಾಪ್ತಿ ಮೀರಿ ವರ್ತಿಸುತ್ತಿರುವ ಅಂಶವನ್ನು ತಮ್ಮ (ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು) ಅಹವಾನೆಗೆ ಸಲ್ಲಿಸಲಾಗಿದೆ ಎಂದು ನಟೇಶ್ ಪತ್ರ ಬರೆದಿದ್ದರು ಎಂದು ಶಾಸಕ ಶ್ರೀವತ್ಸ ವಿವರಿಸಿದರು.

ಈ ಸಂಬಂಧ ಸರ್ಕಾರ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ 2020ರ ನಂತರ 50:50ರ ಅನುಪಾತದಡಿ ಅನಧಿಕೃತವಾಗಿ ಮಂಜೂರು ಮಾಡಿರುವ ನಿವೇಶನಗಳನ್ನು ರದ್ದುಪಡಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಹಿಂದಿನ ಮುಡಾ ಆಯುಕ್ತ ನಟೇಶ್ ಅವರನ್ನೂ ಸಹ ಅಮಾನತುಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ಯಾರಾಲಿಂಪಿಕ್ಸ್ ಅಭಿಯಾನ ಅಂತ್ಯ

ಫೈನಲ್ ರೇಸ್‌ನಿಂದ ಹೊರಬಿದ್ದರು. ಇದರೊಂದಿಗೆ ಭಾರತದ ಅಭಿಯಾನವೂ ಕೊನೆಗೊಂಡಿತು. ಅದಾಗ್ಯೂ ಈ ಬಾರಿಯ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಇತಿಹಾಸ ಸೃಷ್ಟಿಸಿದ್ದು, ಈ ಬಾರಿಯ ಪ್ಯಾರಾಲಿಂಪಿಕ್ಸ್‌ನಲ್ಲಿ ಇತಿಹಾಸ ಸೃಷ್ಟಿಸಿದ ಭಾರತ ದಾಖಲೆಯ 29 ಪದಕ ಗೆಲ್ಲುವಲ್ಲಿ ಯಶಸ್ವಿಯಾಗಿದ್ದು, ಈ ಪೈಕಿ ಏಳು ಚಿನ್ನ, ಒಂಬತ್ತು ಬೆಳ್ಳಿ ಮತ್ತು 13 ಕಂಚು ಸೇರಿವೆ. ವಾಸ್ತವವಾಗಿ ಪ್ಯಾರಾಲಿಂಪಿಕ್ಸ್ ಇತಿಹಾಸದಲ್ಲಿ ಭಾರತ ಇಷ್ಟು ಸಂಖ್ಯೆಯ ಪದಕಗಳನ್ನು ಗೆದ್ದಿದ್ದು, ಇದೇ ಮೊದಲು. ಇದಕ್ಕೂ ಮೊದಲು ಟೋಕಿಯೋ ಪ್ಯಾರಾಲಿಂಪಿಕ್‌ನಲ್ಲಿ 19 ಪದಕಗಳನ್ನು ಗೆದ್ದಿದ್ದು, ಭಾರತದ ಅತ್ಯುತ್ತಮ ಪ್ರದರ್ಶನವಾಗಿತ್ತು.

ಇಂದು ಸಿಎಂ ಅರ್ಜಿ ಮತ್ತೆ ವಿಚಾರಣೆ

ಅವರಿಗೆ ನ್ಯಾಯ ಸಿಗಲಿದೆ ಎಂಬ ವಿಶ್ವಾಸವನ್ನು ಸಚಿವ ಎಂಬಿ ಪಾಟೀಲ್ ಸ್ಪಷ್ಟಪಡಿಸಿದ್ದಾರೆ. ರಾಜ್ಯಪಾಲರ ಆದೇಶ ವಜಾಗೊಳಿಸಬೇಕು ಎಂದು ಸಿಎಂ ಸಲ್ಲಿಸಿದ್ದ ಅರ್ಜಿಯನ್ನು ಇದೇ ಸೆಪ್ಟೆಂಬರ್ 2ರಂದು ವಿಚಾರಣೆ ನಡೆಸಿದ್ದ ಕೋರ್ಟ್ 2ನೇ ಬಾರಿಗೆ ಮುಂದೂಡಿಕೆ ಮಾಡಿತ್ತು. ಗಣೇಶ ಹಬ್ಬದ ಬಳಿಕ ಸೆಪ್ಟೆಂಬರ್ 9ರಂದು ಮಧ್ಯಾಹ್ನ 2.30ಕ್ಕೆ ಹೈಕೋರ್ಟ್ ವಿಚಾರಣೆ ನಡೆಸುವುದಾಗಿ ತಿಳಿಸಿತ್ತು.

ಪರೀಕ್ಷೆಗೆ 'ವೆಬ್‌ಕಾಸ್ಟಿಂಗ್' ಕಣ್ಗಾವಲು

ಇಲಾಖೆಯ ಅಧಿಕಾರಿಗಳು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಅಂಕಗಳ ಭ್ರಮಾ ಲೋಕದಲ್ಲಿ ತೇಲಿಸಿದ್ದರು ಎಂಬ ಸತ್ಯವನ್ನು ಬಯಲು ಮಾಡಿತ್ತು. ಅಕ್ರಮಗಳನ್ನು ತಡೆಯಲು ತೆಗೆದುಕೊಂಡ ಕ್ರಮಗಳಿಂದಾಗಿ ಫಲಿತಾಂಶ 2022–23ನೇ ಸಾಲಿಗಿಂತ ಶೇಕಡ 30ರಷ್ಟು ಕುಸಿತವಾಗಿತ್ತು. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 3.97 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಇದರಿಂದ ವಿದ್ಯಾರ್ಥಿಗಳ ಮನೋಬಲ ಕುಗ್ಗುವ ಸಾಧ್ಯತೆ ಇದೆ ಎಂದು ಮನಗಂಡ ಶಿಕ್ಷಣ ಇಲಾಖೆ ಕೃಪಾಂಕ ನಿಯಮಗಳನ್ನು ಬದಲಾಯಿಸಿ, 1.69 ಲಕ್ಷ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಿತ್ತು.

ಫಲಿತಾಂಶ ಕುಸಿತಕ್ಕೆ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಪರಿಚಯಿಸಿದ್ದೇ ಕಾರಣ ಎಂದು ವ್ಯಾಪಕ ಟೀಕೆಗಳು ವ್ಯಕ್ತವಾಗಿದ್ದವು. ಕೃಪಾಂಕ ನೀಡಿದ್ದನ್ನೂ ಹಲವರು ಖಂಡಿಸಿದ್ದರು. ಹಾಗಾಗಿ, ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನಡೆಸುವ ಘಟಕ ಪರೀಕ್ಷೆಗಳನ್ನೂ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮೂಲಕವೇ ನಡೆಸುವಂತೆ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಎಲ್ಲ ಶಾಲೆಗಳು ಕಡ್ಡಾಯವಾಗಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿಕೊಳ್ಳಬೇಕು. ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಕುಳಿತು ಅಧಿಕಾರಿಗಳು ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಪ್ರಕ್ರಿಯೆ ವೀಕ್ಷಿಸಬೇಕು. ಸಿ.ಸಿ.ಟಿ.ವಿ. ಕ್ಯಾಮೆರಾ ಸೌಲಭ್ಯ ಇಲ್ಲದ ಶಾಲೆಗಳು ಲಭ್ಯವಿರುವ ಸಮೀಪದ ಶಾಲೆಗಳಿಗೆ ತೆರಳಿ ಪರೀಕ್ಷೆ ಬರೆಸಬೇಕು. ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ನಂತರ ಕಡಿಮೆ ಫಲಿತಾಂಶ ಪಡೆದ ವಿದ್ಯಾರ್ಥಿಗಳ ಜೊತೆ ಚರ್ಚಿಸಿ, ಫಲಿತಾಂಶ ವೃದ್ಧಿಗೆ ಅಗತ್ಯ ಕ್ರಮ ವಹಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಅವರು ಸೂಚಿಸಿದ್ದಾರೆ.

ಡಿಸೆಂಬರ್‌ಗೆ ಪಠ್ಯ ಬೋಧನೆ ಪೂರ್ಣ: ಎಸ್‌ಎಸ್‌ಎಲ್‌ಸಿಯ ಎಲ್ಲ ವಿಷಯಗಳ ಪಠ್ಯ ಬೋಧನೆಯನ್ನು ಈ ವರ್ಷ ಡಿಸೆಂಬರ್ ಒಳಗೆ ಪೂರ್ಣಗೊಳಿಸಲಾಗುತ್ತದೆ. ಘಟಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಪ್ರಗತಿ ವೀಕ್ಷಿಸಿ, ಕಡಿಮೆ ಫಲಿತಾಂಶ ಪಡೆದ ಮಕ್ಕಳಿಗೆ ವಿಶೇಷ ತರಗತಿ ನಡೆಸಬೇಕು. ಅಂತಹ ಮಕ್ಕಳನ್ನು ಇತರೆ ಮಕ್ಕಳ ಹಂತಕ್ಕೆ ತರಲು ಎಲ್ಲ ಶಿಕ್ಷಕರೂ ಸಮಾನವಾಗಿ ಜವಾಬ್ದಾರಿ ಹಂಚಿಕೊಳ್ಳಬೇಕು. ಬರವಣಿಗೆಯ ಗುಣಮಟ್ಟ ಹೆಚ್ಚಿಸಲು ಪ್ರತಿ ದಿನ ಎರಡು ಪುಟಗಳನ್ನು ಬರೆಸಬೇಕು. ಗಟ್ಟಿಯಾಗಿ ಓದಿಸುವ ಹವ್ಯಾಸ ರೂಢಿಸಬೇಕು. ಪ್ರತಿ 15 ದಿನಗಳಿಗೆ ಒಮ್ಮೆ ಪೋಷಕರ ಸಭೆ ನಡೆಸಿ, ಮಾಹಿತಿ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

ನಂಜುಂಡೇಶ್ವರನ ದರ್ಶನ ಪಡೆದ ಸಚಿವ ಭೈರತಿ ಸುರೇಶ್



ನಂಜನಗೂಡು, ಸೆ.8– ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ದಕ್ಷಿಣ ಕಾಶಿ ನಂಜನಗೂಡು ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯಕ್ಕೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಕುಟುಂಬ ಸಮೇತ ಭೇಟಿ ನೀಡಿ ದೇವರ ದರ್ಶನ ಪಡೆದರು.

ನಂಜನಗೂಡು ನಗರದ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆಯನ್ನು ಸಲ್ಲಿಸಿದರು. ದೇವಾಲಯದ ಸುತ್ತಲೂ ಪ್ರದಕ್ಷಣೆ ಹಾಕಿ, ನಂಜುಂಡೇಶ್ವರ, ಗಣಪತಿ, ಸುಬ್ರಮಣ್ಯ, ಚಂಡಿಕೇಶ್ವರ, ಪಾರ್ವತಮ್ಮ, ನಾರಾಯಣ ಸ್ವಾಮಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ ಪುನೀತರಾದರು. ಪ್ರತಿ ವರ್ಷವೂ ಶ್ರೀ ಚಾಮುಂಡೇಶ್ವರಿ ದೇವಾಲಯ ಮತ್ತು ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯಕ್ಕೆ ಕುಟುಂಬ ಸಮೇತ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸುವುದು ನಮ್ಮ ಕುಟುಂಬದ ವಾಡಿಕೆಯಾಗಿದೆ. ಅದರಂತೆ ಮನೆದೇವರಾದ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆದಿದ್ದೇವೆ ಎಂದು ಸಚಿವ ಭೈರತಿ ಸುರೇಶ್ ತಿಳಿಸಿದರು.

ಇದೇ ಸಂದರ್ಭದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ದೇವಾಲಯದ ಇಒ ಜಗದೀಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಆದಿವಾಸಿಗಳಿಂದ ಅರಣ್ಯ ಸಂಪತ್ತು ಉಳಿದಿದೆ

ವಿಶ್ವ ಆದಿವಾಸಿ ದಿನಾಚರಣೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯ



ಹೆಚ್.ಡಿ.ಕೋಟೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.8– ಅರಣ್ಯ ಸಂಪತ್ತು ಉಳಿದಿದೆ ಎಂದರೆ ಅದಕ್ಕೆ ಆದಿವಾಸಿಗಳೇ ಮೂಲ ಕಾರಣ ಎಂದು ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯಪಟ್ಟಿದ್ದಾರೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಕರ್ನಾಟಕ ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿದ್ದ 30 ನೇ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆದಿವಾಸಿ ಬುಡಕಟ್ಟು ಜನಾಂಗದವರಿಗೆ ನಾಗರಿಕ ಹಕ್ಕನ್ನು ನೀಡಬೇಕು ಎಂಬ ನಿಟ್ಟಿನಲ್ಲಿ ಸಾಕಷ್ಟು ಹೋರಾಟ ನಡೆಯುತ್ತಿದ್ದು, 2006ರಿಂದ ಹೋರಾಟವನ್ನು ಪ್ರಾರಂಭ ಮಾಡಿ 2014ರ ವರೆಗೆ ಮುಜಾಫರ್ ಅಸಾದಿ ವರದಿ ಜಾರಿಗೊಳ್ಳಬೇಕು ಎಂದು ಹೋರಾಟವನ್ನು ಮಾಡಿದ್ದೀರಿ ಎಂದರು.

3500 ಕುಟುಂಬಗಳಿಗೆ ಹಕ್ಕುಪತ್ರ ನೀಡಬೇಕು ಎಂಬ ನಿಟ್ಟಿನಲ್ಲಿ ಧ್ವನಿಯನ್ನು ಎತ್ತಿದ್ದೀರಿ. ಕೊಡಗು ಜಿಲ್ಲೆ ಭಾಗದಲ್ಲಿ ಇದು ಕಾರ್ಯರೂಪಕ್ಕೆ ಬಂದಿದ್ದು ಮೈಸೂರು ಜಿಲ್ಲೆಯಲ್ಲಿ ತಡವಾಗುತ್ತಿದೆ. ಆದ್ದರಿಂದ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆ ಕರೆದು, ಚರ್ಚೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಮುಖ್ಯ ಭಾಷಣಕಾರರಾಗಿ ಕಂದೇಗಾಲ ಶ್ರೀನಿವಾಸ್ ಮಾತನಾಡಿ, ಬಿರ್ಸಾ ಮುಂಡಾ ಜಮೀನ್ದಾರಿ ಪದ್ಧತಿ ವಿರುದ್ಧ ಹೋರಾಟ ಮಾಡಿದರು. ಮುಂಡಾ ಜನಾಂಗದ ನಾಯಕರಾಗಿ ಬೆಳೆಯುತ್ತಾರೆ. ಊಳಿಗಮಾನ್ಯ ಪದ್ಧತಿ ವಿರುದ್ಧ ದೊಡ್ಡ ಹೋರಾಟ ರೂಪಿಸುತ್ತಾರೆ. ಗುಲಾಮಗಿರಿ ಪದ್ಧತಿಯಿಂದ ಹೊರ ಬರಬೇಕು ಎಂದು ಜನರನ್ನು ಸಂಘಟನೆ ಮಾಡುತ್ತಾರೆ ಎಂದು ತಿಳಿಸಿದರು.

ಕೃಷಿಯನ್ನು ಸಮಾಜಕ್ಕೆ ತೋರಿಸಿದ ಸಮುದಾಯ ಆದಿವಾಸಿ ಸಮುದಾಯ. ಸ್ವತಂತ್ರ ಚಳುವಳಿಗೆ ಬಹುದೊಡ್ಡ ಕೊಡುಗೆ ನೀಡಿದ ಸಮುದಾಯ ಆದಿವಾಸಿಗಳು. ಚರಿತ್ರೆಯನ್ನು ಅಧ್ಯಯನ ಮಾಡಿದಾಗ ನಿಜವಾದ ಸಂಗತಿ ತಿಳಿಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಆದಿವಾಸಿ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಎದುರು ಪ್ರೌಢಶಾಲಾ ಆವರಣದಿಂದ ಬೆಳ್ಳಿ ರಥದಲ್ಲಿ ಬಿರ್ಸಾಮುಂಡಾ ಅವರ ಭಾವಚಿತ್ರವನ್ನು ಇರಿಸಿ ಮೆರವಣಿಗೆ ಮೂಲಕ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಅಂಬೇಡ್ಕರ್ ಭವನದವರೆಗೆ ವಿವಿಧ ಆದಿವಾಸಿ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಸಾಗಿ ವೇದಿಕೆ ಕಾರ್ಯಕ್ರಮಕ್ಕೆ ಬರಲಾಯಿತು.

ಮೆರವಣಿಗೆಯಲ್ಲಿ ಆದಿವಾಸಿ ಮಹಿಳೆಯರು ಹಾಗೂ ಯುವಕರು ಕುಣಿತ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತ ಮೊತ್ತ ಸೋಮಣ್ಣ, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ವಡ್ಡರಗುಡಿ ಚಿಕ್ಕಣ್ಣ, ಕಾಳಕಲ್ಕರ್, ಪುಟ್ಟಬಸವ, ಶೈಲೇಂದ್ರ, ಜ್ಯೋತಿ, ಸುಶೀಲಾ, ನಾಗರಾಜು, ತಹಶೀಲ್ದಾರ್ ಶ್ರೀನಿವಾಸ್, ಪೊಲೀಸ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮಹೇಶ್, ನಾಗರಾಜು, ವೆಂಕಟಸ್ವಾಮಿ, ಪಿ.ರವಿ, ಕಾವೇರ, ಶ್ರೀನಿವಾಸ್ ಕುದೇಗಾಲ, ಸಿದ್ದರಾಜು, ಅಯ್ಯಪ್ಪ, ಹಿರೇಹಳ್ಳಿ ಸೋಮೇಶ್, ಸುಬ್ರಹ್ಮಣ್ಯ, ಗಣೇಶಚಾರಿ, ಸತೀಶ್ ಗೌಡ, ಜಯರಾಜು, ಬಸವರಾಜು ಇದ್ದರು.

ಗೌರಿ ಹಬ್ಬದ ಅಂಗವಾಗಿ ಸೀರೆ ವಿತರಣೆ



ಪಟ್ಟಣದ ಮೂರನೇ ವಾರ್ಡಿನಲ್ಲಿ ಗೌರಿ ಗಣೇಶ ಹಬ್ಬದ ಪ್ರಯುಕ್ತ ಮಾಜಿ ಉಪಾಧ್ಯಕ್ಷೆ ಹಾಲಿ ಸದಸ್ಯೆ ಪ್ರೇಮ ಮರಯ್ಯ ಅವರು ಮಹಿಳೆಯರಿಗೆ ಸೀರೆ ವಿತರಿಸಿದರು.

ತಿ.ನರಸೀಪುರ, ಸೆ.8– ಸ್ಥಳೀಯವಾಗಿ ದೊರೆತ ರಾಜಕೀಯ ಅಧಿಕಾರವನ್ನು ಸಮಾಜ ಸೇವೆಗೆ ಬಳಸಿಕೊಂಡು ಸಾಮಾನ್ಯ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣ ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ ಅವರದ್ದು. ಅವರದ್ದು ಸಮಾಜಮುಖಿ ಬದುಕು ಎಂದು ಪುರಸಭೆಯ ಮಾಜಿ ಉಪಾಧ್ಯಕ್ಷೆ, ಹಾಲಿ ಸದಸ್ಯೆ ಪ್ರೇಮ ಮರಯ್ಯ ಬಣ್ಣಿಸಿದರು.

ಪಟ್ಟಣದ ಮೂರನೇ ವಾರ್ಡಿನಲ್ಲಿ ಗೌರಿ ಗಣೇಶ ಹಬ್ಬದ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಸಹ ಮಹಿಳೆಯರಿಗೆ ಸೀರೆ ವಿತರಿಸಿ ಮಾತನಾಡಿದ ಅವರು, ಜನರಿಂದ ಏನನ್ನು ಅಪೇಕ್ಷಿಸದೇ ಒಂದಲ್ಲ ಒಂದು ಸಮಾಜಮುಖಿ ಸೇವಾ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ ಎಂದರು. ಮುಂದಿನ ಬಾರಿ, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ನಮ್ಮ ಸಮಾಜದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸನ್ಮಾನಿಸಲಾಗುವುದು ಎಂದರು. ಗ್ರಾಹಂ ಮಾಜಿ ಸದಸ್ಯ ದಿವಾಕರ್. ಮತ್ತು ಆ ವಾರ್ಡಿನ ಮತದಾರರು ಮುಖಂಡರು ಮಹಿಳೆಯರು ಹಾಜರಿದ್ದರು.

ವಾಣಿಜ್ಯ ಮಳಿಗೆ ಸಮಸ್ಯೆ ನಿವಾರಿಸಿ, ಬೀದಿಗೆ ಬಿದ್ದಿರುವ ಕುಟುಂಬ ರಕ್ಷಿಸಿ

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಮನವಿ



ಪತ್ರಿಕಾಗೋಷ್ಠಿಯಲ್ಲಿ ಎ.ಹೆಚ್.ವಿಶ್ವನಾಥ್ ಮಾತನಾಡಿದರು.

ಕೆ.ಆರ್.ನಗರ, ಸೆ.8– 70ಕ್ಕೂ ಹೆಚ್ಚು ಕುಟುಂಬಗಳು ಬೀದಿಪಾಲಾಗಿದ್ದು ತಕ್ಷಣ ಪುರಸಭಾ ವಾಣಿಜ್ಯ ಮಳಿಗೆಗಳ ಸಮಸ್ಯೆಯನ್ನು ಬಗೆಹರಿಸಿ ತೊಂದರೆಯಲ್ಲಿರುವ 70ಕ್ಕೂ ಹೆಚ್ಚು ಕುಟುಂಬಗಳ ಜೊತೆ ಶಾಸಕ ಡಿ ರವಿಶಂಕರ್ ನಿಲ್ಲಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮನವಿ ಮಾಡಿದರು.

ಇಂದು ತಮ್ಮ ನಿವಾಸದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ನಾನು ಈಗಾಗಲೇ ಶಾಸಕ ಡಿ ರವಿಶಂಕರ್ ಜೊತೆ ಎರಡು ಬಾರಿ ಮಾತನಾಡಿದ್ದು ಜಿಲ್ಲಾಧಿಕಾರಿಗಳು ಮತ್ತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ತಕ್ಷಣ ವಾಣಿಜ್ಯ ಮಳಿಗೆಗಳ ಸಮಸ್ಯೆಯನ್ನು ಇತ್ಯರ್ಥ ಮಾಡುವ ಮೂಲಕ ನಮ್ಮೂರಿನ ನೊಂದ ಕುಟುಂಬಗಳ ಜೊತೆ ನಿಲ್ಲುವಂತೆ ತಿಳಿಸಿದ್ದೇನೆ ಎಂದರು.

ಇಂದು ನಾನು ಯಾವುದೇ ರಾಜಕಾರಣ ಮಾತನಾಡುವುದಿಲ್ಲ ಅಥವಾ ಯಾವುದೇ ವ್ಯಕ್ತಿಯ ಬಗ್ಗೆ ಟೀಕೆ ಮಾಡುವುದಿಲ್ಲ. ಸುಮಾರು ಎಂಟು ತಿಂಗಳುಗಳಿಂದ ವ್ಯಾಪಾರವಿಲ್ಲದೆ ಉದ್ಯೋಗವಿಲ್ಲದೆ ಬಹಳ ಕಷ್ಟದಲ್ಲಿರುವ ನನ್ನೂರಿನ ಜನರ ನೋವಿಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಿದ್ದೇನೆ. ಕೆ.ಆರ್.ನಗರದ ವಿಧಾನಸಭಾ ಕ್ಷೇತ್ರದ ಜನತೆ ಹಾಗೂ ಪಟ್ಟಣದ ನಾಗರಿಕರ ಋಣ ನಮ್ಮ ಮೇಲಿದೆ ಅದನ್ನು ತೀರಿಸುವಂತಹ ಜವಾಬ್ದಾರಿ ನಮ್ಮದಾಗಿದೆ ಎಂದರು.

ತಕ್ಷಣ ಪಟ್ಟಣದಲ್ಲಿ ಶಾಸಕ ಡಿ.ರವಿಶಂಕರ್ ಅವರ ನೇತೃತ್ವದಲ್ಲಿಯೇ ಸಭೆಯನ್ನು ಕರೆಯಲಿ ಆ ಸಭೆಗೆ ನಾನು ಸೇರಿದಂತೆ ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಕರೆದುಕೊಂಡು ಬರುತ್ತೇನೆ. ಆ ಸಭೆಯಲ್ಲಿ ಎಲ್ಲಾ ಪಕ್ಷದ ಪುರಸಭಾ ಸದಸ್ಯರು ಹಾಗೂ ಸರ್ವ ಪಕ್ಷದ ಮುಖಂಡರು ಮತ್ತು ವರ್ತಕರು ಸೇರಿದಂತೆ ಎಲ್ಲರೂ ಮುಕ್ತವಾಗಿ ಚರ್ಚೆ ಮಾಡುವ ಮೂಲಕ ನಮ್ಮ ಬೆಂಬಲವನ್ನು ನೀಡುತ್ತೇವೆ. ಆಗಲಾದರೂ ಮುಖ್ಯಮಂತ್ರಿ ಮತ್ತು ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ ಈ ಸಮಸ್ಯೆಯನ್ನು ಬಗೆಹರಿಸಲಿ ಎಂದು ಒತ್ತಾಯಿಸಿದರು.

ಶಾಸಕ ಡಿ.ರವಿಶಂಕರ್ ಪಟ್ಟಣವನ್ನು 15 ದಿನಕ್ಕೊಮ್ಮೆಯಾದರೂ ಪ್ರದಕ್ಷಿಣೆ ಮಾಡಿ ಪಟ್ಟಣದಲ್ಲಿರುವ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಲಿ. ಸುಂದರವಾದ ಕೆ.ಆರ್.ನಗರ ಪಟ್ಟಣವು ಕೃಷ್ಣರಾಜೇಂದ್ರ ವೃತ್ತದ ಪಕ್ಕದಲ್ಲಿರುವ ಪುರಸಭಾ ವಾಣಿಜ್ಯ ಮಳಿಗೆಗಳು ಮುರಿದು ಬಿದ್ದು ತಿಂಗಳು ಕಳೆದರು ಅದರ ಬಗ್ಗೆ ಚರ್ಚಿಸುವ ಕೆಲಸವನ್ನು ಮಾಡದಿರುವುದು ಅವುಗಳನ್ನು ತೆರವು ಮಾಡದಿರುವುದು ಪಟ್ಟಣದಲ್ಲಿ ಹಾದು ಹೋಗುವ ಪ್ರವಾಸಿಗರು ನಮ್ಮನ್ನು ನೋಡಿ ಆಡಿಕೊಳ್ಳುವಂತ ಕೆಲಸವಾಗಬಾರದು ಎಂದು ಸಲಹೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಪುರಸಭಾ ಸದಸ್ಯರಾದ ಕೆ.ಪಿ.ಪ್ರಭುಶಂಕರ್ ವರ್ತಕರಾದ ಫಜಲ್ ಮಹದೇವ್ ಗಂಗರಾಜ್ ಉಮೇಶ್ ಶಿವಾಜಿ ಗಣೇಶ್ ಕೆ ರಂಗೇಗೌಡ ಸೇರಿದಂತೆ ಇನ್ನಿತರರು ಹಾಜರಿದ್ದರು.

ಬಾಗಿನ ಸಮರ್ಪಿಸಿ ಗೌರಿ ಹಬ್ಬ ಆಚರಣೆ



ಸರಗೂರಲ್ಲಿ ಬಾಗಿನ ಸಮರ್ಪಿಸಿ ಗೌರಿ ಹಬ್ಬ ಆಚರಿಸಲಾಯಿತು.

ಸರಗೂರು, ಸೆ.8– ಭಾದ್ರಪದ ಮಾಸದಲ್ಲಿ ಮೊದಲ ದೊಡ್ಡ ಹಬ್ಬ ಗೌರಿ ಹಾಗೂ ಗಣೇಶ ಚೌತಿ ಹಬ್ಬ. ಗೌರಿ ಹಬ್ಬವನ್ನು ಪಟ್ಟಣದಲ್ಲಿ ಅತ್ಯಂತ ಸಡಗರ – ಸಂಭ್ರಮದಿಂದ ಆಚರಿಸಲಾಯಿತು, ಪಟ್ಟಣದ ಶ್ರೀ ಬಸವೇಶ್ವರ ದೇವಾಲಯದಲ್ಲಿ ಬೆಳಗಿನ ಶುಭ ಮುಹೂರ್ತದಲ್ಲಿ ದೇವಾಲಯವನ್ನು ಶುಚಿಗೊಳಿಸಿ ಕಪಿಲಾ ನದಿಗೆ ತೆರಳಿ ಮಂಗಳವಾದ್ಯಗಳೊಂದಿಗೆ ಗೌರಿಯನ್ನು ತಂದು ಪ್ರತಿಷ್ಠಾಪಿಸಲಾಯಿತು. ಮುತ್ತೈದೆಯರು ಕುಟುಂಬ ಸಮೇತ ಬಂದು ತಾಯಿಗೆ ಬಾಗಿನ ನೀಡಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಪೂಜೆ ನೆರವೇರಿಸಿದರು.

ಮುತ್ತೈದೆ ಭಾಗ್ಯ ಕರುಣಿಸುವಂತೆ ದೇವಿಯಲ್ಲಿ ಪ್ರಾರ್ಥಿಸಿಕೊಂಡು ಗೌರಿಗೆ ಸಮರ್ಪಿಸಿದ ಬಾಗಿನವನ್ನು ಮುತ್ತೈದೆಯರು ಬದಲಾಯಿಸಿಕೊಂಡರು, ಪುರೋಹಿತ್ ವಿರೂಪಾಕ್ಷ, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರು ಕಾರ್ಯಕಾರಿ ಮಂಡಳಿಯವರು ಮುಖಂಡರು ಹೆಣ್ಣು ಮಕ್ಕಳು ಬಾಗಿಯಾಗಿದ್ದರು.

ಗೌರಿಗುಡಿಯಲ್ಲಿ ಶ್ರೀ ಸ್ವರ್ಣಗೌರಿ ಪೂಜೆ

ಮೂಗೂರು, ಸೆ.8– ಗ್ರಾಮದಲ್ಲಿ ಶ್ರೀ ಸ್ವರ್ಣಗೌರಿ ಅಮ್ಮನವರ ಪ್ರತಿಷ್ಠಾಪನೆ ಕಾರ್ಯಕ್ರಮ (ಗೌರಿಗುಡಿ) ದೇವಾಲಯದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿ ಗೌರಿಗುಡಿ ಎಂದೇ ಪ್ರಸಿದ್ಧಿಯಾಗಿರುವ ಸುಮಾರು 90



ವರ್ಷಕ್ಕೂ ಹೆಚ್ಚು ವರ್ಷಗಳಿಂದ ಶ್ರೀ ಸ್ವರ್ಣಗೌರಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲಾಗುತ್ತಿದೆ.

ಪ್ರತಿ ವರ್ಷದಂತೆ ಈ ಬಾರಿಯೂ ಗೌರಿ ಗಣೇಶ ಹಬ್ಬದ ಅಂಗವಾಗಿ ಅಮ್ಮನವರಿಗೆ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಯೊಂದಿಗೆ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಮುತ್ತೈದೆ ಮಹಿಳೆಯರು ದೇಗುಲಕ್ಕೆ ಆಗಮಿಸಿ ಮಹಿಳೆಯರು ಪೂಜೆ ಸಲ್ಲಿಸಿ ಅಮ್ಮನವರಿಗೆ ಬಾಗಿನ ಅರ್ಪಿಸಿದರು. ಸ್ವರ್ಣಗೌರಿ ಅಮ್ಮನವರ ಭಕ್ತರ ಸಮೂಹ ಅಪಾರವಾಗಿದ್ದು 9 ದಿನಗಳವರೆವಿಗೆ ಪ್ರತಿ ದಿನ ಬೆಳಗಿನಿಂದ ರಾತ್ರಿಯವರೆಗೆ ನಿರಂತರವಾಗಿ ಪೂಜೆ ನೆರವೇರುತ್ತದೆ.

ಶ್ರೀ ಸ್ವರ್ಣಗೌರಿ ಭಕ್ತ ಮಂಡಳಿ ಹಾಗೂ ಸೇವಾರ್ಥದಾರರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಜತೆಗೆ ವಿಶೇಷ ಪೂಜೆ ಕಾರ್ಯ ನಡೆಯಲಿದೆ, ಗ್ರಾಮದ (ಶೆಟ್ಟರ) ವರ್ತಕರ ಸಮುದಾಯದ ಆರಾಧ್ಯ ದೈವ ಶ್ರೀ ಸ್ವರ್ಣಗೌರಿ ಅಮ್ಮನವರನ್ನು 9 ದಿನಗಳ ನಂತರ ವಿಸರ್ಜನೆ ಮಾಡಲಾಗುತ್ತದೆ.

14 ಅಡಿ ಎತ್ತರದ ಗಣಪತಿ ಮೂರ್ತಿ

ಕಂಪಲಾಪುರದ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ 2ನೇ ವರ್ಷದ ಪೂಜಾ ಮಹೋತ್ಸವದ ಅಂಗವಾಗಿ 1 ಲಕ್ಷ ರೂ. ಮೌಲ್ಯದ 14 ಅಡಿ ಎತ್ತರದ ಗಣಪತಿ ಮೂರ್ತಿಯನ್ನು ಟ್ರ್ಯಾಕ್ಟರ್ ಮೂಲಕ ಚಂಡೆ, ಮಂಗಳವಾದ್ಯದೊಂದಿಗೆ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಪ್ರತಿಷ್ಠಾಪಿಸಲಾಯಿತು.



ಪಿರಿಯಾಪಟ್ಟಣದಲ್ಲಿ ಗಣೇಶೋತ್ಸವ..



ಪಿರಿಯಾಪಟ್ಟಣ ತಾಲೂಕು ರಾಜನ ಬಿಳುಗುಳಿ ಗ್ರಾಮದ ತಮ್ಮಯ್ಯ ಹಾಗೂ ಪುಟ್ಟಮ್ಮನವರ ಮನೆಯ ಮುಂದೆ ಪ್ರತಿಷ್ಠಾಪಿಸಿದ ಗಣಪತಿ ಮೂರ್ತಿಗೆ ಗ್ರಾಮಸ್ಥರು ಸಂಭ್ರಮ ಸಡಗರದಿಂದ ಭಕ್ತಿ ಪೂರ್ವಕವಾಗಿ ಪೂಜೆ ಸಲ್ಲಿಸಿ ವಿನಾಯಕ ಚತುರ್ಥಿ ಆಚರಿಸಿದರು.

ಇಂದು ಹುಣಸೂರು ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಕಾಂಗ್ರೆಸ್‌ಗೆ ತೊಡಕು, ಜೆಡಿಎಸ್–ಬಿಜೆಪಿ ಮೈತ್ರಿಕೂಟಕ್ಕೆ ಅಧಿಕಾರ ಸಾಧ್ಯತೆ



ಹುಣಸೂರು, ಸೆ.8– ಹುಣಸೂರು ಪುರಸಭಾ ಅಧ್ಯಕ್ಷ ಸ್ಥಾನಕ್ಕೆ ನಾಳೆ (ಸೋಮವಾರ) ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಯಲಿದ್ದು, ತೀವ್ರ ಕುತೂಹಲ ಕೆರಳಿಸಿದೆ.

ಆಡಳಿತಾರೂಢ ಕಾಂಗ್ರೆಸ್‌ಗೆ ಈ ಬಾರಿ ಅಧ್ಯಕ್ಷ ಸ್ಥಾನ ಹಿಡಿಯುವುದು ತೊಡಕಾಗಿದ್ದು, ಜೆಡಿಎಸ್–ಬಿಜೆಪಿ ಮೈತ್ರಿಕೂಟಕ್ಕೆ ಅಧ್ಯಕ್ಷ ಗಾದಿ ಒಲಿಯುವ ಸಾಧ್ಯತೆ ಇದೆ. ಈಗಾಗಲೇ ಎಸ್‌ಟಿ ಮಹಿಳೆಗೆ ಉಪಾಧ್ಯಕ್ಷ ಸ್ಥಾನ ನಿಗದಿಯಾಗಿರುವುದರಿಂದ ಇರುವ ಏಕೈಕ ಎಸ್‌ಟಿ ಮಹಿಳೆ ಉಪಾಧ್ಯಕ್ಷೆಯಾಗಿ ಆಯ್ಕೆಯಾಗುವುದು ಖಚಿತ. ಕಳೆದ ಹದಿನೈದು ವರ್ಷಗಳಿಂದ ಕಾಂಗ್ರೆಸ್ ಭದ್ರಕೋಟೆಯಾಗಿದ್ದ ನಗರಸಭೆ ಅಡಳಿತ ಯಾರಿಗೆ ಒಲಿಯುವುದೋ ಎಂಬ ಬಗ್ಗೆ ಪಟ್ಟಣದಲ್ಲಿ ವ್ಯಾಪಕ ಚರ್ಚೆಯಾಗುತ್ತಿದೆ.

ಅಧ್ಯಕ್ಷ ಸ್ಥಾನ ಹಿಂದುಳಿದ ವರ್ಗ–ಎಗೆ ಮೀಸಲಾಗಿರುವುದರಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಪಕ್ಷ ಹಾಗೂ ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಹೊಂದಾಣಿಕೆಯಿಂದ ಭಾರಿ ಕಸರತ್ತಿನ ಚಟುವಟಿಕೆಗಳು ನಡೆಯುತ್ತಿದ್ದು ಚುನಾವಣೆಯಲ್ಲಿ ಏನು ಬೇಕಾದರೂ ಆಗಬಹುದು.

ಹುಣಸೂರು ನಗರಸಭೆಯಲ್ಲಿ ಕಾಂಗ್ರೆಸ್ ಪ್ರಾಬಲ್ಯವಿದ್ದರೂ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರೊಬ್ಬರು ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿರುವ ಹಿನ್ನೆಲೆಯಲ್ಲಿ ಸದಸ್ಯರ ಸಂಖ್ಯಾಬಲ 14 ರಿಂದ 13ಕ್ಕೆ ಇಳಿದಿದ್ದು, ಈ ಬಾರಿ ಅಧಿಕಾರ ಹಿಡಿಯಲು ಕಾಂಗ್ರೆಸ್‌ಗೆ ಕಷ್ಟಕರವಾಗಿದೆ.

ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟದಲ್ಲಿ ಜೆಡಿಎಸ್‌ನ 7, ಬಿಜೆಪಿಯ 3, ಒಟ್ಟು ಹತ್ತು ಜನ ಸದಸ್ಯರ ಜೊತೆಗೆ ಐವರು ಪಕ್ಷೇತರ ಸದಸ್ಯರ ಬೆಂಬಲ ಸೇರಿ ಒಟ್ಟು 15 ಸದಸ್ಯರ ಬಲವಿದ್ದು ಇವರೊಂದಿಗೆ ಸಂಸದರು ಮತ್ತು ಶಾಸಕರು ಸೇರಿದರೆ ಒಟ್ಟು ಸಂಖ್ಯಾಬಲ 17 ಅಗಲಿದೆ. ಈ ಕಾರಣದಿಂದ ಈ ಬಾರಿ ನಗರಸಭೆಯ ಅಧಿಕಾರವನ್ನು ಜೆಡಿಎಸ್, ಬಿಜೆಪಿ ಮೈತ್ರಿಕೂಟ ಹಿಡಿಯುವ ವಾತಾವರಣ ನಿರ್ಮಾಣವಾಗಿದೆ.

ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಸದಸ್ಯರು ಮತ್ತು ಕಾಂಗ್ರೆಸ್ ಮತ್ತು ಎಸ್‌ಡಿಪಿಐನ ಸದಸ್ಯರ ಎರಡು ತಂಡಗಳು ಈಗಾಗಲೇ ಪ್ರವಾಸದಲ್ಲಿದ್ದು ನಾಳೆ ಚುನಾವಣೆ ಸಮಯಕ್ಕೆ ನಗರಸಭೆ ಚುನಾವಣಾ ಸಭೆಗೆ ಹಾಜರಾಗಲಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದು ಹುಣಸೂರು ನಗರಸಭೆಯಲ್ಲಿ ಕಾಂಗ್ರೆಸ್ ಪ್ರಾಬಲ್ಯದಿಂದ ಮೊದಲ ಅವದಿಯಲ್ಲಿ ತಮ್ಮದೇ ಅಧಿಕಾರ ನಡೆಸಿದ್ದರೂ ಎರಡನೆ ಅವಧಿಯಲ್ಲಿ ಸದಸ್ಯರ ಬಲದ ಕೊರತೆಯಿಂದ ನಗರ ಸಭೆಯಲ್ಲಿ ಅಧಿಕಾರ ಹಿಡಿಯಲು ತುಂಬಾ ಕಷ್ಟಕರವಾದ ಪರಿಸ್ಥಿತಿ ನಿರ್ಮಾಣವಾಗಿದೆ.

ತಿ.ನರಸೀಪುರ ಅಭಿವೃದ್ಧಿಗೆ ವಿಶೇಷ ಅನುದಾನ ಕೊಡಿಸುವೆ

ಪುರಸಭಾ ಅಧ್ಯಕ್ಷ, ಉಪಾಧ್ಯಕ್ಷೆ, ಸದಸ್ಯರಿಂದ ಅಭಿನಂದನೆ ಸ್ವೀಕರಿಸಿದ ಸಚಿವ ಮಹದೇವಪ್ಪ



ತಿ.ನರಸೀಪುರ ಪುರಸಭಾ ನೂತನ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸದಸ್ಯರ ನಿಯೋಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಸಿ ಮಹದೇವಪ್ಪ ಸನ್ಮಾನಿಸಿ, ಅಭಿನಂದಿಸಿತು.

ತಿ.ನರಸೀಪುರ, ಸೆ.8– ಪುರಸಭಾ ನೂತನ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರ ನಿಯೋಗ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕ್ಷೇತ್ರದ ಶಾಸಕ ಡಾ. ಎಚ್.ಸಿ.ಮಹದೇವಪ್ಪ ಅವರನ್ನು ಬೆಂಗಳೂರಿನ ನಿವಾಸದಲ್ಲಿ ಭೇಟಿ ಮಾಡಿ ಸನ್ಮಾನಿಸಿ, ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಚಿವರು ಪಟ್ಟಣ ಸೇರಿದಂತೆ ತಾಲೂಕಿನ ಅಭಿವೃದ್ಧಿಗೆ ಶೀಘ್ರ ವಿಶೇಷ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು. ಯಾವುದೇ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿದ್ದರೂ ಮೊದಲು ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದರು. ಜನರಿಗೆ ಮೂಲ ಸೌಕರ್ಯ ಒದಗಿಸಿ ಪುರಸಭೆಯನ್ನು ಮಾದರಿ ಪುರಸಭೆಯನ್ನಾಗಿ ಮಾಡುವ ಮೂಲಕ ಎಲ್ಲರೂ ಒಗ್ಗಟ್ಟಾಗಿ ದುಡಿಯಿರಿ ಎಂದು ಹೇಳಿದರು.

ನೂತನ ಪುರಸಭಾ ಕಾರ್ಯಾಲಯದ ಕಟ್ಟಡ ಪೂರ್ಣಗೊಂಡಿದ್ದು, ಧೂಳು ಹಿಡಿಯುವ ಮೂಲಕ ನನೆಗುದಿಗೆ ಬಿದ್ದಿದೆ. ಈಗಾಗಲೇ ಸಂಪೂರ್ಣಗೊಂಡಿರುವ ಬಹುಕೋಟಿಯ 24X7 ಕುಡಿಯುವ ನೀರು ಯೋಜನೆ ಕೂಡ ಉದ್ಘಾಟನೆಯಾಗಬೇಕು. ಹೊಸ ಕಾರ್ಯಾಲಯ ಕಾರ್ಯನಿರ್ವಹಿಸುವಂತಾಗಬೇಕು ಎಂದು ಅವರುಗಳು ಸಚಿವರ ಗಮನಕ್ಕೆ ತಂದರು.

ಇದೇ ರೀತಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿದೆ. ಅದನ್ನು ಕೂಡ ಸಾರ್ವಜನಿಕರ ಬಳಕೆಗಾಗಿ ಉದ್ಘಾಟಿಸಿಲ್ಲ. ಇವರೊಂದಿಗೆ ಅಗ್ನಿಶಾಮಕದಳ ಕಟ್ಟಡವನ್ನು ಉದ್ಘಾಟಿಸಿಲ್ಲ ಎಂದರು. ಪುರಸಭಾ ಸದಸ್ಯರ ಅಹವಾಲು ಆಲಿಸಿದ ಸಚಿವರು, ನನೆಗುದಿಗೆ ಬಿದ್ದಿರುವ ಎಲ್ಲಾ ಕೆಲಸಗಳನ್ನು ಆರಂಭಿಸುವ ಭರವಸೆ ನೀಡಿದರಲ್ಲದೆ. ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಅನುದಾನವನ್ನು ನೀಡುವುದಾಗಿ ತಿಳಿಸಿದರು.

ಪುರಸಭಾ ಅಧ್ಯಕ್ಷ ವಸಂತ ಶ್ರೀಕಂಠ, ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಎನ್ ಸೋಮು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸೈಯದ್ ಅಹ್ಮದ್, ಸದಸ್ಯರಾದ ಸಿಪ್ರಕಾಶ್, ಬಾದಾಮಿ ಮಂಜು, ಎಲ್ ಮಂಜುನಾಥ್, ಮೆಡಿಕಲ್ ನಾಗರಾಜು, ಸಿದ್ದು, ಜಿಪಂ ಮಾಜಿ ಸದಸ್ಯ ಕೆ ಮಹದೇವ್, ತಾಪಂ ಮಾಜಿ ಉಪಾಧ್ಯಕ್ಷ ಬಿ ಮರಯ್ಯ, ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಸ್ವಾಮಿ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಎನ್ ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ನಾಗರಾಜು (ಚಿಕಾ), ತಾಲೂಕು ಕುರುಬರ ಸಂಘದ ನಿರ್ದೇಶಕ ಅರುಣ್ ಕುಮಾರ್, ಸುನಿಲ್ ಬೋಸ್ ಯುವ ಬ್ರಿಗೇಡ್ ಸಂಚಾಲಕ ಕುಮಾರ್ ರಾಮೇಗೌಡ, ಸ್ವಾಮಿ, ನಿಂಗರಾಜು, ಮೂಗೂರು ಹರೀಶ್, ಬೆಂಡ್ಡಕ್ಕಿ ಮಹೇಶ್, ಸಿದ್ದರಾಜು, ಮತ್ತಿತರಿದ್ದಾರೆ.

ನಿವೃತ್ತ ನೌಕರರಿಗೆ ಸನ್ಮಾನ...



ಬನ್ನೂರಿನಲ್ಲಿ ಪರಿಶಿಷ್ಟ ಜಾತಿ ನೌಕರರ ಬಳಗದ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭದಲ್ಲಿ ನಿವೃತ್ತಿ ಹೊಂದಿದ ಸಮಾಜದ ನೌಕರರನ್ನು ಆಯುಷ್ಮಾನ್ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಗೌರವಿಸಿ, ಸನ್ಮಾನಿಸಿದರು. ಬೋಧಿದತ್ತ ಬಂತೇಜಿ, ಬಿ.ಜಿ.ದಯಾನಂದಮೂರ್ತಿ, ಐಓಬಿ ಬಿ.ಡಿ ಶಿವಕುಮಾರ್, ರಂಗರಾಜು, ಡಾ.ವಿಠ್ಠಲ್ ವಗ್ಗನ್, ಪುರುಷೋತ್ತಮ್, ಡಿ.ಪದ್ಮನಾಭ್, ಡಾ.ಬಿ.ಕೆ.ಜ್ಞಾನಪ್ರಕಾಶ್, ಲೋಕಾಂಬಿಕ, ಶಿವಣ್ಣ, ಬಿ.ಡಿ.ಜಯಮುತ್ತು, ರಂಗಸ್ವಾಮಿ, ಡಾ.ಲೋಕೇಶ್, ಡಾ.ನಿಂಗರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಣೇಶ ಚತುರ್ಥಿಯಂದು ಗಜಪಡೆಗೆ ಸಾಂಪ್ರದಾಯಿಕ ಪೂಜೆ




ಗಣೇಶ ಹಬ್ಬದ ಅಂಗವಾಗಿ ದಸರಾ ಗಜಪಡೆಗೆ ಅರಮನೆ ಆವರಣದಲ್ಲಿ ಪೂಜೆ ಸಲ್ಲಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಮುಖ್ಯಮಂತ್ರಿ ಚಿನ್ನದ ಪದಕ ವಿಜೇತರಾದ ಅಂಬಾರಿ ಆನೆ ಅಭಿಮನ್ಯು ಮಾವುತ ವಸಂತ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಸೆ.8(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯ 14 ಆನೆಗಳಿಗೆ ಗಣಪತಿ ಹಬ್ಬದ ಅಂಗವಾಗಿ ಶನಿವಾರ ಅರಮನೆ ಆವರಣದಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಮೋದಕ ಅರ್ಪಿಸಲಾಯಿತು.

ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಎರಡು ತಂಡಗಳಲ್ಲಿ ಆಗಮಿಸಿ, ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ 14 ಆನೆಗಳಿಗೆ ಸಂಪ್ರದಾಯದಂತೆ ಗಣೇಶ ಹಬ್ಬದ ಅಂಗವಾಗಿ ಪೂಜೆ ಸಲ್ಲಿಸಲಾಯಿತು. ಮಳೆಯ ನಡುವೆಯೂ ಎಲ್ಲಾ ಆನೆಗಳಿಗೆ ಶಾಸ್ತ್ರೋಕ್ತವಾಗಿ, ಮಂತ್ರ ಪಠಣದೊಂ ದಿಗೆ ಪೂಜೆ ನೆರವೇರಿಸಲಾಯಿತು. ಅರ್ಚಕ ಎಸ್.ವಿ. ಪ್ರಹ್ಲಾದರಾವ್ ನೇತೃತ್ವದಲ್ಲಿ ಆನೆಗಳ ಪಾದ ತೊಳೆದು ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ, ಹೂವು, ಗರಿಕೆಯಿಟ್ಟು ಗಣಪತಿ ಪೂಜೆ ನೆರವೇರಿಸಿದರು. ಬಳಿಕ ಎಲ್ಲಾ ಆನೆಗಳಿಗೂ ಪಂಚಫಲ, ಮೋದಕ, ಸಜಪಾ, ಕಜ್ಜಾಯ, ಕೋಡುಬಳೆ, ಚಕ್ಕಲಿ ಸೇರಿದಂತೆ ಇನ್ನಿತರ ತಿನಿಸನ್ನು ನೀಡಲಾಯಿತು. ಪೂಜೆ ಮುಗಿದ ಬಳಿಕ ಎಲ್ಲಾ ಅಧಿಕಾರಿಗಳು ಗಜಪಡೆಗೆ ಪುಷ್ಪಾರ್ಚನೆ ನೆರವೇರಿಸಿದರು. ನಂತರ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಬೂದುಕುಂಬಳಕಾಯಿಯಿಂದ ಆನೆಗಳಿಗೆ ಇಳಿ ತೆಗೆದು ಒಡೆದು ಪೂಜೆಯನ್ನು ಪೂರ್ಣಗೊಳಿಸಿದರು.

ಸಾಕ್ಷಿಯಾದ ಪ್ರವಾಸಿಗರು: ಅರಮನೆ ಆವರಣದಲ್ಲಿ ಗಣೇಶ ಹಬ್ಬದ ಅಂಗವಾಗಿ ದಸರಾ ಗಜಪಡೆಗೆ ಆಯೋಜಿಸಿದ್ದ ಪೂಜಾ ಕಾರ್ಯಕ್ರಮವನ್ನು ನೂರಾರು ಮಂದಿ ಕಣ್ತುಂಬಿಕೊಂಡರು. ರಜೆ ಹಿನ್ನೆಲೆಯಲ್ಲಿ ಅರಮನೆ ವೀಕ್ಷಣೆಗೆ ವಿವಿಧೆಡೆಯಿಂದ ಆಗಮಿಸಿದ್ದ ಪ್ರವಾಸಿಗರು ಗಜಪಡೆಗೆ ನೆರವೇರುತ್ತಿದ್ದ ಪೂಜೆಯನ್ನು ಕಂಡು ಸಂಭ್ರಮಿಸಿದರು.

ಮಳೆರಾಯನ ಆಟ: ಶನಿವಾರ ಮಧ್ಯಾಹ್ನ 12 ಗಂಟೆಗೆ ಗಜಪೂಜೆ ನೆರವೇರಿಸಲು ಉದ್ದೇಶಿಸಲಾಗಿತ್ತು. ಅದಕ್ಕಾಗಿ ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ಪೂಜಾ ಸಾಮಗ್ರಿಗಳನ್ನು ಅರಮನೆಗೆ ತಂದಿದ್ದರು. ಆದರೆ, ಮಧ್ಯಾಹ್ನ 12 ಗಂಟೆಗೆ ಮಳೆ ಸುರಿಯಲಾರಂಭಿಸಿತು. ಇದರಿಂದ ಪೂಜಾ ಕಾರ್ಯಕ್ಕೆ ಅಡಚಣೆಯುಂಟಾಯಿತು. ಕೆಲ ಸಮಯದ ನಂತರ ಮಳೆ ನಿಂತಿತು. ಇದರಿಂದ ಎಲ್ಲಾ ಆನೆಗಳನ್ನು ತ್ರಿನೇಶ್ವರ ದೇವಾಲಯದ ಪಕ್ಕದ ಮೈದಾನಕ್ಕೆ ಪೂಜೆಗೆಂದು ತಂದು ನಿಲ್ಲಿಸಲಾಯಿತು. ಮತ್ತೆ ಮಳೆ ಜೋರಾಗಿ ಬರಲಾರಂಭಿಸಿದ್ದರಿಂದ ಆನೆಗಳನ್ನು ಬಿಡಾರಕ್ಕೆ ಕರೆದೊಯ್ಯಲಾಯಿತು. ಬಿಡಾರದ ಶೆಲ್ಟರ್‌ನಲ್ಲೇ ಪೂಜೆ ಸಲ್ಲಿಸಲು ನಿರ್ಧರಿಸಲಾಯಿತು. ಇದಕ್ಕಾಗಿ ಆನೆಗಳಿಗೆ ಪಾದ ತೊಳೆದು ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ ಸಿದ್ಧತೆ ಮಾಡಿಕೊಳ್ಳಲಾಯಿತು. ಈ ವೇಳೆ ಮಳೆ ನಿಂತ ಪರಿಣಾಮ ಮತ್ತೆ ಆನೆಗಳನ್ನು ತ್ರಿನೇಶ್ವರ ದೇವಾಲಯದ ಪಕ್ಕದ ಮೈದಾನಕ್ಕೆ ಕರೆತಂದು ಪೂಜೆ ಸಲ್ಲಿಸಲಾಯಿತು. ನೂರಾರು ಮಂದಿ ಪೂಜೆಯನ್ನು ಕಣ್ತುಂಬಿಕೊಂಡು ಫೋಟೋ, ವಿಡಿಯೋ ತೆಗೆದುಕೊಂಡು ಸಂಭ್ರಮಿಸಿದರು.

ಅಧಿಕಾರಿಗಳಿಂದಲೇ ಪೂಜೆ: ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್ ಡಾ.ಕೆ.ಎನ್.ಬಸವರಾಜ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಎಸಿಎಫ್ ರವೀಂದ್ರ, ಆರ್‌ಎಫ್‌ಓ ಸಂತೋಷ್ ಹೂಗಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾವುತರಿಗೆ ಉಪಾಹಾರ: ಗಜಪಡೆಗೆ ಪೂಜೆ ನೆರವೇರಿಸಿದ ಬಳಿಕ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಸಮೀಪ ಎಲ್ಲಾ ಆನೆಗಳ ಮಾವುತ, ಕಾವಾಡಿ ಹಾಗೂ ಸಹಾಯಕರಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಹಿರಿಯ ಅಧಿಕಾರಿಗಳು ಉಪಾಹಾರ ಸೇವಿಸಿದರು.

ಮಾವುತ ವಸಂತ್‌ಗೆ ಸನ್ಮಾನ

ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾದ ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ಮಾವುತ ವಸಂತ್ ಅವರನ್ನು ಸನ್ಮಾನಿಸಲಾಯಿತು. ಆನೆಗಳಿಗೆ ಪೂಜೆ ಸಲ್ಲಿಸಿದ ಬಳಿಕ ಮಾವುತ ವಸಂತ್ ಅವರಿಗೆ ಸಿಎಫ್ ಡಾ.ಮಾಲತಿ ಪ್ರಿಯಾ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಸೇರಿದಂತೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸನ್ಮಾನಿಸಿ ಶುಭ ಕೋರಿದರು.

ಗಜಪಡೆಯ ಎಲ್ಲ ಆನೆಗಳೂ ಆರೋಗ್ಯದಿಂದಿವೆ

ಸಿಎಫ್ ಮಾಲತಿ ಪ್ರಿಯಾ ಹೇಳಿಕೆ

ಮೈಸೂರು,ಸೆ.8(ಎಂಟಿವೈ)- ದಸರಾ ಮಹೋತ್ಸವದ ಗಜಪಡೆಯ ಎಲ್ಲಾ ಆನೆಗಳು ಆರೋಗ್ಯದಿಂದ ಕೂಡಿದ್ದು, ಜಂಬೂಸವಾರಿಗೆ ಸಜ್ಜಾಗುತ್ತಿವೆ ಎಂದು ಮೈಸೂರು ವಲಯದ ಸಿಎಫ್ ಡಾ.ಮಾಲತಿಪ್ರಿಯಾ ಹೇಳಿದರು.

ಮೈಸೂರು ಅರಮನೆ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗಣೇಶ ಹಬ್ಬದ ಅಂಗವಾಗಿ ಸಂಪ್ರದಾಯದಂತೆ ಎಲ್ಲಾ ಆನೆಗಳಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ಎರಡು ತಂಡಗಳಲ್ಲಿ ಆಗಮಿಸಿರುವ 14 ಆನೆಗಳು ಉತ್ತಮವಾಗಿವೆ. ಕಳೆದ ಸಾಲಿನಲ್ಲಿ ಜಂಬೂಸವಾರಿಯಲ್ಲಿ ನಿಶಾನೆ ಆನೆಯಾಗಿ ಪಾಲ್ಗೊಂಡಿದ್ದ ಅರ್ಜುನ ಆನೆ ಈ ಬಾರಿ ಇಲ್ಲದ ಕಾರಣ, ಯಾವ ಆನೆಯನ್ನು ನಿಶಾನೆ ಆನೆಯಾಗಿ ಕಳುಹಿಸಬೇಕು ಎಂದು ಶೀಘ್ರದಲ್ಲೇ ನಿರ್ಧರಿಸಲಾಗುತ್ತದೆ. ಅಲ್ಲದೆ ಈ ಬಾರಿ ಅಂಬಾರಿ ಆನೆಗೆ ಪರ್ಯಾಯವಾಗಿ ಯಾವ ಆನೆಗಳಿಗೆ ತರಬೇತಿ ನೀಡಬೇಕು ಎಂದು ನಿರ್ಧರಿಸಲಾಗುತ್ತದೆ. ಕಳೆದ ವರ್ಷ ಮಹೇಂದ್ರ, ಧನಂಜಯ ಆನೆಗಳಿಗೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗಿತ್ತು. ಈ ಬಾರಿಯೂ ಮಹೇಂದ್ರ, ಧನಂಜಯ ಆನೆಗಳಿಗೆ ಮರದ ಅಂಬಾರಿ ಕಟ್ಟಿ ತರಬೇತಿ ನೀಡಲಾಗುತ್ತದೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸ್ತ್ರೀ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಗ್ರೇಟೆಸ್ಟ್ ಆಫ್ ಆಲ್ ಟೈಮ್ (ತ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮಾ (ಕ)	4 ಪ್ರದರ್ಶನಗಳು
ಪ್ರಭಾ	
ಅನ್ನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ (DRC CINEMAS)
ದೂ : 4240422/4241800

ಸ್ಕ್ರೀನ್ 1	ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್ (INOX LIVE THE MOVIE)
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ (MVC)
ದೂ : 0821-2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್ (PVR CINEMAS)
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಕ್ಕಳನ್ನು ಸಮಾಜದ ಆಸ್ತಿಯನ್ನಾಗಿ ಮಾಡುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು

ಮೈಸೂರು, ಸೆ.8- ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳಸಿ ಸಮಾಜದ ಆಸ್ತಿಯನ್ನಾಗಿ ಮಾಡುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ವಿ.ವಿಜಯ್ ಕುಮಾರ್ ನಾಗನಾಳ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಳಸ್ತವಾಡಿಯ ಸಂಕಲ್ಪ ಸೌಧ ಸಭಾಂಗಣದಲ್ಲಿ ಜ್ಞಾನದೀಪ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆಧುನಿಕ ಶಿಕ್ಷಣ ಸಂಶೋಧನೆಗಳಿಂದಾಗಿ ಶಿಕ್ಷಣವು ಪ್ರಯೋಗ ಶಾಲೆಯಾಗಿ ಮಾರ್ಪಟ್ಟಿರುವುದು ವಿಪರ್ಯಾಸ. ಇಂದಿನ ಶಿಕ್ಷಣದಲ್ಲಿ ಹಣ ಗಳಿಕೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿರುವುದರಿಂದ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿದ್ದು, ಜನ್ಮ ಕೊಟ್ಟ ತಂದೆ-ತಾಯಿ ಕೂಡ ಅವಗಣನೆಗೆ ಒಳಗಾಗುತ್ತಿದ್ದಾರೆ. ಈ ಬೆಳವಣಿಗೆ ಮನುಕುಲಕ್ಕೆ ಅಪಾಯಕಾರಿ, ಮುಂದಿನ ಭವ್ಯ ಪ್ರಜೆಗಳಾಗಿ ಬಾಳಬೇಕಾಗಿರುವ ಇಂದಿನ ಮಕ್ಕಳಿಗೆ ತಿಳಿಸಿಕೊಡುವ ಜವಬ್ದಾರಿ ಶಿಕ್ಷಕರು ಮತ್ತು ಪೋಷಕರ ಕರ್ತವ್ಯವಾಗಿದೆ. ಶಿಕ್ಷಣದ ಜೊತೆಗೆ ನಾಡು-ನುಡಿ, ಸಂಸ್ಕೃತಿ-ಸಂಸ್ಕಾರ, ಜೀವನದ ಮೌಲ್ಯಗಳು, ಮಾನವೀಯತೆಯ ವಿಕಸನದ ಬಗ್ಗೆ ತಿಳುವಳಿಕೆಯನ್ನು ನೀಡಬೇಕು ಎಂದರು.

ಕೇಂದ್ರ ಕಚೇರಿಯ ಸಮುದಾಯ ಅಭಿವೃದ್ಧಿ ವಿಭಾಗದ ಯೋಜನಾಧಿಕಾರಿ ಶೇಖರ್, ಶಿಕ್ಷಕ ಎಂದರೆ ದೇವರು ಕೊಟ್ಟ ಅಮೂಲ್ಯ ಕೊಡುಗೆ. ದೇವರು ಇಡೀ ಬ್ರಹ್ಮಾಂಡ ಸೃಷ್ಟಿಕರ್ತನಾಗಿರುತ್ತಾನೆ ಆದರೆ ಶಿಕ್ಷಕನನ್ನು ಉತ್ತಮ ರಾಷ್ಟ್ರದ ಸೃಷ್ಟಿಕರ್ತ ಎಂದು ಪರಿಗಣಿಸಲಾಗುತ್ತದೆ. ತಮ್ಮ ಬೋಧನೆಯ ಮಾಂತ್ರಿಕತೆಯ ಮೂಲಕ ಸಾಮಾನ್ಯ ಜನರ ಜೀವನ ಶೈಲಿ ಮತ್ತು ಮನಸ್ಸಿನ ಮಟ್ಟವನ್ನು ಹೆಚ್ಚಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಶಿಕ್ಷಕ ಸಮಾಜದಲ್ಲಿದ್ದಾರೆ. ಪಾಲಕರು ತಮ್ಮ ಮಕ್ಕಳಿಗಾಗಿ ಶಿಕ್ಷಕರಿಂದ ಉತ್ತಮ ಶಿಕ್ಷಣವನ್ನು ನಿರೀಕ್ಷಿಸುತ್ತಾರೆ ಎಂದರು.



ಮೈಸೂರಿನ ಕೊಡವ ಸಮಾಜದಲ್ಲಿ ಕೈಲ್ ಪೊಳ್ದ್ ಸಮ್ಮಿಲನ



ಮೈಸೂರಿನ ವಿಜಯನಗರ 1 ನೇ ಹಂತದಲ್ಲಿರುವ ಕೊಡವ ಸಮಾಜದಲ್ಲಿ ಭಾನುವಾರ ವಾರ್ಷಿಕ ಕೈಲ್ ಪೊಳ್ದ್ ಸಮ್ಮಿಲನ ನಡೆಯಿತು. ಈ ವೇಳೆ ನಡೆದ ಆಯುಧ ಪೂಜಾ ಕಾರ್ಯದಲ್ಲಿ (ಎಡದಿಂದ) ಕಾವೇರಿ ಕೊಡವ ಮಹಿಳಾ ಸಂಘದ ಅಧ್ಯಕ್ಷೆ ಲವ್ಲಿ ಅಪ್ಪಯ್ಯ, ಕೊಡವ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರಾದ ಸುಮಿ ಗೋಪಾಲ್, ಶೈಲ ದೇವಯ್ಯ ಮುಂಜಾದಿರ, ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟೀರ ಡಯಾನಾ ಪೂವಯ್ಯ, ಕಾರ್ಯಕಾರಿ ಸಮಿತಿ ಸದಸ್ಯರಾದ ಸೋಮಯ್ಯ ಅಚ್ಚಾಂಡಿರ, ನೆರವಂಡ ಸುರೇಶ್, ಸೋಮಯ್ಯ ಅಮ್ಮಂಡ, ಗೌರವ ಕಾರ್ಯದರ್ಶಿ ಕೇಟೋಳಿರ ಎ.ಬೆಳ್ಳಿಯಪ್ಪ, ಇಂಧನ ಇಲಾಖೆಯ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ತೀತಿರ ಎನ್.ಅಪ್ಪಚ್ಚು, ಕೊಡವ ಸಮಾಜದ ಅಧ್ಯಕ್ಷ ಪೊಂಜಾಂಡ ಎ.ಗಣಪತಿ, ಕೊಡವ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯ ವಿಶು ಚೆರಿಯಪ್ಪಂಡ, ನಂದಕುಮಾರ್ ಕಾಡಿರ, ಗೌರವ ಖಜಾಂಚಿ ಇಟ್ಟೀರ ಜಿ.ಕಾಶಿಯಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು. ಕೈಲ್ ಪೊಳ್ದ್ ನಮ್ಮೆ ಅಂಗವಾಗಿ ಪೂಜೆ, ಕ್ರೀಡೆ ಮತ್ತು ಕ್ರೀಡಾಕೂಟ ನಡೆಯಿತು. ಈ ವೇಳೆ ಗಣ್ಯರನ್ನು ಸನ್ಮಾನಿಸಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೂಡ ವಿತರಣೆ ಮಾಡಲಾಯಿತು.

ಕಳವು ಚಿನ್ನಾಭರಣ ಮಾರಾಟಕ್ಕೆ ಸಹಕರಿಸಿದ ಮುಖ್ಯಪೇದೆ ಅಮಾನತು

ಮೈಸೂರು, ಸೆ.8- ಕಳವು ಮಾಡಿದ ಚಿನ್ನಾಭರಣಗಳನ್ನು ಮಾರಾಟ ಮಾಡಲು ಖದೀಮರಿಗೆ ಸಹಕರಿಸಿದ ಆರೋಪದಡಿ ಮೈಸೂರಿನ ಮುಖ್ಯಪೇದೆಯೊಬ್ಬರನ್ನು ಅಮಾನತು ಮಾಡಲಾಗಿದೆ.

ಇಲ್ಲಿನ ಅಶೋಕಪುರಂ ಪೊಲೀಸ್ ಠಾಣೆ ಮುಖ್ಯಪೇದೆ ರಾಜು ಅಮಾನತುಪಡಿಸಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ. ಕಳ್ಳರಿಗೆ ರಾಜು ಸಹಕರಿಸಿದ ಬಗ್ಗೆ ತನಿಖೆ ಮುಂದುವರೆಸಲಾಗಿದೆ.

ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕಳುವು ಪ್ರಕರಣಕ್ಕೆ ಸಂಬಂಧಿಸಿದಂತೆ ಮೊನ್ನೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿತ್ತು. ಅವರನ್ನು ವಿಚಾರಣೆ ನಡೆಸಿದ ವೇಳೆ ದೇವರಾಜ, ಶ್ರೀರಂಗಪಟ್ಟಣ, ವಿದ್ಯಾರಣ್ಯಪುರಂ ಇನ್ನಿತರ ಪೊಲೀಸ್ ಠಾಣಾ ವ್ಯಾಪ್ತಿಯ ಕಳುವು ಪ್ರಕರಣಗಳು ಪತ್ತೆಯಾಗಿದ್ದವು. ಕಳುವು ಮಾಡಿದ್ದ ಮಾಲುಗಳನ್ನ ವಶಪಡಿಸಿಕೊಳ್ಳಲು ವಿಚಾರಣೆ ನಡೆಸಿದಾಗ ಆರೋಪಿಗಳ ಜೊತೆ ಅಶೋಕಪುರಂ ಠಾಣೆಯ ಮುಖ್ಯಪೇದೆ ರಾಜು ನಂಟಿರುವುದು ತಿಳಿಯಿತು. ಈ ಬಗ್ಗೆ ವಿಚಾರಣೆ ಮುಂದುವರೆಸಿದಾಗ ಕಳುವು ಮಾಡಿದ್ದ ವಸ್ತುಗಳನ್ನು ಮಾರಾಟ ಮಾಡಲು ರಾಜು ಸಹಕರಿಸಿದ್ದ ಮಾಹಿತಿ ಲಭ್ಯವಾಯಿತು. ಈ ಹಿನ್ನೆಲೆಯಲ್ಲಿ ರಾಜು ಅಮಾನತುಪಡಿಸಿ, ವಿಚಾರಣೆ ಗೊಳಪಡಿಸಲಾಗಿದೆ.

ಆಯುಷ್ 4ಯು 2ನೇ ಸಂಚಿಕೆ ಬಿಡುಗಡೆ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ದಿನೇಶ್ ಗುಂಡೂರಾವ್ ಅವರು 'ಆಯುಷ್‌4ಯು' ಪುಸ್ತಕದ 2ನೇ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಮೈಸೂರು, ಸೆ.8(ಜಿಎ)-ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಆಯುಷ್ ಇಲಾಖೆ ಸಹಯೋಗದೊಂದಿಗೆ ಟ್ರಾನ್ಸ್ ಡಿಸಿಪ್ಲಿನರಿ ಯುನಿವರ್ಸಿಟಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ದಿನೇಶ್ ಗುಂಡೂರಾವ್ ಅವರು 'ಆಯುಷ್‌4ಯು' ಪುಸ್ತಕದ 2ನೇ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು, ಆಯುರ್ವೇದ ಜನರಲ್ಲಿ ಜನಪ್ರಿಯವಾಗಿದೆ ಹಾಗೂ ಜನರು ಬಹಳ ಉತ್ಸಾಹದಿಂದ ಆಯುರ್ವೇದ ಔಷಧಿಗಳನ್ನು ಬಳಸುತ್ತಿದ್ದಾರೆ. ಆಯುರ್ವೇದ ವೈದ್ಯಕೀಯ ಪದ್ಧತಿಯು 5,000 ವರ್ಷಗಳ ಹಳೆಯ ಪದ್ಧತಿಯಾಗಿದ್ದು ಈ ಪದ್ಧತಿಯ ಬಗ್ಗೆ ಜನರಲ್ಲಿ ವಿಶ್ವಾಸವಿದೆ. ಈ ವಿಶ್ವಾಸವನ್ನು ಇನ್ನೂ ಬೆಳೆಸುವ ನಿಟ್ಟಿನಲ್ಲಿ ಸಂಶೋಧನೆಗಳು ಅಗತ್ಯ ಎಂದು ತಿಳಿಸಿದರು.

ಆಯುರ್ವೇದವನ್ನು ಅಂತರರಾಷ್ಟ್ರೀಕರಣ ಗೊಳಿಸಬೇಕಾದಲ್ಲಿ ಆಯುರ್ವೇದವನ್ನು ವೈಜ್ಞಾನಿಕ ತಳಹದಿಯಲ್ಲಿ ಆಯುರ್ವೇದವನ್ನು ಶಾಸ್ತ್ರೀಯ ಆಧಾರದ ಮೇಲೆ ಬೆಳೆಸಬೇಕಾದಲ್ಲಿ, ಆಯುರ್ವೇದದಲ್ಲಿ ಈಗ ಇರುವ ಜ್ಞಾನವನ್ನು ಸಂಶೋಧನೆಗೆ ಒಳಪಡುವುದು ಅತ್ಯಂತ ಅಗತ್ಯ ಮತ್ತು ಈ ರೀತಿ ನಡೆದ ಸಂಶೋಧನೆಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ಲೇಷಿಸಿ ಅದರ ಬಗ್ಗೆ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ, ಅಂತರರಾಷ್ಟ್ರೀಯ ವೈಜ್ಞಾನಿಕ ಲೇಖನಗಳಲ್ಲಿಯೂ ಕೂಡ ಬೇಕಾಗಿರುವುದು ಅವಶ್ಯವೆಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಆಯುಷ್ ಇಲಾಖೆಯ ಆಯುಕ್ತ ಶ್ರೀನಿವಾಸಲು, ಟಿಡಿಯುನ ಉಪಕುಲಪತಿ ದರ್ಶನ್ ಶಂಕರ್ ಭಾಗವಹಿಸಿದ್ದರು.

ಸಮಾನತೆ, ಸಮಾನ ಅವಕಾಶಗಳು ಸಂವಿಧಾನದ ಆಶಯಗಳು

ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರತಿಪಾದನೆ



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ನಡೆದ ಶರಣ ಶ್ರೀ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ನುಲಿಯ ಚಂದಯ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಮೈಸೂರು, ಸೆ.8(ಜಿಎ)-ಸಮಾನತೆ ಹಾಗೂ ಸಮಾನ ಅವಕಾಶಗಳು ಸಂವಿಧಾನದ ಆಶಯವಾಗಿದ್ದು, ಅದನ್ನು ಸಾಕಾರಗೊಳಿಸುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸಿ, ತುಳಿತಕ್ಕೊಳಗಾದ ಸಮುದಾಯಗಳನ್ನು ಮೇಲೆತ್ತುವುದೇ ನಮ್ಮ ಸರ್ಕಾರದ ಪ್ರಮುಖ ಆಶಯವಾಗಿದೆ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ಕಲಾಮಂದಿರದಲ್ಲಿ ಆಯೋಜಿಸಿದ್ದ ಶರಣ ಶ್ರೀ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ನುಲಿಯ ಚಂದಯ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು ಶೋಷಿತ ಸಮುದಾಯದ ಏಳಿಗೆಗೆ ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ನಮ್ಮ ಸರ್ಕಾರದಿಂದ ಒದಗಿಸಲಾಗುವುದು. ಸಾಮಾಜಿಕ ಮತ್ತು ಆರ್ಥಿಕ ಸಬಲತೆಗಾಗಿ ಸರ್ಕಾರವು ಸಮುದಾಯದ ಪರ ಸದಾ ಇರಲಿದೆ ಎಂದು ಭರವಸೆ ನೀಡಿದರು.

ಈ ದೇಶದ ಮೂಲನಿವಾಸಿಗಳು ದಲಿತರು. ಈ ಸಮುದಾಯದ ಆರ್ಥಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಅಭಿವೃದ್ಧಿಗೆ ಸಂವಿಧಾನವಿದೆ ಇದರೊಂದಿಗೆ ಅನುಭವ ಮಂಟಪದ ವಿಚಾರದ ಅಡಿಯಲ್ಲಿ ಪ್ರಜಾಪ್ರಭುತ್ವ ಗಟ್ಟಿಗೊಳಿಸಲು ನಾವೆಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕುಂದೂರು ಮಠದ ಪೀಠಾಧಿಪತಿ ಶ್ರೀ ಶರತ್ ಚಂದ್ರ ಸ್ವಾಮೀಜಿ, ಸಾಲೂರು ಮಠದ ಪೀಠಾಧಿಪತಿ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಹರೀಶ್ ಗೌಡ, ಮಾಜಿ ಶಾಸಕ ಜಿ.ಚಂದ್ರಣ್ಣ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಎಕೆಎಂಎಸ್ ಜಂಟಿ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ ರಾಜ್ಯ ಉಪಾಧ್ಯಕ್ಷೆ ಭೀಮಪುತ್ರಿ ನಾಗಮ್ಮ, ಕೃಷ್ಣದೇವರಾಯ ವಿ.ವಿ. ಕುಲಪತಿ ಎನ್.ಮುನಿರಾಜು, ನಿವೃತ್ತ ಜಿಲ್ಲಾಧಿಕಾರಿ ಎಸ್.ಟಿ.ಅಂಜನ್ ಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಪತ್ರಕರ್ತ ಮೋಹನ್ ಕಾಯಕ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಸಂಪೂರ್ಣ ಸಹಕಾರ ನೀಡಲಾಗುವುದು: ಹೆಚ್‌ಸಿಎಂ

ಪರಿಶಿಷ್ಟ ಜಾತಿ ಕೊರಮ, ಕೊರಚ(ಕುಳುವ) ಜನಾಂಗದ ಅಭಿವೃದ್ಧಿಗೆ ಬದ್ಧನಾಗಿದ್ದು, ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು. ಮೈಸೂರಿನ ಬೋಗಾದಿ 2ನೇ ಹಂತದ ಬ್ಯಾಂಕ್ ನೌಕರರ ಬಡಾವಣೆಯಲ್ಲಿ ಕೊರಮ ಜನಾಂಗದ ಅಭಿವೃದ್ಧಿಗೆ ನೀಡಿರುವ ಸಿಎ ನಿವೇಶನದಲ್ಲಿ ಅಭಿವೃದ್ಧಿಯಾಗದೆ ನೆನೆಗುದಿಗೆ ಬಿದ್ದಿರುವ ಕೊರಮ ಜನಾಂಗದ ವಸತಿ ನಿಲಯ, ಸಮುದಾಯ ಭವನ ಹಾಗೂ ಕೌಶಲ್ಯ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು 3 ಕೋಟಿ ರೂ. ಅನುದಾನ ನೀಡುವಂತೆ ಮಾಡಿದ ಮನವಿಗೆ ಸ್ಪಂದಿಸಿದ ಸಚಿವರು, ಪರಿಶಿಷ್ಟ ಜಾತಿ ಕೊರಮ, ಕೊರಚ(ಕುಳುವ) ಜನಾಂಗದ ಅಭಿವೃದ್ಧಿಗೆ ಬದ್ಧನಾಗಿದ್ದು, ನೆನೆಗುದಿಗೆ ಬಿದ್ದಿರುವ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡಲಾಗುವುದು ಎಂದರು.

2001ರಲ್ಲಿ ಕೊರಮ ಜನಾಂಗಕ್ಕೆ ನೀಡಿದ ಸಿಎ ನಿವೇಶದಲ್ಲಿ ವಿದ್ಯಾರ್ಥಿ ನಿಲಯ, ಸಮುದಾಯ ಭವನ ಹಾಗೂ ಕೌಶಲ್ಯ ತರಬೇತಿ ಕೇಂದ್ರ ನಿರ್ಮಾಣಕ್ಕೆ 2 ಕೋಟಿ ರೂ. ಅನುದಾನ ಘೋಷಣೆ ಮಾಡಿದ್ದು, ಅದರಲ್ಲಿ 50 ಲಕ್ಷಗಳು ಮಾತ್ರ ಬಿಡುಗಡೆಯಾಗಿರುವುದು ಗಮನಕ್ಕೆ ಬಂದಿದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಕಾಮಗಾರಿ ಪೂರ್ಣಗೊಳಿಸಲು ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

26ನೇ ವರ್ಷದ ಸವಿನೆನಪು



ನಿಮ್ಮ ಆತ್ಮಕ್ಕೆ ಚಿರಶಾಂತಿ ಬಯಸುವವರು
ಸರೋಜಮ್ಮ, ಡಿ.ವಿಷಕಂಠೇಗೌಡ ಮತ್ತು ಕುಟುಂಬ ವರ್ಗದವರು
ಬೆಳಗೊಳ

ಬಿ.ವಿ.ರಾಜೇಂದ್ರಕುಮಾರ್
ನಿಧನ: 09.09.1998 ಬೆಳಗೊಳ

14ನೇ ವರ್ಷದ ಸವಿನೆನಪು



ದಿ|| ಜೆ.ನಂಜಯ್ಯ (ಪಾಪಣ್ಣ)
ಕುರುಬಾರಹಳ್ಳಿ

ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಪತ್ನಿ ಶ್ರೀಮತಿ ಪುಟ್ಟತಾಯಮ್ಮ ಕೆ. ಮತ್ತು ಕುಟುಂಬವರ್ಗ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಲಕ್ಷ್ಮಮ್ಮ

ನಿಧನ: 30.08.2024

ಮೃತರ ಹಾಲು ತುಪ್ಪ ಕಾರ್ಯವನ್ನು ದಿ. 9.9.2024 ಹಾಗೂ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 10-9-2024 ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಜಯನಗರ (ಮಳಲವಾಡಿ)ಯ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖಿತಪ್ತರು:
ಶ್ರೀ.ಟಿ. ಗೋವಿಂದರಾಜು ಮತ್ತು ಕುಟುಂಬ ಹಾಗೂ ಶ್ರೀಮತಿ ರೂಪಕೃಷ್ಣ ಮತ್ತು ಕುಟುಂಬದವರು

ಸಾರ್ವಜನಿಕ ಪ್ರಕಟಣೆ


ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಭೈರಪ್ಪ ರವರ ಮಗ ಶ್ರೀ ಕೆ.ಬಿ. ಲಿಂಗರಾಜು ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಅಣಗಳ್ಳಿ ಗ್ರಾಮ ದಲ್ಲಿರುವ ಸರ್ವೆ ನಂ. 102/3 ರಲ್ಲಿರುವ ಒಟ್ಟು ವಿಸ್ತೀರ್ಣ 01 ಎಕರೆ 02 ಗುಂಟೆ ಪೈಕಿ 09 ಗುಂಟೆ, 11 ಇ ನಕ್ಷೆಯಂತೆ ಇರುವ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ಸರ್ವೆ ನಂ. 102/3 ರ ಉಳಿಕೆ ಜಮೀನು, ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ಸರ್ವೆ ನಂ. 102/1 ರಲ್ಲಿ ವೇಣು ಗೋಪಾಲ್ ರವರ ಜಮೀನು ಮತ್ತು ದಕ್ಷಿಣಕ್ಕೆ: ಸರ್ವೆ ನಂ. 102/3 ರ ಉಳಿಕೆ ಜಮೀನು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ನಿಧನ



ಡಾ|| ಚಂದ್ರಶೇಖರ್

Former professor of OBG, MMC & RI and JSS Medical College.

ಜನನ: 15/07/1949 - ಮರಣ: 07/09/2024

ದಿ.9.9.2024 ರಂದು ಬೆಳಿಗ್ಗೆ 10 ಗಂಟೆಗೆ ಇವರ ಸ್ವಗೃಹ ಸೃಷ್ಟಿ ಸಾಲಿಗ್ರಾಮ ಅಪಾರ್ಟ್‌ಮೆಂಟ್, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು–05 ರಲ್ಲಿ ಕ್ರಿಯಾ ವಿಧಿಯನ್ನು ಏರ್ಪಡಿಸಲಾಗಿದೆ ಹಾಗೂ ಅಂತಿಮ ಕ್ರಿಯೆಯನ್ನು ಮಧ್ಯಾಹ್ನ 2 ಗಂಟೆಗೆ ವಿದ್ಯಾರಣ್ಯಪುರಂ, ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖಿತಪ್ತರು:
ಶ್ರೀಮತಿ ರತ್ನ ಚಂದ್ರಶೇಖರ್ ಮತ್ತು ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರುಗಳಾದ, ಹಾಲಿ ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿರುವ [1] ಶ್ರೀ ನರೇಂದ್ರ ಶಶಿಭೂಷಣ್ ಚಂದ್ರಶೇಖರ್, [2] ಶ್ರೀ ಅರವಿಂದ್ ಎಸ್. ಚಂದ್ರಶೇಖರ್ ಮತ್ತು [3] ಕುಮಾರಿ. ಚೇತನ ಚಂದ್ರಶೇಖರ್ ರವರುಗಳು ತಮ್ಮ ಖಾಸಾ ತಂದೆಯವರಾದ ಡಾ. ಜೆ.ಇ. ಚಂದ್ರಶೇಖರ್ ರವರಿಗೆ ಸಾಮಾನ್ಯ ಅಧಿಕಾರ ಪತ್ರವನ್ನು ನೀಡಿದ್ದು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಮೂಲ ಮಾಲೀಕರುಗಳಿಂದ ಸಾಮಾನ್ಯ ಅಧಿಕಾರ ಪಡೆದಿರುವ, ಡಾ. ಜೆ.ಇ. ಚಂದ್ರಶೇಖರ್ ರವರಿಂದ ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ದೇವರಾಜ ಮೊಹಲ್ಲಾ, ಜಯಲಕ್ಷ್ಮಿಪುರಂ, 3ನೇ ಬ್ಲಾಕ್, [ಪಡುವಾರ ಹಳ್ಳಿ] 5ನೇ ಮುಖ್ಯ ರಸ್ತೆ ಯಲ್ಲಿರುವ ಒಟ್ಟುಗೂಡಿಸಲಾದ ಸ್ವತ್ತಿನ ಸಂಖ್ಯೆ 48. [ಹಳೇ ನಂ. 48/ಎ, 48/ಬಿ ಮತ್ತು 48/ಸಿ] ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 150 ಅಡಿ ಮತ್ತು ಉತ್ತರ–ದಕ್ಷಿಣ: [100 ಅಡಿ + 88 ಅಡಿ] / 2. ಒಟ್ಟು ವಿಸ್ತೀರ್ಣ: 14,100 ಚದರ ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ, ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 37, ಉತ್ತರಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 47 ಮತ್ತು ದಕ್ಷಿಣಕ್ಕೆ: ರಸ್ತೆ, ಇದರಲ್ಲಿರತಕ್ಕ ಕಟ್ಟಡ. [ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಿಐಡಿ ನಂ. 87287 ಮತ್ತು ವಾರ್ಡ್ ನಂ. 19].

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ(ನಿ), ಮೈಸೂರು.

#1265, 2ನೇ ಮುಖ್ಯ ರಸ್ತೆ, ಕುತ್ತೇತ್ತೂರು ಸೀತಾರಾಮ್ ರಾವ್ ಭವನ
ಕೃಷ್ಣಮೂರ್ತಿಪುರಂ, ಮೈಸೂರು. ದೂ: 0821-2568528

2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರ ಬಂಧುಗಳೇ, ಮೇಲ್ಕಂಡ ಸಂಘದ 2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 10-09-2024 ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಬಿ.ಎನ್.ರಸ್ತೆ, ಸಬರ್ಬನ್ ಬಸ್ ಸ್ಟ್ಯಾಂಡ್ ಎದುರು ಇರುವ **ಹೋಟೆಲ್ ಪೈ ವಿಸ್ತಾ** ಆವರಣದಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ನಾರಾಯಣ ವಿ ಹೆಗಡೆ** ಯವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಾಮಾನ್ಯ ಸಭೆಯ ನೋಟೀಸ್ ತಲುಪದೇ ಇದ್ದ ಸದಸ್ಯರು ಇದನ್ನೇ ನೋಟೀಸ್ ಎಂದು ಪರಿಗಣಿಸಿ ಸಭೆಗೆ ಆಗಮಿಸಬೇಕಾಗಿ ವಿನಂತಿ.

ಸ್ಥಳ : ಮೈಸೂರು
ದಿನಾಂಕ: 09-09-2024

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಎಂ.ಅನಿತ, ಮುಖ್ಯ ಕಾರ್ಯನಿರ್ವಹಣಾಧಿಕಾರಿ


ಸ್ವಚ್ಛ ಭಾರತದ ರೂವಾರಿಗಳು, ಹಸಿರು ಮೈಸೂರಿನ ಹರಿಕಾರರು
ಸಹಕಾರಿ ಧುರೀಣರು ಹಾಗೂ ಸಮಾಜ ಸೇವಕರು ಸ್ನೇಹಜೀವಿಯಾದ

ಹೆಚ್.ವಿ. ರಾಜೀವ್ ಅಣ್ಣನವರಿಗೆ

ಅಧ್ಯಕ್ಷರು, ಜಿಲ್ಲಾ ಸಹಕಾರಿ ಯೂನಿಯನ್ ಹಾಗೂ
ಮಾಜಿ ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು







ಹೆಚ್ . ವಿ. ರಾಜೀವ್ ರವರು
ಮಾಜಿ ಅಧ್ಯಕ್ಷರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು

ಕರೀಗೌಡ ಕೆ.ಎಸ್
ಮಾಜಿ ಪಂಚಾಯತ್ ಸದಸ್ಯರು ಹಾಗೂ
ಉದ್ಯಮಿಗಳು : ಎಸ್.ಎಲ್.ವಿ ರೆಡಿ ಮಿಕ್ಸ್ ಕಾಂಕ್ರೀಟ್
ಇಲವಾಲ, ಮೈಸೂರು

ಜೆ ಜಯಂತ್
ಮಾಜಿ ಸದಸ್ಯರು ಹಾಗೂ
ಸಮಾಜಸೇವಕರು

VISMAYA ADVERTISERS